ಏಕಕುಲ ಏಕದೇವ

(ಭಾರತದ ಪ್ರಾಚೀನ ಸಂಸ್ಕೃತಿಯ ನವೀನ ವಿಶ್ಲೇಷಣೆ)

ಪಿ. ಟಿ. ಮುಹಮ್ಮದ್

ಪರಮ ದಯಾಮಯನೂ ಕರುಣಾಳುವೂ ಆದ ಅಲ್ಲಾಹನ ನಾಮದಿಂದ

ಪ್ರಕಾಶಕರ ಮಾತು

ಕೇರಳದ ಪ್ರಖ್ಯಾತ ಇಸ್ಲಾಮೀ ವಿದ್ವಾಂಸ ಹಾಗೂ ಸಂಶೋಧಕ ಟಿ. ಮುಹಮ್ಮದ್ ಅವರು ಮಲಯಾಳದಲ್ಲಿ ರಚಿಸಿದ 'ಒರು ಜಾತಿ ಒರು ದೈವಮ್' ಎಂಬ ಕೃತಿಯನ್ನು ಪಿ. ನೂರ್ ಮುಹಮ್ಮದ್ ಅವರು 'ಏಕಕುಲ ಏಕದೇವ' ಎಂಬ ಹೆಸರಿನಲ್ಲಿ ಕನ್ನಡಕ್ಕೆ ಅನುವಾದಿಸಿದ್ದಾರೆ.

ಏಕದೇವ ವಿಶ್ವಾಸವು ಮಾನವನ ಆಂತರ್ಯದಲ್ಲಿ ರೂಢಮೂಲವಾಗಿರುವ ಪ್ರಕೃತಿ ಸಹಜವಾದ ನಂಬಿಕೆಯಾಗಿದೆ. ಈ ವಾಸ್ತವಿಕತೆಯನ್ನು ಬಹುತೇಕ ಎಲ್ಲರೂ ಬಾಯಿ ಮಾತಿನಿಂದ ಒಪ್ಪುತ್ತಾರೆ. ಆದರೆ ಆಚಾರ ಮತ್ತು ಅನುಸರಣೆಗಳಲ್ಲಿ ಇಂದು ಕಾಣುತ್ತಿರುವ ವೈವಿಧ್ಯತೆಗಳು ಪ್ರಸ್ತುತ ವಿಶ್ವಾಸದಿಂದ ಮಾನವರು ಎಷ್ಟು ದೂರ ಸರಿದಿದ್ದಾರೆ ಎಂಬುದಕ್ಕೆ ನಿದರ್ಶನವಾಗಿದೆ. ಇದಕ್ಕೆ ಕಾರಣಗಳಾವುವು?

ಮಾನವನ ವಿಶ್ವಾಸಕ್ಕೆ ಸಂಬಂಧಿಸಿದ ಈ ಪ್ರಮುಖ ವಿಷಯದ ಬಗ್ಗೆ ಜಿಜ್ಞಾಸೆ ನಡೆಸಿ ಸಾರ್ಥಕ ಜೀವನ ಸಾಗಿಸುವ ಹಂಬಲ ಸಾರ್ವತ್ರಿಕವಾಗಬೇಕೆಂಬ ನಿರೀಕ್ಷೆಯಿಂದ ಈ ಕೃತಿಯನ್ನು ಪ್ರಕಟಿಸಲಾಗಿದೆ. ಇದು ಈ ಕೃತಿಯ ಏಳನೆಯ ಆವೃತ್ತಿ.

ಏಕದೇವ ವಿಶ್ವಾಸ ಮತ್ತು ಸೆಮಿಟಿಕ್ ಪ್ರವಾದಿಗಳ ಸಂದೇಶಗಳಲ್ಲಿ ಭಾರತೀಯ ಸಂಸ್ಕೃತಿಯ ಮೂಲವನ್ನು ಹೇಗೆ ಗುರುತಿಸಬಹುದೆಂದು ಈ ಕೃತಿಯಲ್ಲಿ ಸ್ಪಷ್ಟಪಡಿಸಲಾಗಿದೆ. ಸಂಸ್ಕೃತಿಗಳ ತುಲನಾತ್ಮಕ ಅಧ್ಯಯನದಲ್ಲಿ ಲೇಖಕನ ವಿಶ್ಲೇಷಣೆಯು ನೂತನವೂ ತರ್ಕ ಬದ್ಧವೂ ಆಗಿದೆ.

ಏಕದೇವ ವಿಶ್ವಾಸದ ನೈಜ ಸ್ವರೂಪವನ್ನು ಮತ್ತು ಭಾರತೀಯ ಸಂಸ್ಕೃತಿಯಲ್ಲಿ ಅದರ ಇತಿಹಾಸವನ್ನು ತಿಳಿಯ ಬಯಸುವವರಿಗೆ ಈ ಕೃತಿಯು ಸಹಕಾರಿಯಾಗುವುದು.

ಶಾಂತಿ ಪ್ರಕಾಶನ

ಅನುಕ್ರಮಣಿಕೆ

ಪುಟ

ಏಕಕುಲ ಏಕದೇವ

ಜನರೇ ನಾವು ನಿಮ್ಮನ್ನು ಒಬ್ಬ ಪುರುಷ ಮತ್ತು ಒಬ್ಬ ಸ್ತ್ರೀಯಿಂದ ಉಂಟು ಮಾಡಿದೆವು. ತರುವಾಯ ನೀವು ಪರಸ್ಪರ ಪರಿಚಯ ಪಟ್ಟುಕೊಳ್ಳಲಿಕ್ಕಾಗಿ ನಿಮ್ಮ ಜನಾಂಗಗಳನ್ನೂ ಗೋತ್ರಗಳನ್ನೂ ಮಾಡಿದೆವು. ನಿಮ್ಮ ಪೈಕಿ ಅತ್ಯಧಿಕ ಧರ್ಮನಿಷ್ಠನೇ ವಾಸ್ತವದಲ್ಲಿ ಅಲ್ಲಾಹನ ಬಳಿ ಅತಿ ಹೆಚ್ಚು ಗೌರವಕ್ಕೆ ಪಾತ್ರನು.[1]

ಏಕ ಮಾನವಕುಲ

ಪಶ್ಚಿಮ ಏಶ್ಯಾಖಂಡದ ಮಧ್ಯ ಭಾಗದಲ್ಲಿ 'ಅರ್ಮೇನಿಯಾ' ಎಂಬ ಉನ್ನತ ಪರ್ವತವಿದೆ. ಆ ಪರ್ವತದ ದಕ್ಷಿಣ ಭಾಗದಲ್ಲಿ ಎರಡು ನದಿಗಳು ಹುಟ್ಟಿ ಪ್ರತ್ಯೇಕ ಕವಲುಗಳಾಗಿ ಹರಿಯುತ್ತವೆ. ಆ ಎರಡು ನದಿಗಳು 'ಷಟ್ಟನ್ ಅರಬ್' (ಶತ್ತುಲ್ ಅರಬ್) ಎಂಬಲ್ಲಿ ಸಂಗಮವಾಗಿ, ಏಕ ನದಿಯಾಗಿ ಕೊನೆಗೆ ಪರ್ಷಿಯನ್ ಕೊಲ್ಲಿಯನ್ನು ಸೇರುತ್ತವೆ. ಈ ನದಿಗಳನ್ನು ಅರಬರು 'ಪುರಾತ್' ಮತ್ತು 'ದಜ್ಲ:' ಎಂದೂ ಆಂಗ್ಲರು ಅವುಗಳನ್ನು ಯೂಪ್ರಟಿಸ್ ಮತ್ತು ಟೈಗ್ರಿಸ್ ಎಂದೂ ಕರೆಯುತ್ತಾರೆ. ಅವುಗಳ ಮಧ್ಯಭಾಗದ ಭೂಪ್ರದೇಶಕ್ಕೆ ಗ್ರೀಕ್ ಭೌತಶಾಸ್ತ್ರಜ್ಞರು 'ಮೆಸೆಪೊಟೇಮಿಯಾ' ಎಂದು ನಾಮಕರಣ ಮಾಡಿದರು. ನದಿಗಳ ಮಧ್ಯದಲ್ಲಿ ಇರುವ ಭೂಪ್ರದೇಶವೆಂದೇ ಅದರ ಅರ್ಥ. ಇಂದು ಆ ಪ್ರದೇಶವು 'ಇರಾಕ್' ಎಂಬ ಹೆಸರಿನಲ್ಲಿ ಪ್ರಸಿದ್ಧಗೊಂಡಿದೆ.

ಲೋಕಕ್ಕೆ ತಿಳಿದಿರುವ ಅತಿ ಪ್ರಾಚೀನ ಮಾನವ ಸಂಸ್ಕೃತಿಯು ಮೆಸೆಪೊಟೇಮಿಯಾದಲ್ಲಿ ಹುಟ್ಟಿ ಬೆಳೆಯಿತೆಂದು ಊಹಿಸಲಾಗುತ್ತದೆ. ಆಧುನಿಕ ಚರಿತ್ರೆಕಾರರು ಅದನ್ನು 'ಸುಮೇರಿಯನ್ ಸಂಸ್ಕೃತಿ'ಯೆಂದು ಕರೆಯುತ್ತಾರೆ. ಅದರ ಕಾಲವು ಸುಮಾರು ಕ್ರಿ.ಪೂ. 6000ದಿಂದ 7000 ವರ್ಷವಾಗಿರಬಹುದೆಂದು ಪ್ರಾಚೀನ ಇತಿಹಾಸ ಸಂಶೋಧಕರು ಅಂದಾಜಿಸಿದ್ದಾರೆ. ಪ್ರಸಿದ್ಧ ಆಂಗ್ಲ ಇತಿಹಾಸ ತಜ್ಞ ಎಚ್. ಜಿ. ವೆಲ್ಸ್‌ರವರು ತನ್ನ 'ಲೋಕ ಚರಿತ್ರೆಯ ಸಂಗ್ರಹ' ಎಂಬ ಗ್ರಂಥದಲ್ಲಿ ಈ ರೀತಿ ಉಲ್ಲೇಖಿಸಿರುವರು.

---

1. ಪವಿತ್ರ ಕುರ್‌ಆನ್, 49:13

"ಕ್ರಿ.ಪೂ. 6000 ಅಥವಾ 7000 ವರ್ಷಗಳ ಸುಮಾರಿಗೆ ಏಷ್ಯಾದ ಫಲವತ್ತಾದ ಪ್ರದೇಶಗಳಲ್ಲಿ ಮತ್ತು ನೈಲ್ ನದೀ ತೀರದಲ್ಲಿ ಪೆರುನಾಗರಿಕತೆಗೆ ಸಮಾನವಾದ ಸಾಮಾನ್ಯ ಸಂಸ್ಕೃತಿಯ ಮಾನವ ಸಮುದಾಯಗಳು ಆಗಿ ಹೋಗಿವೆ... ಆದರೆ ಈಜಿಪ್ಟ್‌ನಲ್ಲಿ ಮತ್ತು ಮೆಸೆಪೊಟೇಮಿಯಾದ (ಇರಾಕ್) ದಕ್ಷಿಣ ಭಾಗಗಳಲ್ಲಿ ಪ್ರಥಮವಾಗಿ ನಗರ, ವಸತಿ, ನೀರು ಸರಬರಾಜು ವ್ಯವಸ್ಥೆ ಮತ್ತು ಸಾಮಾನ್ಯ ಹಳ್ಳಿಗಿಂತ ಮುಂದುವರಿದ ಸಾಮಾಜಿಕ ಸಂಪ್ರದಾಯ ಗಳ ಕುರುಹುಗಳು ಕಂಡು ಬಂದಿವೆ. ಆ ಕಾಲದಲ್ಲಿ ಯೂಫ್ರಟಿಸ್ ಮತ್ತು ಟೈಗ್ರಿಸ್ ನದಿಗಳು ಪ್ರತ್ಯೇಕವಾಗಿ ಪರ್ಷಿಯನ್ ಕೊಲ್ಲಿಯನ್ನು ಸೇರುತ್ತಿದ್ದವು. ಈ ಎರಡು ನದಿಗಳ ಮಧ್ಯ ಭಾಗದ ಭೂಪ್ರದೇಶಗಳಲ್ಲಿ ಸುಮೇರಿಯನರು ಪ್ರಥಮವಾಗಿ ಅವರ ಪಟ್ಟಣಗಳನ್ನು ನಿರ್ಮಿಸಿದರು."[2]

"ಈ ಸುಮೇರಿಯನರ ದೇಹ ಪ್ರಕೃತಿಯನ್ನು ಆಧುನಿಕ ಪ್ರಾಚ್ಯ ವಸ್ತು ಸಂಶೋಧಕರು ಗುರುತಿಸಿದ್ದಾರೆ. ಅವರು ಕಂದು ಮೈಬಣ್ಣದವರಾಗಿದ್ದು ಮುಂದಕ್ಕೆ ಬಾಗಿದ ಮೂಗುಳ್ಳವ ರಾಗಿದ್ದರು."[3]

ಪ್ರಸ್ತುತ ಸುಮೇರಿಯನ್ ಜನತೆಯ ಇತಿಹಾಸಕ್ಕೆ 8000 ಅಥವಾ 9000 ವರ್ಷಗಳ ಪ್ರಾಚೀನತೆಯಿದೆಯೆಂದು ಇಂದಿನ ಇತಿಹಾಸಗಾರರೇ ನಿರ್ಧರಿಸಿದ್ದಾರೆ. ಆದರೆ ಸುಮೇರಿಯಾ ಪುರಾಣದಂತೆ ಅವರ ಇತಿಹಾಸವು ಇನ್ನೂ ಹೆಚ್ಚು ಪುರಾತನವಾಗಿದೆ. ಕ್ರಿ.ಪೂ. 2300 ವರ್ಷಗಳ ಸುಮಾರಿಗೆ ಸುಮೇರಿಯನರ ಕೆಲವು ಇತಿಹಾಸ ತಜ್ಞರು ನಾಡಿನ ಪ್ರಾಚ್ಯ ಇತಿಹಾಸದ ಕುರಿತು ಒಂದು ಸಂಶೋಧನೆಯನ್ನು ನಡೆಸಿದರು. ಅವರ ಶೋಧನೆಯಂತೆ ಜಲಪ್ರಳಯಕ್ಕಿಂತ ಮೊದಲು ಅಲ್ಲಿ ಹತ್ತು ರಾಜವಂಶಗಳು 4,32,000 ವರ್ಷಗಳ ಕಾಲ ಆಳ್ವಿಕೆ ನಡೆಸಿವೆ.[4] ಹಾಗೆಯೇ ಸುಮಾರು ಕ್ರಿ.ಪೂ. 400ರಲ್ಲಿ ಬಾಬಿಲೋನಿಯಾದ ಓರ್ವ ನಗರ ಪುರೋಹಿತನಾಗಿದ್ದ 'ಬೆರಾಸಸ್' (Berasus) ಆ ದೇಶದ ಒಂದು ಚರಿತ್ರೆ ಯನ್ನು ಬರೆದಿದ್ದನು. ಆತನ ಮೂಲ ಗ್ರಂಥವು ನಶಿಸಿದ್ದರೂ ಅದರಲ್ಲಿ ಅಡಕವಾಗಿದ್ದ ವಿಷಯಗಳನ್ನು ಯಹೂದಿ ಮತ್ತು ಯವನ ಇತಿಹಾಸಗಾರರು ತಂತಮ್ಮ ಗ್ರಂಥಗಳಲ್ಲಿ ಉದ್ಧರಿಸಿರುವರು. ಬೆರಾಸಸ್ ಕೂಡಾ ಪ್ರಸ್ತುತ ಅಂಕಿ ಅಂಶವನ್ನೇ ಒಪ್ಪಿದ್ದರು.[5]

---

2. & 3. A Short history of the world by H.G. Wells.

4. ಶ್ರೀ ಕೃಷ್ಣ ಚೈತನ್ಯರವರ 'ಮೆಸೆಪೊಟೇಮಿಯಾ ಸಾಹಿತ್ಯ ಚರಿತ್ರೆ ಪುಟ 13ರಲ್ಲಿ ಹೀಗೆ ಹೇಳಿದೆ: "ಸುಮೇರಿಯನ್ ಸಂಸ್ಕೃತಿಯು ಪ್ರಾಚೀನವಾದ ಬಳಿಕ ಕ್ರಿ.ಪೂ. 2310ರಲ್ಲಿ - ಇತಿಹಾಸತಜ್ಞರು ದೇಶದ ಪ್ರಾಚೀನ ಚರಿತ್ರೆಯ ಕುರಿತು ಒಂದು ಸಂಶೋಧನೆ ನಡೆಸಿದರು. ಅವರಿಂದ ಎಲ್ಲ ರಾಜರ ಒಂದು ತಪಸೀಲು ನಮಗೆ ದೊರೆತಿದೆ. ಆದರೆ ಈ ರಾಜರ ಆಳ್ವಿಕೆಯ ಕಾಲಾವಧಿಯ ಅಂಕಿಅಂಶಗಳು ಕೇವಲ ಕಾಲ್ಪನಿಕವಾಗಿವೆ. ಆ ಅಂಕಿಅಂಶಗಳ ಪ್ರಕಾರ ಆ ರಾಜಂದಿರೆಲ್ಲರೂ ಪ್ರಳಯಕ್ಕಿಂತ ಮುಂಚೆ ಒಟ್ಟು ಸುಮಾರು 4,32,000 ವರ್ಷಗಳ ಕಾಲ ರಾಜ್ಯವಾಳಿದ್ದರು."

5. ಮೌಲಾನಾ ಸಯ್ಯದ್ ಸುಲೈಮಾನ್ ನದ್ವಿಯವರ ಅರ್ದುಲ್ ಕುರ್‌ಆನ್ (ಒಂದು ಇತಿಹಾಸ ಸಂಶೋಧನಾ ಗ್ರಂಥ) ಉರ್ದು ಮೂಲ ಭಾಗ - 1; ಪುಟ 135ರಲ್ಲಿ ಬೈರಾಸಸ್‌ನ ಪಟ್ಟಿಯನ್ನು ಹೀಗೆ ಉದ್ಧರಿಸಿದ್ದಾರೆ.

ಪ್ರಸ್ತುತ ಸಂಖ್ಯೆಗೆ ಒಂದು ಸೊನ್ನೆ ಸೇರಿದರೆ ಭಾರತೀಯ ಪುರಾಣದಂತೆ ಒಂದು ಮನ್ವಂತರವಾಗುತ್ತದೆ. ಪುರಾಣ ಪ್ರಕಾರ ಒಬ್ಬ ಮನುವಿನ ಆಯುಷ್ಯವು 43,20,000 ಮನುಷ್ಯ ವರ್ಷಗಳಾಗಿವೆ. ಬಾಬಿಲೋನಿಯನ್ ಪುರಾಣದಂತೆ ಪ್ರಳಯಕ್ಕಿಂತ ಮೊದಲು 4,32,000 ವರ್ಷಗಳು. ಒಟ್ಟಿನಲ್ಲಿ ಎರಡೂ ಲೆಕ್ಕಾಚಾರಗಳಿಗೆ ಪರಸ್ಪರ ಅಜ್ಞಾತ ಸಂಬಂಧ ವಿರಬೇಕೆಂದೂ ಪ್ರತಿ ಮಾಡಿದಾಗ ಪ್ರಮಾದವಶಾತ್ ಒಂದು ಸೊನ್ನೆ ಹಾಕುವುದರಲ್ಲಿ ಹೆಚ್ಚು ಕಮ್ಮಿಯಾಗಿರಬಹುದೆಂದೂ ಕೆಲವರು ಅಭಿಪ್ರಾಯಪಟ್ಟಿರುವರು.[6] ಈ ಅಭಿಪ್ರಾಯವನ್ನು ನಿರಾಧಾರವೆನ್ನುವಂತಿಲ್ಲ.

ಹೇಗಿದ್ದರೂ ಇಂತಹ ಲೆಕ್ಕಾಚಾರಗಳು ಮತ್ತು ಚರಿತ್ರೆಗಳು ಇಂದಿನ ಇತಿಹಾಸ ವಿದ್ಯಾರ್ಥಿ ಗಳಿಗೆ ಸ್ವೀಕಾರಾರ್ಹವಲ್ಲ. ಪ್ರಾಚ್ಯವಸ್ತು ಸಂಶೋಧಕರು ಸ್ಪಷ್ಟಪಡಿಸುವ ಕಾಲಗಣನೆಯನ್ನು ಮಾತ್ರ ಅವರು ಒಪ್ಪುತ್ತಾರೆ. ಅಂತೆಯೇ ಹೆಚ್ಚು ನಿಖರ ಮತ್ತು ವಸ್ತುನಿಷ್ಠವಾದ ಅಂದಾಜನ್ನು ಪರಿಗಣಿಸಿದರೂ ಸುಮೇರಿಯನ್ ನಾಗರಿಕತೆಯು 8000 ವರ್ಷ ಪುರಾತನವಾದುದೆಂದು ಊಹಿಸ ಬಹುದು. 'ಮೆಸೆಪೊಟೇಮಿಯಾ' ಸಾಹಿತ್ಯದ ಇತಿಹಾಸಗಾರರಾದ ಶ್ರೀಕೃಷ್ಣ ಚೈತನ್ಯರು ಬರೆದಿರುವುದನ್ನು ನೋಡಿರಿ:

"ಕ್ರಿ.ಪೂ. 5262ರಲ್ಲಿ ನಿಪ್ಪೂರಿನಲ್ಲಿ, ಕ್ರಿ.ಪೂ. 4500ರಲ್ಲಿ ಕಿಷಿಲ್‌ನಲ್ಲಿ ಮತ್ತು ಕ್ರಿ.ಪೂ. 3500ರಲ್ಲಿ ಊರ್‌ನಲ್ಲಿ ರಾಜವಂಶಗಳು ಆಳ್ವಿಕೆ ನಡೆಸಿದ್ದುವೆಂಬುದಕ್ಕೆ ಆಧಾರವಿದೆ."[7]

ಪ್ರವಾದಿ ನೂಹ್‌ರವರು(ಅ) ಬೈಬಲ್ (ಹಳೆಯ ಒಡಂಬಡಿಕೆ) ಮತ್ತು ಕುರ್‌ಆನಿನಲ್ಲಿ ಮಾನವ ಸಮುದಾಯದ ಪ್ರಥಮ ಸುಧಾರಕರೆಂದು ವರ್ಣಿಸಲ್ಪಟ್ಟ ಮಹಾ ಪುರುಷರಾಗಿರುವರು.

ಸಂಖ್ಯೆ	ರಾಜವಂಶಗಳು	ವರ್ಷ
10	ಜಲಪ್ರಳಯಕ್ಕಿಂತ ಹಿಂದಿನ ರಾಜವಂಶ	4,32,000
86	ಜಲಪ್ರಳಯಾನಂತರದ ರಾಜವಂಶ	34,000
8	ದರೋಡೆಕೋರರಾದ ಮಿಡಿಯಾ ರಾಜವಂಶ	224
11	.... ರಾಜವಂಶ	448
49	ಕಾಲ್ಡಿಯಾ ರಾಜವಂಶ	458
9	ಅರೇಬಿಯಾ ರಾಜವಂಶ	225

6. ಪೋಳ್ಕರ ರಾಫಿಯವರ 'ಕಲಿಯುಗ' ಪುಟ 185ರಲ್ಲಿ ವಿಲ್ ಡುರಾಂಟ್‌ರ (Our Oriental heritage)ನ್ನು ಉಲ್ಲೇಖಿಸಿ ಹೀಗೆ ಹೇಳಿದ್ದಾರೆ:

"ಸುಮೇರಿಯಾದ ಇತಿಹಾಸತಜ್ಞರು ತಮ್ಮ ದೇಶದ ಒಂದು ಪ್ರಾಚೀನ ಚರಿತ್ರೆಯನ್ನು ರಚಿಸಿದ್ದರು. ಅದರಂತೆ ಒಂದು ಪರಂಪರೆಯ ಆಳ್ವಿಕೆಯ ಕಾಲವು-ಜಲ ಪ್ರಳಯಕ್ಕಿಂತ ಹಿಂದಿನದು-4,32,000 ವರ್ಷಗಳೆಂದು ಬರೆದಿಟ್ಟಿರುವರೆಂದೂ ವಿಲ್ ಡುರಾಂಟ್ ಹೇಳುತ್ತಾರೆ. ಈ ಸಂಖ್ಯೆಗೆ ಒಂದು ಸೊನ್ನೆ ಸೇರಿಸಿದರೆ ಭಾರತೀಯ ಪುರಾಣದಂತೆ ಒಂದು ಮನ್ವಂತರ (ಮನುವಿನ ಆಯುಷ್ಯ)ವಾಗುತ್ತದೆ."

7. 'ಮೆಸೆಪೊಟೇಮಿಯನ್ ಸಾಹಿತ್ಯ ಚರಿತ್ರೆ' -ಪುಟ 14.

ಇಮಾಮ್ ಬುಖಾರಿ ಮತ್ತು ಇಮಾಮ್ ಮುಸ್ಲಿಮ್ ಉಲ್ಲೇಖಿಸಿದ ಒಂದು ಪ್ರವಾದಿ ವಚನದಲ್ಲಿ ನೂಹ್‌ರನ್ನು(ಅ) ಪ್ರಥಮ ಪ್ರವಾದಿ (ಅವ್ವಲುರ್ರಸೂಲ್) ಎಂದು ವರ್ಣಿಸಲಾಗಿದೆ.[8] ಈ ಮಹಾ ಪುರುಷರ ಧರ್ಮ ಪ್ರಚಾರ ಕೇಂದ್ರವು ಮೆಸೆಪೊಟೇಮಿಯಾ ಆಗಿತ್ತೆಂದು ಆಧುನಿಕ ಮುಸ್ಲಿಮ್ ವಿದ್ವಾಂಸರಲ್ಲಿ ಪ್ರಮುಖರಾದ ಮೌಲಾನಾ ಅಬುಲ್ ಕಲಾಮ್ ಆಝಾದ್‌ರವರು ತನ್ನ ಕುರ್‌ಆನ್ ವ್ಯಾಖ್ಯಾನ ಗ್ರಂಥದಲ್ಲಿ ಆಧಾರಗಳ ಸಹಿತ ಸಮರ್ಥಿಸಿರುವರು.[9] ಆದುದರಿಂದ ಮಹಾಪುರುಷ ನೂಹ್‌ರವರು(ಅ) ಓರ್ವ ಸುಮೇರಿಯನರಾಗಿದ್ದರೆಂಬ ಊಹೆ ತರ್ಕಬದ್ಧವಾಗಿದೆ. ಮಾತ್ರವಲ್ಲ ಬೈಬಲ್ ಮತ್ತು ಕುರ್‌ಆನ್‌ನಲ್ಲಿ ಪ್ರತಿಪಾದಿಸಿರುವ ನೂಹ್‌ರ(ಅ) ಕಾಲದ ಜಲಪ್ರಳಯದ ಘಟನೆಯು ಇರಾಕ್‌ನಲ್ಲಿ ಅಗೆದು ತೆಗೆದ ಪ್ರಾಚ್ಯ ಶಿಲಾಫಲಕಗಳಲ್ಲಿ ಉಲ್ಲೇಖಿತವಾಗಿವೆ. ಶ್ರೀಕೃಷ್ಣ ಚೈತನ್ಯರು ಈ ರೀತಿ ಬರೆದಿದ್ದಾರೆ:

"ಬಾಬಿಲೋನಿಯನ್ ಸಾಹಿತ್ಯದಲ್ಲಿ ಲೋಕವನ್ನು ಮತ್ತು ಮಾನವಕುಲವನ್ನೇ ನಾಶಗೊಳಿಸಿದ ಜಲಪ್ರಳಯದ ಅನೇಕ ವಿವರಣೆಗಳಿವೆ. ಅವುಗಳಲ್ಲಿ ಕೊನೆಯದನ್ನು ಗಿಲ್‌ಗಮೆಷನ ಸಾಹಸಗಳ ಕವಿತೆಗಳಲ್ಲಿ ಸೇರಿಸಲಾಗಿದೆ."[10]

ಇತಿಹಾಸ ಪ್ರಸಿದ್ಧವಾದ ಆ ಭಯಂಕರ ಜಲಪ್ರಳಯದಲ್ಲಿ ನೂಹ್(ಅ), ಅವರ ಸಂಗಡಿಗರು ಹಾಗೂ ಕೆಲವು ಪ್ರಾಣಿಗಳು ಮಾತ್ರವೇ ಬದುಕಿ ಉಳಿದುವೆಂದು ಬೈಬಲ್ ಹೇಳುತ್ತದೆ. ದುಷ್ಟ ಜನರೆಲ್ಲರೂ ನೆರೆಯಲ್ಲಿ ಮುಳುಗಿ ಸತ್ತರು. ನೂಹ್(ಅ) ಮತ್ತು ಸಂಗಡಿಗರು ಒಂದು ನೌಕೆಯಲ್ಲಿ ಅಥವಾ ಹಡಗಿನಲ್ಲಿ ಕುಳಿತು ರಕ್ಷಣೆ ಪಡೆದರು. ಜಲಪ್ರಳಯದ ಬಳಿಕ ಆ ಹಡಗು ಒಂದು ಪರ್ವತ ಶಿಖರದಲ್ಲಿ ತಂಗಿತು. ಆ ಪರ್ವತವನ್ನು 'ಅರಾರಾತ್' ಎಂದು ಬೈಬಲ್ ಹೇಳುತ್ತದೆ. ಕುರ್‌ಆನ್‌ನಲ್ಲಿ ಅದನ್ನು 'ಅಲ್‌ಜೂದಿ' ಎಂದು ಕರೆಯಲಾಗಿದೆ. ಇವೆರಡು ಪರಸ್ಪರ ಭಿನ್ನವಲ್ಲವೆಂದೂ ಅದು ಅರ್ಮೇನಿಯಾ ಪರ್ವತವೆಂದೂ ಆಧುನಿಕ ಸಂಶೋಧಕರು ಅಭಿಪ್ರಾಯಪಟ್ಟಿರುವುದಾಗಿ ಮೌಲಾನಾ ಆಝಾದ್‌ರವರು ಸಮರ್ಥಿಸಿರುವರು.[11] ಅದೇನೇ ಆಗಿದ್ದರೂ ಜಲಪ್ರಳಯದ ಬಳಿಕ ನೂಹ್(ಅ) ಮತ್ತು ಸಂಗಡಿಗರು ಮಾತ್ರ ಬದುಕಿ ಉಳಿದಿರುವರೆಂಬ ವಿಷಯದಲ್ಲಿ ಕುರ್‌ಆನ್ ಮತ್ತು ಬೈಬಲ್‌ಗಳು ಸಹಮತ ಹೊಂದಿವೆ.

---

8. ಬುಖಾರಿ ಮುಸ್ಲಿಮ್ ಎಂಬ ಗ್ರಂಥಗಳ 'ಶಫಾಅತ್' ಅಧ್ಯಾಯ ನೋಡಿರಿ.

9. ಮೌಲಾನಾ ಅಬುಲ್ ಕಲಾಮ್ ಆಝಾದ್‌ರವರ 'ತರ್ಜುಮಾನುಲ್ ಕುರ್‌ಆನ್' (ಆಧುನಿಕ ಸಂಶೋಧನೆಗಳ ಹಿನ್ನೆಲೆಯಲ್ಲಿ ಬರೆಯಲ್ಪಟ್ಟ ಕುರ್‌ಆನಿನ ಒಂದು ಉರ್ದು ಅನುವಾದ) ಭಾಗ - 2, ಪುಟ 192, 193 ನೋಡಿರಿ.

10. 'ಮೆಸೆಪೊಟೇಮಿಯನ್ ಸಾಹಿತ್ಯ ಚರಿತ್ರೆ' -ಪುಟ: 49.

11. ತರ್ಜುಮಾನುಲ್ ಕುರ್‌ಆನ್ ಭಾಗ - 2, ಪುಟ: 193ರಲ್ಲಿ ಹೀಗೆ ಬರೆದಿದೆ: "ಅರ್ಮೇನಿಯಾ ಪರ್ವತವು ಅರಾರಾಟ್ ಪ್ರದೇಶದಲ್ಲಿದೆ. ಆದುದರಿಂದ ಬೈಬಲ್ ಆ ಪರ್ವತವನ್ನು ಅರಾರಾತ್ ಕರೆಯಿತು. ಕುರ್‌ಆನಿನಲ್ಲಿ ಹೇಳಿದ 'ಅಲ್‌ಜೂದಿ'ಯು ನೂಹ್‌ರ(ಅ) ನೌಕೆ ತಂಗಿದ ಪರ್ವತದ ಹೆಸರು.

ಇತ್ತೀಚೆಗಿನ ವರೆಗೆ ಜಲಪ್ರಳಯದ ಘಟನೆಯನ್ನು ಯಾವುದೇ ಐತಿಹಾಸಿಕ ಆಧಾರವಿಲ್ಲದ ಧರ್ಮ ಪುರಾಣವೆಂದು ಪರಿಗಣಿಸಲಾಗಿತ್ತು. ಆದರೆ, ಈಗ ಆ ಭಾವನೆ ಸ್ವಲ್ಪ ಬದಲಾಗಿರುವಂತೆ ಕಂಡು ಬರುತ್ತಿದೆ. ಶ್ರೀ ಟಿ.ಸಿ. ಶಂಕರ ಮೆನನ್‌ರವರು ಪ್ರಾಚ್ಯ ವಸ್ತು ಸಂಶೋಧನೆಗೆ ಸಂಬಂಧ ಪಟ್ಟ 'ಶತಮಾನಗಳ ಆಚೆಗಿನ ಶಬ್ದಗಳು' ಎಂಬ ತನ್ನ ಗ್ರಂಥದಲ್ಲಿ ಉಲ್ಲೇಖಿಸಿರುವುದನ್ನು ನೋಡಿರಿ:

"ಜಗತ್ತು ಸಂಪೂರ್ಣವಾಗಿ ಒಂದು ಮಹಾ ಜಲಪ್ರಳಯಕ್ಕೆ ತುತ್ತಾಗಿತ್ತು ಮತ್ತು ನೂಹ್‌ರ(ಅ) ಹಡಗಿನಲ್ಲಿ ಕೆಲವು ಮಾನವರು ಮತ್ತು ಪಶುಪಕ್ಷಿಗಳು ಮಾತ್ರ ಬದುಕುಳಿದರೆಂಬ ಐತಿಹ್ಯವಿದೆ. ಈ ಘಟನೆಗಳು ವಾಸ್ತವಿಕವೆಂಬುದಕ್ಕೆ ಸೂಕ್ತ ಮಾಹಿತಿಗಳು ಈ ತನಕ ದೊರೆತಿರಲಿಲ್ಲ. ಆದರೆ ಇತ್ತೀಚೆಗೆ ಏಷ್ಯಾ ಮೈನರ್‌ನ ಅರಾರಾತ್ (Ararat) ಪರ್ವತ ಶ್ರೇಣಿಯ 6000 ಅಡಿ ಎತ್ತರದ ಒಂದು ಶಿಖರ ಪ್ರದೇಶದಲ್ಲಿ ಹಡಗಿನ ಭಾಗವನ್ನು ಹೋಲುವ, ಬಿಲ್ಲಿನ ಆಕೃತಿಯ ವಸ್ತುವೊಂದು ದೊರೆತಿದೆ. ಈಗ ಅದು ಭೂಮಟ್ಟದಿಂದ ಸ್ವಲ್ಪ ಹೊರಚಾಚಿದ ದಪ್ಪವಾದ ಒಂದು ಗೆರೆಯಂತೆ ಗೋಚರಿಸುತ್ತಿದೆ. ಅದರ ಇತರ ಭಾಗಗಳು ಕಲ್ಲು, ಮಣ್ಣು ಮತ್ತು ಲಾವಾಗಳಿಂದ ತುಂಬಿ ಗಟ್ಟಿಯಾಗಿವೆ. ಆ ಭಾರೀ ಗಾತ್ರದ ಬಿಲ್ಲಿನ ಆಕೃತಿಯು 450 ಅಡಿ ಉದ್ದ ಮತ್ತು 150 ಅಡಿ ಅಗಲವಿರುವ ಒಂದು ತಾವರೆಯ ಎಸಳಿನಂತಿದೆ. ಸುಮಾರು 18 ಅಡಿ ತೋಡಿದಾಗ ಅದರ ತಳಭಾಗವು ಕಂಡು ಬಂತು. ನೂಹ್‌ರ(ಅ) ಹಡಗಿನ ಉದ್ದಳತೆಗಳನ್ನು ನಾವು ಕಥೆಗಳಲ್ಲಿ ಕೇಳಿ ತಿಳಿದಿದ್ದೇವೆ. ಅವು ಈ ಅಳತೆಗೆ ಹೋಲುತ್ತವೆ. ಟರ್ಕಿಯ ವಾಯುಸೇನಾ ವಿಭಾಗದವರು ಮೊಟ್ಟ ಮೊದಲು ಈ ವಸ್ತುವನ್ನು ಪತ್ತೆ ಹಚ್ಚಿದರು. ಅವರು ಸೇನಾ ವಿಭಾಗದ ಸಂಶೋಧನಾಲಯದಲ್ಲಿ ಆ ಬಗ್ಗೆ ಇನ್ನೂ ಹೆಚ್ಚಿನ ಮಾಹಿತಿಗಳನ್ನು ಸಂಗ್ರಹಿಸುತ್ತಿದ್ದಾರೆ."[12]

ಮೆಸೆಪ್ಪೊಟೇಮಿಯಾವು ಪ್ರವಾದಿ ನೂಹ್‌ರ(ಅ) ಧರ್ಮಪ್ರಚಾರ ಕೇಂದ್ರವಾಗಿತ್ತೆಂದು ಇವೆಲ್ಲವೂ ಸ್ಪಷ್ಟಪಡಿಸುತ್ತದೆ. ಅವರ ನಂತರದ ತಲೆಮಾರಿನವರಾದ ಸುಮೇರಿಯನ್ ಜನಾಂಗದವರು ಅಲ್ಲಿ ಮಾನವ ನಾಗರಿಕತೆಯನ್ನು ಪ್ರಥಮವಾಗಿ ಕಟ್ಟಿ ಬೆಳೆಸಿರಬೇಕು. ಬೈಬಲ್‌ನ ಹೇಳಿಕೆಯಂತೆ ಜಲಪ್ರಳಯದ ಬಳಿಕದ ಮಾನವ ಸಮೂಹವು ನೂಹ್‌ರ(ಅ) ಸಂತತಿಯಾಗಿದೆ. ಇತರ ಜನರು ನೆರೆಯಲ್ಲಿ ನಾಮಾವಶೇಷಗೊಂಡಿದ್ದರು.

ಕೆಲವು ಆಧುನಿಕ ಬೈಬಲ್ ವ್ಯಾಖ್ಯಾನಗಾರರ ಅಭಿಪ್ರಾಯದಲ್ಲಿ 'ಅರಾರಾತ್ ಮತ್ತು ಜೋರ್ಜಿಯಾ' ಪರ್ವತ ಶ್ರೇಣಿಗಳನ್ನು ಜೋಡಿಸುವ ಪರ್ವತ ಪಂಕ್ತಿಯೇ 'ಅಲ್‌ಜೂದಿ.' ಅಲೆಕ್ಸಾಂಡರನ ಕಾಲದ ಕೆಲವು ಗ್ರೀಕ್ ಉಲ್ಲೇಖಗಳನ್ನು ಪ್ರಸ್ತುತ ಅಭಿಪ್ರಾಯಗಳಿಗೆ ಆಧಾರವಾಗಿರಿಸಿದ್ದಾರೆ. ಕ್ರಿ.ಶ. 18ನೆಯ ಶತಮಾನದ ವರೆಗೆ ಅಲ್ಲಿ ಒಂದು ಕ್ಷೇತ್ರವಿತ್ತು. ಅದು ನೌಕಾ ಕ್ಷೇತ್ರವೆಂದು ಪ್ರಸಿದ್ಧವಾಗಿತ್ತು."

12. ಶ್ರೀ ಟಿ.ಸಿ. ಶಂಕರ ಮೆನನ್‌ರವರ 'ಶತಮಾನಗಳ ಆಚೆಗಿನ ಶಬ್ದಗಳು' (ಪ್ರಾಚ್ಯವಸ್ತು ಸಂಶೋಧನಾತ್ಮಕ ಕಿರು ಹೊತ್ತಿಗೆ) ಯಸ್.ಪಿ.ಯಸ್. ಪ್ರಕಾಶನ ಪುಟ: 86, 87

ನೌಕೆಯಿಂದ ಹೊರಬಂದಾಗ ನೂಹ್‌ರ ಜತೆ, ಶೇಮ್, ಹಾಮ್ ಮತ್ತು ಯಾಫೆತ್ ಎಂಬ ಮೂವರು ಪುತ್ರರು ಹಾಗೂ ಅವರ ಮಕ್ಕಳು ಮಾತ್ರವಿದ್ದರು.[13] ಇವರಿಂದ ಮಾನವ ಸಮಾಜ ಪುನಃ ಬೆಳೆಯಿತು ಎಂದು ಬೈಬಲ್‌ನ ಆದಿಕಾಂಡದಲ್ಲಿ ಹೇಳಲಾಗಿದೆ. ಈ ವಿವರಣೆಯು ಸರಿಯಾಗಿದ್ದರೂ ತಪ್ಪಾಗಿದ್ದರೂ ಕುರ್‌ಆನ್ ಮಾನವ ಸಮೂಹವು ಒಂದೇ ಗಂಡು ಮತ್ತು ಹೆಣ್ಣಿನಿಂದ ಜನ್ಮ ತಾಳಿದವರೆಂದು ಘೋಷಿಸಿರುವುದನ್ನು ಈ ಹಿಂದೆಯೇ ನೋಡಿದ್ದೇವೆ.[14]

ಮಹಾತ್ಮರಾದ ಪ್ರವಾದಿ ನೂಹ್‌ರವರು(ಅ) ಸ್ವಜನರನ್ನು ಏಕದೇವ ಸಿದ್ಧಾಂತಕ್ಕೆ ಆಹ್ವಾನಿಸಿದರೆಂದು ಕುರ್‌ಆನ್ ಸ್ಪಷ್ಟವಾಗಿ ಘೋಷಿಸಿದೆ.[15] ನೂಹ್‌ರ ಕಾಲಾನಂತರ ಮೆಸೆಪೊಟೇಮಿಯಾದಲ್ಲಿ ವಾಸವಾಗಿದ್ದ ಅವರ ಅನುಯಾಯಿಗಳು ಕೂಡಾ ಏಕದೇವ ವಿಶ್ವಾಸಿಗಳಾಗಿದ್ದರೆಂದು ಇದರಿಂದ ಊಹಿಸಬಹುದು. ಇನ್ನೊಂದು ರೀತಿಯಲ್ಲಿ ಹೇಳುವುದಾದರೆ ಇಂದು ತಿಳಿಯಲ್ಪಡುವ ಸಂಸ್ಕೃತಿಗಳಲ್ಲಿ ಅತ್ಯಂತ ಪ್ರಾಚೀನವಾದ ಸುಮೇರಿಯನ್ ಸಂಸ್ಕೃತಿಯ ಶಿಲ್ಪಿಗಳು ಮೂಲ ಸತ್ಯ ಮತ್ತು ಧರ್ಮದ ಬುನಾದಿಯಲ್ಲಿ ಜೀವಿಸುತ್ತಿದ್ದರು. ಬದಲಾವಣೆ ಮತ್ತು ವೈವಿಧ್ಯತೆಗಳೆಲ್ಲವೂ ಆ ಬಳಿಕ ಸಂಭವಿಸಿವೆ.

---

13. ಆದಿಕಾಂಡ 9:18 ನೋಡಿರಿ.

14. ಕುರ್‌ಆನ್ 49:13

15. ಕುರ್‌ಆನ್ 7:49

ಭಾರತೀಯ ಸಂಸ್ಕೃತಿಯ ಉಗಮ

ಇನ್ನು ನಾವು ಭಾರತೀಯ ಸಂಸ್ಕೃತಿಯ ಉಗಮದ ಬಗ್ಗೆ ನೋಡೋಣ. ಇತ್ತೀಚೆಗಿನ ವರೆಗೆ ಇತಿಹಾಸಕಾರರು ಭಾರತೀಯ ಸಂಸ್ಕೃತಿಯ ಮೂಲ ಶಿಲ್ಪಿಗಳು ಇಂಡೋ ಆರ್ಯನರೆಂಬ ಭಾವನೆಯನ್ನು ಹೊಂದಿದ್ದರು. ಆದರೆ ಈ ಇಪ್ಪತ್ತನೇ ಶತಮಾನವು ಇತರ ಎಲ್ಲ ರಂಗಗಳಂತೆ ಇತಿಹಾಸದಲ್ಲಿಯೂ ಮಹಾಕ್ರಾಂತಿಯನ್ನು ಸೃಷ್ಟಿಸಿತು. ಆರ್ಯರು ಭಾರತಕ್ಕೆ ಆಗಮಿಸುವುದಕ್ಕಿಂತ ಮೊದಲೇ ಭಾರತದಲ್ಲಿ ಸಮೃದ್ಧ ಸಂಸ್ಕೃತಿಯೊಂದು ಅಸ್ತಿತ್ವದಲ್ಲಿತ್ತೆಂಬ ಬಗ್ಗೆ ಬಲವಾದ ಪುರಾವೆಗಳು ದೊರೆತಿವೆ.

1922-27ನೇ ವರ್ಷಗಳಲ್ಲಿ ಸಿಂಧ್ ಸಂಸ್ಥಾನದ ಲಡ್ಕಾನಾ ಜಿಲ್ಲೆಯ ಮೊಹೆಂಜೊದಾರೋ ಮತ್ತು ಪಂಜಾಬಿನ ಮೊಂಡ್ಗೋಮರಿ ಜಿಲ್ಲೆಯ ಹರಪ್ಪಾಗಳಲ್ಲಿ ನಡೆಸಿದ ಭೂಗರ್ಭ ಸಂಶೋಧನೆಗಳು ಭಾರತದ ಪ್ರಾಚೀನ ಇತಿಹಾಸವನ್ನು ತಿದ್ದಿ ಬರೆಸಿದುವು. ಸಪ್ತ ಸಿಂಧುವಿನಲ್ಲಿ 5000 ವರ್ಷಗಳ ಹಿಂದೆಯೇ ಸುಸಂಘಟಿತ ಮತ್ತು ಸುಸಜ್ಜಿತವಾದ ನಗರ ಜೀವನವೊಂದು ಅಸ್ತಿತ್ವದಲ್ಲಿತ್ತು. ಈ ನಾಗರಿಕತೆಯನ್ನು ಪ್ರಸ್ತುತ ಪ್ರಾಚ್ಯವಸ್ತು ಸಂಶೋಧನೆಯ ಮುಖ್ಯಸ್ಥ ಸರ್ ಜಾನ್ ಮಾರ್ಷಲ್‌ರವರು 'ಮೊಹೆಂಜೋದಾರೋ ಇಂಡಸ್ ಸಿವಿಲೈಝೇಷನ್' (Mohen-jo-Daro Indus Civilization) ಎಂದು ಕರೆದಿರುವರು. ಸಾಮಾನ್ಯವಾಗಿ ಸಿಂಧೂದಡ ನಾಗರಿಕತೆಯೆಂದೇ ಇದನ್ನು ಕರೆಯಲಾಗುತ್ತಿದೆ. ಸಿಂಧೂ ಮತ್ತು ರಾವಿ ನದಿಗಳ ಈ ನಾಗರಿಕತೆಯು ಬೆಳೆದುಬಂತು. ರಾವಿ ನದಿಯು ಸಿಂಧೂ ನದಿಯ ಒಂದು ಉಪನದಿ.

ಸಿಂಧೂದಡ ನಾಗರಿಕತೆಯ ಉತ್ಥಾನ ಕಾಲವನ್ನು ಪ್ರಾಚ್ಯ ವಸ್ತು ಸಂಶೋಧಕರು ಲೆಕ್ಕ ಹಾಕಿದ್ದಾರೆ. ಅವರ ಅಭಿಪ್ರಾಯದಲ್ಲಿ ಅದು ಕ್ರಿ.ಪೂ. 3250ರಿಂದ ಕ್ರಿ.ಪೂ. 2750ರ ವರೆಗಿದೆ.[1]

ತನ್ಮೂಲಕ ಭಾರತೀಯ ಸಂಸ್ಕೃತಿಯು ಹಲವು ಶತಮಾನಗಳಷ್ಟು ಹಿಂದೆ ಸರಿದಿದೆ. ಆದರೆ ಸಪ್ತ ಸಿಂಧುವಿನಲ್ಲಿ ಈ ನಾಗರಿಕತೆಯನ್ನು ಕಟ್ಟಿ ಬೆಳೆಸಿದವರಾರು? ವೇದದ ಕರ್ತೃಗಳಾದ ಆರ್ಯರಂತೂ ಅಲ್ಲವೆಂದು ಪ್ರಾಯಶಃ ಎಲ್ಲ ಸಂಶೋಧಕರೂ ಅಭಿಪ್ರಾಯಪಟ್ಟಿದ್ದಾರೆ. ಸಿಂಧೀಯರಿಗೆ ಮತ್ತು ಆರ್ಯರಿಗೆ ದೇಹ ಪ್ರಕೃತಿಯಲ್ಲಾಗಲೀ ಧರ್ಮ ಮತ್ತು ಭಾಷೆಗಳ ಲ್ಲಾಗಲೀ ಯಾವುದೇ ಸಾಮ್ಯತೆಯಿಲ್ಲವೆಂದು ಹೇಳುತ್ತಾರೆ. ಆರ್ಯ ವಂಶಜರು ಬಿಳಿ

1. 'ಶತಮಾನಗಳ ಆಚೆಗಿನ ಶಬ್ದಗಳು' ಪುಟ: 197.

ವರ್ಣದವರೆಂದು ಅವರ ಪುರಾತನ ಸಾಹಿತ್ಯಗಳು ಸೂಚಿಸುತ್ತವೆ. ಆದರೆ ಸಿಂಧೂ ದಡ ನಿವಾಸಿಗಳ ಮೈಬಣ್ಣವು ಕಂದು ಬಣ್ಣದ್ದಾಗಿತ್ತು. ಅಂತೆಯೇ ಅವರ ಮುಖಾಕೃತಿ, ಗಾತ್ರ, ವಸ್ತ್ರಧಾರಣೆಯ ರೀತಿ ಮತ್ತು ವೇಷಭೂಷಣಾದಿಗಳೆಲ್ಲವೂ ಆರ್ಯರಿಗಿಂತ ಭಿನ್ನವಾಗಿದ್ದುವು. ಶ್ರೀ ಟಿ.ಸಿ. ಶಂಕರ ಮೆನನ್ ಬರೆದಿರುವುದನ್ನು ನೋಡಿರಿ.

"ಸಿಂಧೂ ದಡ ನಿವಾಸಿಗಳ ಗಾತ್ರ, ಮುಖಚಹರೆ ಮತ್ತು ವಸ್ತ್ರಧಾರಣಾ ಸಂಪ್ರದಾಯಗಳ ಕುರಿತು ಪ್ರಾಚ್ಯ ಅವಶೇಷಗಳು ಏನನ್ನು ಸೂಚಿಸುತ್ತವೆ? ಅಂದಿನ ಸ್ಮಶಾನಗಳಲ್ಲಿ ದೊರೆಯುವ ಅಸ್ಥಿಗಳಿಂದ ಅವರ ದೇಹದ ಗಾತ್ರವನ್ನು ಊಹಿಸಬಹುದು. ಪಾತ್ರೆ ಮತ್ತು ಗೋಡೆಗಳಲ್ಲಿರುವ ಬಣ್ಣದ ಹಾಗೂ ಬಣ್ಣವಿಲ್ಲದ ಚಿತ್ರ ಮತ್ತು ಗೊಂಬೆಗಳಿಂದ ಅವರ ಮುಖದ ಆಕೃತಿ, ಮೈಬಣ್ಣ ಮತ್ತು ವೇಷಭೂಷಣಾದಿಗಳ ಸ್ಪಷ್ಟ ವಿವರಗಳು ದೊರಕುತ್ತವೆ. ಅವುಗಳ ಆಧಾರದಲ್ಲಿ ಅವರ ಮುಖವು ಸ್ವಲ್ಪ ಉದ್ದವಾಗಿದ್ದು, ಸುಂದರವಾದ ಮೂಗಿನಿಂದ ಕೂಡಿತ್ತೆಂದು ಊಹಿಸಬಹುದು. ಅದರಂತೆಯೇ ಅವರು ಕಂದು ಮೈಬಣ್ಣದವರಾಗಿದ್ದರೆಂದು ಚಿತ್ರಗಳಲ್ಲಿ ಕಂಡುಬರುತ್ತದೆ. ಕೂದಲು ಕಪ್ಪು, ಕೃಶಗಾತ್ರರು. ಪುರುಷರು ಸಾಮಾನ್ಯವಾಗಿ ಗಡ್ಡ ಬೆಳೆಸುತ್ತಿದ್ದರು. ತಲೆಗೂದಲನ್ನು ಹಿಂದಕ್ಕೆ ಬಾಚಿ ಕಟ್ಟುವ ಸಂಪ್ರದಾಯವಿದ್ದಂತೆ ಕಂಡು ಬರುತ್ತದೆ. ಕಸೂತಿ (Embroidery)ಯಿರುವ ಬಲತೋಳು ಮುಚ್ಚದ ಉಡುಪನ್ನು ಅವರು ಧರಿಸುತ್ತಿದ್ದರು."[2]

ಆರ್ಯರ ಭಾಷೆ ಸಂಸ್ಕೃತವಾಗಿತ್ತು. ಅವರ ಪ್ರಾಚೀನ ಸಾಹಿತ್ಯಗಳೆಲ್ಲವೂ ಅದೇ ಭಾಷೆಯಲ್ಲಿವೆ. ಆದರೆ ಸಿಂಧೂ ದಡ ನಿವಾಸಿಗಳ ಭಾಷೆ ಸಂಸ್ಕೃತವಾಗಿರಲಿಲ್ಲ. ಭೂಗರ್ಭ ಶೋಧನೆಯಿಂದ ಅಗೆದು ತೆಗೆದ ಸಾವಿರಾರು ಮುದ್ರೆ(Seal)ಗಳಲ್ಲಿ ಅವರ ಭಾಷೆ ಕೆತ್ತಲ್ಪಟ್ಟಿದೆ. ಅವರು ಒಂದು ಬಗೆಯ ಚಿತ್ರ ಲಿಪಿಯನ್ನು ಬರೆಯುತ್ತಿದ್ದರು. ಆ ಲಿಪಿ ಈ ತನಕ ಓದಲ್ಪಟ್ಟಿಲ್ಲ.

ಈ ಎಲ್ಲ ಕಾರಣಗಳಿಂದಾಗಿ ಪ್ರಾಚ್ಯ ವಸ್ತು ಸಂಶೋಧಕರು, ಸಿಂಧೂ ದಡ ನಿವಾಸಿಗಳು ಆರ್ಯರಿಗಿಂತ ಭಿನ್ನವಾಗಿದ್ದರೆಂಬ ತೀರ್ಮಾನವನ್ನು ತಳೆದಿದ್ದಾರೆ. ಹಾಗಾದರೆ ಅವರು ಯಾರು? ಯಾವ ವರ್ಗಕ್ಕೆ ಸೇರಿದವರು? ಈ ಪ್ರಶ್ನೆಗೆ ಸಮರ್ಪಕ ಮತ್ತು ಒಮ್ಮತದ ಉತ್ತರ ಸಂಶೋಧಕರಲ್ಲಿಲ್ಲ. ಆದರೂ, ಕೆಳಗೆ ಉದ್ಧರಿಸುವ ಕೆಲವು ನಿರ್ಧಾರಗಳು ಈ ನಿಟ್ಟಿನಲ್ಲಿ ಗಮನಾರ್ಹವಾಗಿವೆ. 'ಅಡ್ವಾನ್ಸ್‌ಡ್ ಹಿಸ್ಟರಿ ಆಫ್ ಇಂಡಿಯಾ'ದಲ್ಲಿ ಹೀಗೆ ಬರೆಯಲಾಗಿದೆ.

"ಕೊನೆಗೆ ಸಿಂಧೂ ದಡ ನಾಗರಿಕತೆಯು ಯಾವ ವರ್ಗದವರಿಂದ ಅಸ್ತಿತ್ವಕ್ಕೆ ಬಂತೆಂಬ ಪ್ರಶ್ನೆ ಉದ್ಭವಿಸುತ್ತದೆ. ಕೆಲವರು ಅವರನ್ನು ದ್ರಾವಿಡರೆಂದೂ ಇನ್ನು ಕೆಲವರು ದ್ರಾವಿಡ ಮತ್ತು ಸುಮೇರಿಯನರು ವಸ್ತುತಃ ಒಂದೇ ವರ್ಗದವರೆಂದೂ ಅಭಿಪ್ರಾಯಪಡುತ್ತಾರೆ."[3]

ದ್ರಾವಿಡರು ಸಿಂಧೂ ನಾಗರಿಕತೆಯ ಕಾರಣಕರ್ತರಾಗಿದ್ದರೆಂದು ಕೆಲವು ಸಂಶೋಧಕರ ಅಭಿಪ್ರಾಯ. ಇತರ ಕೆಲವು ಸಂಶೋಧಕರು ಅದಕ್ಕಿಂತ ಒಂದು ಹೆಜ್ಜೆ ಮುಂದೆ ಹೋಗಿ ದ್ರಾವಿಡರು ಮತ್ತು ಪಶ್ಚಿಮ ಏಷ್ಯಾದ ಸುಮೇರಿಯನರು ವಂಶಶಾಸ್ತ್ರ (Ethnics)ದಂತೆ ಒಂದೇ

2. 'ಶತಮಾನಗಳ ಆಚೆಗಿನ ಶಬ್ದಗಳು' - ಪುಟ: 206

3. Advanced History of Indiaದಿಂದ ಕೃಷ್ಣಾನಂದ ಸ್ವಾಮಿ ತನ್ನ 'ಭಾರತದ ವರ್ಣ ಸಮರ' ಎಂಬ ಕಿರು ಹೊತ್ತಗೆಯ 11ನೆಯ ಪುಟದಲ್ಲಿ ಉದ್ಧರಿಸಿರುವುದು.

ವರ್ಗಕ್ಕೆ ಸೇರಿದವರೆಂದು ಸಮರ್ಥಿಸುತ್ತಾರೆ. ಶ್ರೀ ಜೈಸ್ವಾಲ್ ತನ್ನ 'ಹಿಂದೂ ಸಿವಿಲೈಝೇಶನ್' ಎಂಬ ಗ್ರಂಥದಲ್ಲಿ ಈ ರೀತಿ ಬರೆದಿದ್ದಾರೆ.

"ಇನ್ನೊಂದು ವರ್ಗದ ಭೂಗರ್ಭ ಶಾಸ್ತ್ರಜ್ಞರ ಅಭಿಪ್ರಾಯದಂತೆ ಪಶ್ಚಿಮ ಭಾರತ ಮತ್ತು ಸುಮೇರಿಯಾಗಳೊಳಗೆ ಕ್ರಿ.ಪೂ. 6000ದಲ್ಲಿಯೇ ವ್ಯಾಪಾರ ಸಂಬಂಧವಿತ್ತು. ಸುಮೇರಿಯನರು ಮತ್ತು ದ್ರಾವಿಡರು ಭಾಷಾ ದೃಷ್ಟಿಯಲ್ಲಿಯೂ ವಂಶಶಾಸ್ತ್ರದಂತೆಯೂ ಸಾಮ್ಯತೆಯನ್ನು ಹೊಂದಿದ್ದರು."[4]

ಸುಮೇರಿಯನರು ಮತ್ತು ಸಿಂಧೂ ದಡ ನಿವಾಸಿಗಳು ಪರಸ್ಪರ ವ್ಯಾಪಾರ ನಡೆಸಿದ್ದರೆಂಬುದಕ್ಕೆ ಆಧಾರವಾಗಿ ಅನೇಕ ವಸ್ತುಗಳು ಸಂಶೋಧನೆಯ ವೇಳೆ ದೊರೆತಿವೆ. ಪ್ರಸಿದ್ಧ ಸಂಶೋಧಕರಾದ ಗಾರ್ಡನ್ ಚೈಲ್ಡ್‌ರ ಮಾತುಗಳನ್ನು ಉಲ್ಲೇಖಿಸುತ್ತಾ ಪಂಡಿತ್ ಜವಾಹರ್‌ಲಾಲ್ ನೆಹರೂರವರು ತನ್ನ 'ಭಾರತದ ಸಂಶೋಧನೆ' ಎಂಬ ಗ್ರಂಥದಲ್ಲಿ ಬರೆದಿರುವುದನ್ನು ನೋಡಿರಿ:

"ಸಿಂಧೂ ದಡದ ಈ ಜನರಿಗೆ ಆ ಕಾಲದ ಸುಮೇರಿಯನ್ ನಾಗರಿಕತೆಯೊಂದಿಗೆ ಹಲವು ವಿಧದಲ್ಲಿ ಸಂಪರ್ಕವಿತ್ತು. ಅಕಾಡನ್(ಕಾಲ್ಡಿಯಾ)ನಲ್ಲಿ ಒಂದು ಭಾರತೀಯ ಕಾಲನಿ - ಬಹುಶಃ ಭಾರತದ ವ್ಯಾಪಾರಿಗಳದ್ದು - ಇತ್ತೆಂಬುದಕ್ಕೆ ಕೆಲವು ಪುರಾವೆಗಳಿವೆ. ಸಿಂಧೂ ನಗರಗಳ ಕೆಲವು ಕೃಷಿ ಉತ್ಪನ್ನಗಳು ಟೈಗ್ರಿಸ್ ಮತ್ತು ಯುಪ್ರಟೀಸ್ ನದೀ ತೀರದ ಮಾರುಕಟ್ಟೆಗಳನ್ನು ತಲುಪಿದುವು. ಅದಕ್ಕೆ ಬದಲಾಗಿ ಸಿಂಧೂ ದೇಶವು ಕೆಲವು ಸುಮೇರಿಯನ್ ಕಲಾಕೃತಿಗಳನ್ನೂ ಮೆಸೆಪೊಟೇಮಿಯಾದಿಂದ ಅಲಂಕಾರ ವಸ್ತುಗಳನ್ನೂ, ಒಂದು ಕೊಳವೆಯ ಮುದ್ರೆಯನ್ನೂ ವಿನಿಮಯ ಮಾಡಿಕೊಂಡಿತು. ಕಚ್ಚಾ ವಸ್ತುಗಳು ಮತ್ತು ಆಡಂಬರ ಸಾಧನಗಳು ಮಾತ್ರ ಮಾರಾಟವಾಗುತ್ತಿದ್ದುದಲ್ಲ. ಅರಬೀ ಸಮುದ್ರ ತೀರಗಳಿಂದ ನಿರಂತರವಾಗಿ ಆಮದಾಗುತ್ತಿದ್ದ ಮೀನು ಕೂಡಾ ಮೊಹಂಜೋದಾರೊವಿನ ಆಹಾರವನ್ನು ಸಮೃದ್ಧಗೊಳಿಸಿತು. (ವಾಟ್ ಹ್ಯಾಪನ್ಸ್ ಇನ್ ಹಿಸ್ಟರಿ. ಪುಟ: 113)[5]

ಭಾರತದ ವ್ಯಾಪಾರಿಗಳ ಮುದ್ರೆಗಳು, ಮೆಸೆಪೊಟೇಮಿಯಾ ಮತ್ತಿತರೆಡೆಗಳಲ್ಲಿ ದೊರೆತಿವೆ. ಹತ್ತಿ ಬಟ್ಟೆ ಮತ್ತು ಸುಗಂಧ ದ್ರವ್ಯಗಳು ಸಿಂಧೂ ತೀರದಿಂದ ರಫ್ತಾಗುತ್ತಿದ್ದುವು. ಊರ್, ಲಾಗೋಸ್, ಸೂಸಾ ಮತ್ತು ಟೆಲ್ ಅಸ್ಮಾರ್ ಮೊದಲಾದ ಮೆಸೆಪೊಟೇಮಿಯಾದ ಪ್ರಾಚೀನ ನಗರಗಳಲ್ಲಿಯೂ ಭಾರತದ ಪ್ರಮುಖ ವ್ಯಕ್ತಿಗಳ ಮುದ್ರೆಗಳು ಲಭಿಸಿವೆ."[6]

---

4. ಜೈಸ್ವಾಲ್‌ರ (Hindu Civilization ಎಂಬ ಕೃತಿಯಾದ 'ಭಾರತದ ವರ್ಣ ಸಮರ' 11ನೇ ಪುಟದಲ್ಲಿ ಉದ್ಧರಿಸಿರುವುದು.

5. Discovery of India by Pandit Jawaharlal Nehru, ಅನುವಾದ: 'ಭಾರತದ ಸಂಶೋಧನೆ'ಯ (C.H. Kunhappa) 89ನೇ ಪುಟದಲ್ಲಿ, ಗಾರ್ಡನ್ ಚೈಲ್ಡ್‌ರ What happened in History (ಪು. 112 ಪೆಲಿಕಾನ್ ಬುಕ್ಸ್) ಎಂಬ ಕೃತಿಯಿಂದ ಉದ್ಧರಿತ.

6. ಭಾರತದ ಪ್ರಾಚೀನತೆ (ಪ್ರಾಚ್ಯ ವಸ್ತು ಸಂಶೋಧನಾತ್ಮಕ ಕಿರು ಹೊತ್ತಗೆ) by ಡಾಕ್ಟರ್ ಎ. ಅಯ್ಯಪ್ಪನ್, ಮಾತೃಭೂಮಿ ಪ್ರಕಾಶನ, ಪುಟ 71, 72.

ಸುಮೇರಿಯನರು ಮತ್ತು ಸಿಂಧೀಯರೊಳಗೆ ಕೇವಲ ವ್ಯಾಪಾರ ಸಂಬಂಧವಲ್ಲದೇ ಮತೀಯ ಮತ್ತು ಧಾರ್ಮಿಕ ಸಂಬಂಧವೂ ಇತ್ತು.[7] ಭಾರತದ ವಿದ್ವಾಂಸರಾದ ಸಾಂಕೃತ್ಯಾಯನ್ ಉಲ್ಲೇಖಿಸುತ್ತಾರೆ:

"ಗ್ರಂಥಕರ್ತನ 'ಮಾನವ ಸಮುದಾಯ'ವೆಂಬ ಕೃತಿಯಲ್ಲಿ ಆರ್ಯರು ಭಾರತಕ್ಕೆ ಬರುವುದಕ್ಕಿಂತ ಮೊದಲು ಸಿಂಧೂ ತೀರದಲ್ಲಿ ಅಸೀರಿಯಾ (ಮೆಸೊಪೊಟೇಮಿಯಾ)ದ ಒಂದು ಜನ ವಿಭಾಗವು ನೆಲೆಸಿತ್ತು. ಆ ಸಮುದಾಯವು ಅಫಘಾನಿಸ್ತಾನಕ್ಕೆ ವಲಸೆ ಬಂದ ಪ್ರಾಚೀನ ಆರ್ಯರಿಗಿಂತ ಮುಂದುವರಿದಿತ್ತೆಂದೂ ಪ್ರಸ್ತಾಪಿಸಿರುವರು."[8]

ಸಿಂಧೂ ತೀರಕ್ಕೆ ವಲಸೆ ಬಂದ ಮೆಸೆಪೊಟೇಮಿಯಾದ ನಾಗರಿಕರು ಸುಮೇರಿಯನರಾಗಿದ್ದರು. ಇನ್ನೊಂದು ವಿಧದಲ್ಲಿ ಹೇಳುವುದಾದರೆ ಅವರು ನೂಹರ ಸಂತತಿಗಳು. ಆ ಪೀಳಿಗೆಯಿಂದ ದ್ರಾವಿಡ ವರ್ಗವು ಜನ್ಮ ತಾಳಿತು. ಸುಮೇರಿಯನರು ಮತ್ತು ದ್ರಾವಿಡರು ಮಾನವ ವಂಶಶಾಸ್ತ್ರ ಪ್ರಕಾರ ಒಂದೇ ವರ್ಗಕ್ಕೆ ಸೇರಿದವರೆಂಬ ಅಭಿಪ್ರಾಯ ಹಲವು ಸಂಶೋಧಕರಿಗಿದೆ. ಇದರಿಂದ ಭಾರತದ ನಾಗರಿಕತೆಯ ಉಗಮವು ಸುಮೇರಿಯನರಿಂದ ಆಯಿತೆಂದು ಸಿದ್ಧಪಟ್ಟಂತಾಯಿತು. ಅವರು ಪ್ರವಾದಿ ನೂಹ್‌ರ ಸಂತತಿಯಾಗಿದ್ದರು.

---

7. ದರ್ಶನ್ - ದಿಗ್ದರ್ಶನ್ (ಹಿಂದಿ): ಒಂದು ದರ್ಶನ ನಿರೂಪಕ ಗ್ರಂಥ: by ರಾಹುಲ್ ಸಾಂಕೃತ್ಯಾಯನ್, ಅನುವಾದ: 'ವಿಶ್ವ ದರ್ಶನಗಳು' by ಪಿ.ಯಂ. ಕುಮಾರನ್ ನಾಯರ್, 542-543ನೇ ಪುಟದಲ್ಲಿ ಹೀಗೆ ಬರೆದಿದ್ದಾರೆ: 'ಸಿಂಧೂ ಕಣಿವೆಯ ಪ್ರಾಚೀನ ಸಂಸ್ಕೃತಿಯ ಬಗ್ಗೆ ತಿಳಿಯಲಾರಂಭವಾದುದು ಈ ಶತಮಾನದ ದ್ವಿತೀಯ ಪಾದದ ಆದಿಯಲ್ಲಿ. ಮೊಹೆಂಜೋದಾರೊ, ಹರಪ್ಪ ಎಂಬೀ ಸ್ಥಳಗಳಲ್ಲಿ ನಡೆಸಿದ ಭೂಗರ್ಭ ಶೋಧದಿಂದ ಆ ಕಾಲದ ನಗರಗಳ ಮತ್ತು ನಾಗರಿಕ ಜೀವನದ ಅವಶೇಷಗಳು ನಮಗೆ ದೊರಕಿದುವು. ಆದರಿಂದ ನಮಗೆ ಮೆಸೆಪೊಟೇಮಿಯಾದ ಪುರಾತನ ನಾಗರಿಕ ಜನತೆಯಂತೆಯೇ ಸಿಂಧೂ ಕಣಿವೆಯಲ್ಲಿ ಕೂಡಾ ಸುವ್ಯವಸ್ಥಿತವಾದ ಒಂದು ಸಮುದಾಯವಿತ್ತೆಂದು ತಿಳಿದು ಬರುತ್ತದೆ. ಬೇಸಾಯ, ಕೆತ್ತನೆ ಕೆಲಸ, ವ್ಯಾಪಾರ ಮೊದಲಾದುವುಗಳಲ್ಲಿ ಅವರು ನಿಪುಣರಾಗಿದ್ದರು. ತಾಮ್ರ ಯುಗ! ಆ ಕಾಲದಲ್ಲಿ ಜೀವಿಸಿಯೂ ಅವರು ಬಹಳ ಅಭಿವೃದ್ಧಿ ಪಡೆದರು. ಸಾಂಗೋ ಪಾಂಗವಾದ ಒಂದು ಧರ್ಮವೂ ಒಂದು ಚಿತ್ರಲಿಪಿಯೂ ಅವರಿಗಿತ್ತು. ಚಿತ್ರಲಿಪಿ ಇರುವ ನಾಣ್ಯಗಳು ಮತ್ತು ವಸ್ತುಗಳು ಲಭಿಸಿದೆಯಾದರೂ ಅದು ಈವರೆಗೆ ಓದಲ್ಪಟ್ಟಿಲ್ಲ. ಆದರೆ ಇತರ ಪುರಾವೆಗಳಿಂದ ತಿಳಿಯುವುದೇನೆಂದರೆ ಸಿಂಧೂ ನಾಗರಿಕತೆಯು ಅಸುರ-ಕಾಲ್ಡಿಯಾ (Chaldean) ನಾಗರಿಕತೆಯ ಸಮಕಾಲೀನವಾಗಿತ್ತು. ಇವೆರಡರ ಧಾರ್ಮಿಕ ಭಾವನೆಗಳು ಬಹಳ ನಿಕಟವಾಗಿದ್ದುವು. ಮೆಸೆಪೊಟೇಮಿಯಾದ ಅಸ್ಸಿರೀಯಾ ಕಾಲ್ಡಿಯಾ ನಾಗರಿಕತೆ ಮತ್ತು ಸಿಂಧೂದಡ ನಾಗರಿಕತೆಗಳಿಗೆ ಪರಸ್ಪರ ಮತ ಧಾರ್ಮಿಕ ವಿಶ್ವಾಸಗಳಲ್ಲಿ ಹೊಂದಾಣಿಕೆ ಇದೆ, ಆದುದರಿಂದ ಅವು ಸಹೋದರಿಯರೆಂದೂ ಸಾಂಕೃತ್ಯಾಯನ್‌ರ ಅಭಿಪ್ರಾಯ.

8. ವಿಶ್ವ ದರ್ಶನಗಳು ಪುಟ: 540, 541.

ಮತ ದರ್ಶನ

ಸಿಂಧೂ ದಡ ನಾಗರಿಕತೆಯ ಮತ ನಂಬಿಕೆಗಳ ಕುರಿತು ಸಂಶೋಧಕರಿಗೆ ಖಚಿತವಾದ ಅಭಿಪ್ರಾಯವಿಲ್ಲ. ಅಲ್ಲಿ ಶಿವ ಪೂಜೆ, ಲಿಂಗಪೂಜೆ ಮತ್ತು ದೇವೀ ಪೂಜೆಗಳು ರೂಢಿಯಲ್ಲಿತ್ತೆಂದು ಕೆಲವರ ಅಭಿಪ್ರಾಯ. ಅನೇಕ ಲಿಂಗ ರೂಪಗಳು ಅಗೆತದ ವೇಳೆ ದೊರೆತಿವೆ. ಮಕ್ಕಳನ್ನು ಎತ್ತಿ ನಿಂತ ಹಲವು ಸ್ತ್ರೀರೂಪಗಳು ದೊರೆತಿವೆ. ಮೂರು ತಲೆಯ ಒಂದು ಪ್ರತಿಮೆಯೂ ಕಂಡು ಬಂದಿದೆ. ಇದು ಶಿವನ ಪ್ರತಿರೂಪವಾಗಿರಬಹುದೆಂಬ ಸಂಶಯವನ್ನು ಸರ್ ಮಾರ್ಷಲ್ ವ್ಯಕ್ತಪಡಿಸಿದ್ದಾರೆ. ವಸ್ತುತಃ ರೂಪಗಳು ಅಲ್ಲಿ ಲಿಂಗಪೂಜೆ, ದೇವಿಪೂಜೆ ಮತ್ತು ಶಿವಪೂಜೆ ನಡೆಯುತ್ತಿತ್ತೆಂಬ ಅಭಿಪ್ರಾಯಕ್ಕೆ ಪುರಾವೆಗಳಾಗಿವೆ. ಆದರೆ ಈ ಅಭಿಪ್ರಾಯಕ್ಕೆ ಕೆಲವರ ವಿರೋಧವಿದೆ. ಶಿವ ರೂಪವೆಂದು ಜಾನ್ ಮಾರ್ಷಲ್ ನಿರ್ಧರಿಸಿದ ಪ್ರತಿಮೆಗೆ ಮೂರು ತಲೆಗಳಿಲ್ಲವೆಂದು ಅವರ ವಾದ.[1] ಅದೇನಿದ್ದರೂ ಅಲ್ಲಿ ವಿಗ್ರಹಾರಾಧನೆ ನಡೆಯುತ್ತಿತ್ತೆಂಬ ಅಭಿಪ್ರಾಯ ಕೆಲವು ಸಂಶೋಧಕರಿಗಿದೆ. ಇಂತಹ ಆರಾಧನಾ ಸಂಪ್ರದಾಯ ಗಳು ಮೆಸೆಪೊಟೇಮಿಯಾದಲ್ಲಿಯೂ ರೂಢಿಯಲ್ಲಿತ್ತು. ಪ್ರಾಚ್ಯವಸ್ತು ಸಂಶೋಧಕರಾದ ಡಾ| ಎ. ಅಯ್ಯಪ್ಪನ್ 'ಭಾರತದ ಪ್ರಾಚೀನತೆ' ಎಂಬ ಕೃತಿಯಲ್ಲಿ ಈ ರೀತಿ ಬರೆದಿದ್ದಾರೆ:

"ಮೊಹೆಂಜೋದಾರೊ ಮತ್ತು ಹರಪ್ಪಾರ ನಿವಾಸಿಗಳು ವಿಭಿನ್ನ ದೇಹ ಪ್ರಕೃತಿಯವ ರಾಗಿದ್ದರು. ಅನೇಕ ವಿಧದ ಆರಾಧನಾ ಸಂಪ್ರದಾಯಗಳು ಅವರಲ್ಲಿ ರೂಢಿಯಲ್ಲಿದ್ದವು. ಕೆಲವರು ದೇವಿಯನ್ನು ಪೂಜಿಸುತ್ತಿದ್ದರು. (ಪಶ್ಚಿಮ ಏಷ್ಯಾದ ಹೆಚ್ಚಿನ ಕಡೆಗಳಲ್ಲಿ ಆಚರಿಸುವಂತೆ) ಲಿಂಗ ಮತ್ತು ಪಶುಪತಿಯ ರೂಪದಲ್ಲಿ ಶಿವನು ಆರಾಧ್ಯ ಮೂರ್ತಿಯಾಗಿದ್ದನು. ಮೂರು ಮುಖದ,

---

1. ಪ್ರಾಚೀನ ಉಲ್ಲೇಖಗಳು (ಪ್ರಾಚೀನ ಲಿಪಿಗಳ ವಿವರಣೆಗಳಿರುವ ಒಂದು ಮಲಯಾಳ ಗ್ರಂಥ) by ಶ್ರೀ ವಿ.ಆರ್. ಪರಮೇಶ್ವರನ್ ಪಿಳ್ಳೆ M.A. ಪುಟ 26, 27ರಲ್ಲಿ ಹೀಗೆ ಹೇಳಿದ್ದಾರೆ: "ಅನೇಕ ಲಿಂಗರೂಪಗಳು ದೊರೆತಿವೆ. ಮಕ್ಕಳನ್ನು ಎತ್ತಿ ಹಿಡಿದ ಹಲವು ಸ್ತ್ರೀ ರೂಪಗಳು ದೊರೆತಿವೆ. ಕೆಲವು ಯೋಗಾಸನ ರೂಪಗಳು ಇತರ ಕೆಲವು ದೇವತೆಗಳನ್ನು ಪ್ರತಿನಿಧೀಕರಿಸುತ್ತವೆ. ಅವುಗಳಲ್ಲಿ ಒಂದು ಸಣ್ಣ ಪ್ರತಿಮೆಯು ಶಿವನ ಪೂರ್ವ ರೂಪವಾದ ಮೂರು ತಲೆಯ ದೇವತೆಯೆಂಬ ಮಾರ್ಷಲ್‌ರ ಅಭಿಪ್ರಾಯವನ್ನು ಅನೇಕ ಮಂದಿ ಒಪ್ಪುವುದಿಲ್ಲ. ಆ ವಿಗ್ರಹದಲ್ಲಿ ಮೂರು ತಲೆಗಳಿಲ್ಲವೆಂದು ಓರ್ವ ಸಂಶೋಧಕನ ವಾದ. ಮಾತ್ರವಲ್ಲ ಅದರ ಮುಖವು ಹುಲಿಯ ಮುಖವನ್ನು ಹೋಲುತ್ತದಂತೆ."

ಊರ್ಧ್ವರೇದಸ್ಸಿನ, ಕೋಡುಗಳಿರುವ ಕಿರೀಟದ, ಕಾಡುಮೃಗಗಳಿಂದ ಆವರಿಸಲ್ಪಟ್ಟ ಒಂದು ದೇವತೆಯು ಪದ್ಮಾಸನ ಭಂಗಿಯಲ್ಲಿ ಕುಳಿತು ತಪಸ್ಸು ಮಾಡುತ್ತಿರುವ ಚಿತ್ರವು ಮುದ್ರೆಗಳಲ್ಲಿ ಕೆತ್ತಲ್ಪಟ್ಟಿವೆ."[2]

ನೂಹ್‌ರ ಕಾಲದಲ್ಲಿ ಸುಮೇರಿಯನರು ಪೂಜಿಸುತ್ತಿದ್ದ ಕೆಲವು ದೇವತೆಗಳ ಹೆಸರನ್ನು ಕುರ್‌ಆನ್ ಉದ್ಧರಿಸಿದೆ. ಅದರಲ್ಲಿ ಒಂದು ಹೆಸರು 'ಸುವಾಅ್' ಎಂದಾಗಿದೆ.[3] ಸಿಂಧೂ ದಡದ ಶಿವನು ಇದೇ 'ಸುವಾಅ್' ಆಗಿರಬಹುದು. ಶಿವ ಮತ್ತು ಸುವಾಅ್ ಎಂಬ ಶಬ್ದಗಳ ಸಾಮ್ಯತೆಯು ಈ ಅಭಿಪ್ರಾಯವನ್ನು ದೃಢೀಕರಿಸುತ್ತದೆ. ಅದಲ್ಲದೇ, ಪ್ರವಾದಿವರ್ಯರ(ಸ) ಕಾಲದಲ್ಲಿ ಅರೇಬಿಯಾದಲ್ಲಿ 'ಸುವಾಅ್'ನ ಪೂಜೆ ನಡೆಯುತ್ತಿತ್ತು. ಆ ಮೂರ್ತಿಯನ್ನು ಅವರು ಭಾರತದಿಂದ ಕೊಂಡು ಹೋಗಿದ್ದರೆಂದು 'ಬುಖಾರಿ'ಯ ಸುಪ್ರಸಿದ್ಧ ವ್ಯಾಖ್ಯಾನ ಗ್ರಂಥ ವಾಗಿರುವ 'ಫತ್ಹುಲ್ ಬಾರಿ'ಯಲ್ಲಿ ಹೇಳಲಾಗಿದೆ.[4] ಒಟ್ಟಿನಲ್ಲಿ, ಶಿವಪೂಜೆಯನ್ನು ಭಾರತೀಯರು ಸುಮೇರಿಯನರಿಂದಲೂ ಅರಬರು ಭಾರತೀಯರಿಂದಲೂ ಪಡೆದಿರಬೇಕು.

ಆದರೆ ಸಿಂಧೂದಡ ವಾಸಿಗಳಲ್ಲಿ ಏಕದೇವೋಪಾಸಕ ವರ್ಗವೂ ಇತ್ತೆಂದು ಸಂಶೋಧಕರು ಅಭಿಪ್ರಾಯಪಟ್ಟಿದ್ದಾರೆ. ಪ್ರಾಚ್ಯವಸ್ತು ಸಂಶೋಧನೆಯ ಅಭಿಪ್ರಾಯಗಳನ್ನು ಸಂಗ್ರಹಿಸಿರುವ 'ಭಾರತ ಸಂಸ್ಕೃತಿ ಸಾಮ್ರಾಜ್ಯದ ಚರಿತ್ರೆ' ಎಂಬ ಗ್ರಂಥಗಳಲ್ಲಿ ಶ್ರೀ ಪಿ. ಥೋಮಸ್ ಈ ರೀತಿ ಬರೆದಿರುವರು:

"ಬಹುತೇಕ ಸಂಶೋಧಕರ ಅಭಿಪ್ರಾಯದಂತೆ ಅವರು (ಸಿಂಧೀಯರು) ಏಕದೇವೋ ಪಾಸಕರಾಗಿದ್ದರು."[5]

---

2. ಭಾರತದ ಪ್ರಾಚೀನತೆ ಪುಟ: 67.

3. ಕುರ್‌ಆನ್ ಅಧ್ಯಾಯ - 71:23ರಲ್ಲಿ ಪ್ರವಾದಿ ನೂಹ್‌ರ ಅಭಿಸಂಬೋಧಿತರಾದ ಜನತೆಯೊಡನೆ ಪುರೋಹಿತರು ಹೀಗೆ ಉಪದೇಶಿಸುತ್ತಾರೆ: "ನೀವು ನಿಮ್ಮ ದೇವರುಗಳನ್ನು ಕೈಬಿಡಬೇಡಿರಿ. ವದ್ದ್, ಸುವಾಅ್, ಯಗೂಸ್, ಯವೂಕ್ ಮತ್ತು ನಸ್ರನ್ನು ಕೈಬಿಡಬೇಡಿರಿ." ಇದರಿಂದ ಸುವಾಅ್ ಎಂಬುದು ನೂಹ್‌ರ ಕಾಲದಲ್ಲಿ ಸುಮೇರಿಯನರ ಒಂದು ಆರಾಧ್ಯ ವಸ್ತುವಾಗಿತ್ತೆಂದು ತಿಳಿಯುತ್ತದಲ್ಲವೇ!

4. 'ಬುಖಾರಿ'ಗೆ ಅಲ್ಲಾಮಾ ಇಬ್ನು ಹಜರಿಲ್ ಅಸ್‌ಖಲಾನಿ ಬರೆದ ಅರಬಿ ವ್ಯಾಖ್ಯಾನ ಗ್ರಂಥ ಭಾಗ - 10, ಪುಟ: 296ರಲ್ಲಿ ಬಖೀಬಿನ್ ಖಾಲಿದ್‌ರನ್ನು ಉದ್ಧರಿಸಿ ಉಲ್ಲೇಖಿಸಲಾಗಿದೆ. ಪ್ರಸ್ತುತ ನಾಮಗಳು ಭಾರತೀಯರಲ್ಲಿ ಹರಡಿತು. ಅವರ ದೇವತೆಗಳಿಗೆ ಆ ನಾಮಗಳನ್ನು ಇಟ್ಟರು. ಅನಂತರ ಅರೇಬಿಯಾಕ್ಕೆ ಆ ವಿಗ್ರಹಗಳನ್ನು ಅಮ್ರ್ ಬಿನ್ ಲುಹಯ್ಯ್ ಎಂಬ ಪುರೋಹಿತನು ತಂದನು. ಈ ಹೇಳಿಕೆಯಿಂದ ಪ್ರಾರಂಭದಲ್ಲಿ ಸುವಾಅ್ ಸುಮೇರಿಯನರ, ಅನಂತರ ಭಾರತೀಯರ, ಕೊನೆಗೆ ಅರಬರದ್ದಾಯಿತೆಂದು ಊಹಿಸಬಹುದು. ಈ ಸುವಾಅ್ ಭಾರತೀಯರ ಶಿವನೇ ಆಗಿರಬೇಕು.

5. ಭಾರತ ಸಂಸ್ಕೃತಿ ಸಾಮ್ರಾಜ್ಯದ ಚರಿತ್ರೆ ಪ್ರಾಚ್ಯವಸ್ತು ಸಂಶೋಧನೆಗಳ ಹಿನ್ನೆಲೆಯಲ್ಲಿ ಶ್ರೀ ಪಿ. ಥೋಮಸ್‌ರ ಕೃತಿಯನ್ನು ಪಿ.ಎ. ಜೋಸೆಫ್ ಅನುವಾದಿಸಿ ಜೋಸೆಫ್ ತೋಮಾ ಸನ್ಸ್ ಆ್ಯಂಡ್ ಕಂಪೆನಿ ಪ್ರಕಾಶನಗೊಳಿಸಿದ ಒಂದು ಇತಿಹಾಸ ಗ್ರಂಥ ಪುಟ: 18ರಲ್ಲಿ ಹೀಗೆ ಬರೆದಿದೆ:

ಇವರು ಪ್ರವಾದಿ ನೂಹ್‌ರ ಅನುಯಾಯಿಗಳಾಗಿರಬೇಕು. ಏಕೆಂದರೆ ಅವರ ಧರ್ಮವು ಏಕದೇವತ್ವದಲ್ಲಿ ಅಧಿಷ್ಠಿತವಾಗಿತ್ತೆಂದು ಕುರ್‌ಆನ್ ಹೇಳಿದೆ.[6] ಹಾಗಾದರೆ ಸಪ್ತ ಸಿಂಧುವಿನಲ್ಲಿ ನಾಗರಿಕ ಸೌಧವನ್ನು ಕಟ್ಟಿದ ಸುಮೇರಿಯನ್ ಜನತೆಯು ತಮ್ಮ ಪಿತಾಮಹರಾದ ನೂಹ್‌ರ ಧರ್ಮಾವಲಂಬಿಗಳಾಗಿದ್ದುದರಲ್ಲಿ ಅಚ್ಚರಿಯಿಲ್ಲ.

ಕೆಲವು ವಿದ್ವಾಂಸರು ಸಿಂಧೀಯರು ಆರಾಧಿಸುತ್ತಿದ್ದ ಏಕದೇವನ ಹೆಸರನ್ನೂ ಮಹಿಮೆಯನ್ನೂ ವಿವರಿಸಿರುವರು. 'ಓಂ' ಎನ್ನುವುದು ಅವರ ದೇವನ ಹೆಸರು. 'ದೀದಿವಿಕಣ್' ಎಂಬುದು ಆತನ ಒಂದು ಗುಣವಿಶೇಷತೆ. ಮೌಲಾನಾ ಆಝಾದ್‌ರವರು ತನ್ನ 'ತರ್ಜುಮಾನುಲ್ ಕುರ್‌ಆನ್'ನಲ್ಲಿ ಈ ರೀತಿ ಬರೆದಿದ್ದಾರೆ.

"ಭಾರತದ ಆದಿವಾಸಿಗಳನ್ನು ಅನಂತರ ವಲಸೆ ಬಂದ ಆರ್ಯರು 'ದಸ್ಯುಗಳು' (ದಾಸರು) ಎಂಬ ಅಡ್ಡ ಹೆಸರಿನಿಂದ ಕರೆಯುತ್ತಿದ್ದರು. ದಸ್ಯುಗಳ ಮೂಲ ವಿಶ್ವಾಸವು ಏಕದೇವತ್ವದಲ್ಲಿ ಅಧಿಷ್ಠಿತವಾಗಿತ್ತು. ಅವರು ವಿಗ್ರಹಾರಾಧಕರಾಗಿರಲಿಲ್ಲ. ಆ ಏಕದೇವನನ್ನು 'ಓಂ' ಎಂದು ಕರೆಯುತ್ತಿದ್ದರು. ತತ್ಸಮಾನವಾದ ಸಂಸ್ಕೃತದ ಪದವು ಇಂದುವಾನ್ (ಏಕ) ಎಂದಿದೆ. ಆ ದೇವನ ಅಧಿಕಾರವು ಸಕಲ ಚರಾಚರಗಳನ್ನು ವ್ಯಾಪಿಸಿದೆ. ಅವನ ನಿಯಮದಂತೆ ಎಲ್ಲ ದೇವತೆಗಳೂ ಇರುತ್ತಾರೆ. 'ದೀದಿವಿಕಣ್' ಎಂಬುದು ಅವನ ಒಂದು ನಾಮ ವಿಶೇಷಣ. ಇದಕ್ಕೆ 'ಸರ್ವಥಾ ಅಜಾಗರೂಕವಾಗದ ನೋಟವುಳ್ಳವನು' ಎಂಬರ್ಥವಿದೆ. 'ಆತನಿಗೆ ತೂಕಡಿಕೆ ಅಥವಾ ನಿದ್ರೆಯಿಲ್ಲ'[7] ಎಂದು ಅಲ್ಲಾಹನು ಕುರ್‌ಆನಿನಲ್ಲಿ ಸ್ವಯಂ ವರ್ಣಿಸಿರುವುದು ಇದೇ ಅರ್ಥವನ್ನು ಸೂಚಿಸುತ್ತದಲ್ಲವೇ?'[8]

ಶಬ್ದಕೋಶದಲ್ಲಿ 'ಓಂ'ಕಾರಕ್ಕೆ ನೀಡಿರುವ ಅರ್ಥ ವಿವರಣೆ ಇದೇ ಅಭಿಪ್ರಾಯವನ್ನು ದೃಢಪಡಿಸುತ್ತದೆ. ಶ್ರೀ ಕೋಣಿಪ್ಪಯೂರ್ ಶಂಕರನ್ ನಂಬೂದಿರಿಪಾಡ್ ವಿರಚಿತ ಸಂಸ್ಕೃತ-ಮಲೆಯಾಳ ನಿಘಂಟಿನಲ್ಲಿ 'ಓಂ ಶೂದ್ರರ ಪ್ರಣವ(ಮಂತ್ರಾಕ್ಷರ)' ಎಂದಿದೆ. ಅಂದರೆ 'ಓಂ' ಎಂಬುದು ಶೂದ್ರ ವರ್ಗದವರು ತಮ್ಮ ಪ್ರಾರ್ಥನೆಯ ಪ್ರಾರಂಭದಲ್ಲಿ ಪಠಿಸುವ ದೇವನಾಮ ಎಂದರ್ಥ. ಆರ್ಯರ ಪ್ರಭುತ್ವದಲ್ಲಿ ಇಲ್ಲಿಯ ಆದಿವಾಸಿಗಳು ಶೂದ್ರರಾದರು. ಆರ್ಯರು ತಮ್ಮ ಮಂತ್ರ ಪೂಜೆಗಳ ಪ್ರಾರಂಭದಲ್ಲಿ 'ಓಂ'ನ್ನು ಉಪಯೋಗಿಸುತ್ತಿದ್ದರು.

"ಸಿಂಧೂದಡ ನಿವಾಸಿಗಳ ಧಾರ್ಮಿಕ ಪ್ರಜ್ಞೆಗಳ ಕುರಿತು ಸ್ಪಷ್ಟವಾದ ಉಲ್ಲೇಖಗಳು ಇನ್ನೂ ಲಭ್ಯವಾಗಿಲ್ಲ. ಸಂಶೋಧಕರಿಗೆ ದೊರೆತಿರುವ ಅಸಂಖ್ಯಾತ ಮುದ್ರೆಗಳಲ್ಲಿ ಕೆಲವದರ ಮೇಲೆ ಕಂಡು ಬಂದ ಅಮಾನುಷ ವೃಷಭದ ಪ್ರತಿಮೆಯು ಬಹುಶ ಅವರ ವರದೇವತೆಯ ಪ್ರತಿರೂಪವಾಗಿರಬಹುದು. ಅವರು ಏಕದೇವ ವಿಶ್ವಾಸಿಗಳೆಂದು ಹೆಚ್ಚಿನ ಸಂಶೋಧಕರ ನಿರ್ಧಾರ."

6. ಕುರ್‌ಆನ್ ಅಧ್ಯಾಯ - 71 (ನೂಹ್) ಸೂಕ್ತ - 3 ಮತ್ತು ಅನಂತರದ ಸೂಕ್ತಗಳನ್ನು ನೋಡಿರಿ.

7. ಕುರ್‌ಆನ್ ಅಧ್ಯಾಯ - 2:255

8. ಮೌ| ಆಝಾದ್‌ರವರ ತರ್ಜುಮಾನುಲ್ ಕುರ್‌ಆನ್ ಭಾಗ - 1, ಪುಟ - 129, 130.

ಇದರ ಅರ್ಥವೂ ದೇವ ಎಂದೇ ಆಗಿದೆ. ವಿಶ್ವಕೋಶದಲ್ಲಿ 'ಓಂ'ಕಾರವನ್ನು "ಪರಬ್ರಹ್ಮ ವಾಕ್ಯದ ಪ್ರಣವ ಮಂತ್ರ"[9] ಎಂಬುದಾಗಿ ವಿವರಿಸಲಾಗಿದೆ. ಈ ರೀತಿಯಲ್ಲಿ ಆರ್ಯರಲ್ಲದ ಶೂದ್ರರ ಏಕದೇವ ವಾಕ್ಯವಾದ ಪ್ರಣವವು 'ಓಂ' ಆಗಿತ್ತು. ಪ್ರಣವವೆಂದರೆ ಮಂತ್ರದ ಪ್ರಾರಂಭದ ಉಚ್ಛಾರವೆಂದು ತಾತ್ಪರ್ಯ.

ಒಟ್ಟಿನಲ್ಲಿ ಭಾರತದಲ್ಲಿ ಆರ್ಯರ ಆಗಮನಕ್ಕಿಂತ ಮುಂಚೆ ಏಕದೇವೋಪಾಸಕರಾಗಿದ್ದ ಸುಮೇರಿಯನರ ಒಂದು ಪಂಗಡವು ವಾಸವಾಗಿತ್ತು. ಸಿಂಧೂದಡದಲ್ಲಿ ಸಂಸ್ಕೃತಿಯ ಸೌಧ ಕಟ್ಟಿ ಬೆಳೆಸಿದ ಹಸ್ತಗಳು ಅವರದೇ ಆಗಿರಬೇಕು. ಆದರೆ ಸಪ್ತ ಸಿಂಧುವಿನಲ್ಲಿ ಒಂದಕ್ಕಿಂತ ಹೆಚ್ಚು ಸಮುದಾಯಗಳು ವಾಸಿಸುತ್ತಿದ್ದವೆಂಬುದನ್ನು ಭೂಗರ್ಭ ಶೋಧನೆಗಳಿಂದ ದೊರೆತ ಮಾನವ ಅಸ್ಥಿಪಂಜರಗಳು ಖಚಿತಪಡಿಸಿವೆ. ಶ್ರೀ ಎ.ಆರ್. ಪರಮೇಶ್ವರನ್ ಪಿಳ್ಳೆ ತನ್ನ 'ಪ್ರಾಚೀನ ಉಲ್ಲೇಖಗಳು' ಎಂಬ ಕೃತಿಯಲ್ಲಿ ಈ ರೀತಿ ಬರೆದಿರುವರು:

"ಮೊಹೆಂಜೋದಾರೊ ಮತ್ತು ಹರಪ್ಪಾಗಳಿಂದ ಅಗೆದು ತೆಗೆಯಲ್ಪಟ್ಟ ಅಸ್ಥಿಪಂಜರಗಳನ್ನು ಪರೀಕ್ಷಿಸಿದ ನರವಂಶ ವಿಜ್ಞಾನಿಗಳು ಅವು ಒಂದೇ ವರ್ಗದ ಜನರದ್ದಲ್ಲವೆಂದು ಅಭಿಪ್ರಾಯಪಟ್ಟಿದ್ದಾರೆ."[10]

ಆದ್ದರಿಂದ ಅಲ್ಲಿ ಶಿವಪೂಜಾದಿಗಳು ನಡೆದಿದ್ದರೆ ಅದು ಭಾರತದ ಆದಿವಾಸಿಗಳ ಆಚಾರ ಸಂಪ್ರದಾಯಗಳಿಗೆ ಸೇರಿದ್ದಾಗಿರಬಹುದು. ಹಾಗಾದರೆ ಸಂಸ್ಕೃತಿಯನ್ನು ಸ್ಥಾಪಿಸಿದ ಹಸ್ತಗಳು ಏಕದೇವೋಪಾಸಕರದ್ದಾಗಿತ್ತೆಂಬ ಅಭಿಪ್ರಾಯವೇ ಹೆಚ್ಚು ವಿವೇಕಪೂರ್ಣವೆಂದು ಭಾಸವಾಗುತ್ತದೆ.

---

9. ವಿಶ್ವ ವಿಜ್ಞಾನ ಕೋಶ ಸಾಹಿತ್ಯ ಪ್ರವರ್ತಕ ಸಹಕಾರ ಸಂಘ ಪ್ರಕಾಶನ ಭಾಗ - 3, ಪುಟ: 321 (1st Edition 1971).

10. ಪ್ರಾಚೀನ ಉಲ್ಲೇಖಗಳು ಪುಟ: 28.

ನೂಹ್‌ರ ಸಂತತಿಗಳು

ಜಲಪ್ರಳಯದ ಬಳಿಕ ನೂಹ್‌ರ ತಲೆಮಾರಿನವರು ಜಗತ್ತಿನ ನಾನಾ ಭಾಗಗಳಲ್ಲಿ ವ್ಯಾಪಿಸಿದರು. ಬೈಬಲ್‌ನ ಅಭಿಪ್ರಾಯದಂತೆ ಈಜಿಪ್ಟಿನಲ್ಲಿ ನೂಹ್‌ರ ಪುತ್ರ ಹಾಮ್‌ನ ಮಗನಾದ ಮಿಸ್ರಯೀಮ್‌ನ ಕುಲದವರು ನಾಗರಿಕತೆಯನ್ನು ಸ್ಥಾಪಿಸಿದರು. ಹೀಗೆಯೇ ಅರೇಬಿಯಾ, ಇರಾಕ್, ಸಿರಿಯಾ ಮೊದಲಾದ ನಾಗರಿಕ ಕೇಂದ್ರಗಳು ನೂಹ್‌ರ ಇನ್ನೋರ್ವ ಮಗನಾದ ಷೇಂನ ಕುಲದವರು ಸ್ವಾಧೀನಪಡಿಸಿದರು. ಇವರು ಬಾಬಿಲೋನಿಯಾ, ಅಸೀರಿಯಾ, ಕಾಲ್ಡಿಯಾ, ಫಿನೀಷ್ಯಾ ಮೊದಲಾದ ಪ್ರಾಚೀನ ನಗರ ರಾಷ್ಟ್ರಗಳನ್ನು ಸ್ಥಾಪಿಸಿದ್ದರು. ಅಬ್ರಹಾಮ್ ಮತ್ತು ಆತನ ಸಂತತಿಗಳು ಈ ವಂಶಕ್ಕೆ ಸೇರಿದವರಾಗಿದ್ದರು. ಆಧುನಿಕ ಇತಿಹಾಸಕಾರರು ಈ ವಂಶವನ್ನು 'ಸೆಮಿಟಿಕ್' ಎಂಬ ಹೆಸರಿನಿಂದ ಕರೆಯುತ್ತಾರೆ.

ಆದರೆ ನೂಹ್‌ರ ಮತ್ತೊಬ್ಬ ಮಗ 'ಯಾಫೇತ್'ನ ಅನುಯಾಯಿಗಳ ಕುರಿತು ಬೈಬಲ್ ವಿಶೇಷವಾಗಿ ಏನನ್ನೂ ವಿವರಿಸಿದಂತೆ ಕಂಡು ಬರುವುದಿಲ್ಲ. ಅವರು ದ್ವೀಪಗಳಲ್ಲಿ ವಾಸಿಸುತ್ತಿದ್ದರೆಂದು ಮಾತ್ರ ಆದಿಕಾಂಡದಿಂದ ತಿಳಿದು ಬರುತ್ತದೆ.[1] ಆದ್ದರಿಂದ ದ್ವೀಪಗಳ ಆದಿವಾಸಿಗಳು ಯಾಫೇತ್‌ನ ಸಂತತಿಯವರೆಂದು ಭಾವಿಸಬಹುದಾಗಿದೆ.

ಭಾರತವು ಒಂದು ಪರ್ಯಾಯ ದ್ವೀಪವಷ್ಟೆ. ಯಾಫೇತ್‌ನ ವಂಶಜರು ಭಾರತಕ್ಕೆ ಬಂದು ನೆಲೆಸಿದರೆಂದು ಭಾವಿಸುವುದರಲ್ಲಿ ನ್ಯಾಯವಿದೆ. ಈ ವಿಷಯವನ್ನು ಅರಬ್ ಇತಿಹಾಸಕಾರ ಅಬುಲ್ ಹಸನ್ ಮಸೂದಿ (ಕ್ರಿ.ಶ. 956 ಮರಣ) 'ಮುರೂಜುದ್ದಹಬ್' ಎಂಬ ತನ್ನ ಇತಿಹಾಸ ಗ್ರಂಥದಲ್ಲಿ ಉಲ್ಲೇಖಿಸಿರುವರು. "ನೂಹ್‌ರ ಮೊಮ್ಮಗನ ಮಗನಾದ ನೂಫೀರ್ ತನ್ನ ಸಂತತಿಗಳೊಡನೆ ಭಾರತದ ಸಿಂಧ್‌ಗೂ ಪಯಣಿಸಿದರು. ಸಿಂಧ್‌ನ ನಿವಾಸಿಗಳೂ ನೂಫೀರ್‌ನ

1. ಆದಿಕಾಂಡ - 10.2ರಿಂದ 5ರ ವರೆಗೆ. ಅದರಲ್ಲಿ ಹೀಗೆ ಹೇಳಿದೆ: "ಯಾಫೆತ್‌ನ ಪುತ್ರರು: ಗೋಮರ್, ಮಾಗೋಗ್, ಮಾದಾಯಿ, ಯಾವಾನ್, ತೂಬಲ್, ಮೇಶೆಕ್, ತೀರಾಸ್. ಗೋಮರ್‌ನ ಪುತ್ರರು: ಅಸ್ಕೆನಾಸ್, ರೀಫತ್, ತೋಗರ್ಮಾ, ಯಾವಾನ್‌ನ ಪುತ್ರರು: ಎಲಿಷಾ, ತರ್‌ಶೀಶ್, ಕಿತ್ತೀಂ, ದೋದಾನಿಂ ಇವರಿಂದ ಜಾತಿಗಳ ದ್ವೀಪಗಳು ಆಯಾ ದೇಶಗಳಲ್ಲಿ ಭಾಷೆ ಭಾಷೆಯಾಗಿ, ಕುಲ ಕುಲವಾಗಿ, ವಂಶ ವಂಶವಾಗಿ ಬೇರ್ಪಟ್ಟಿತು." ಇದರಿಂದ ಯಾಫೆತ್‌ನ ಸಂತತಿಗಳು ದ್ವೀಪಗಳನ್ನು ವಾಸಸ್ಥಳವಾಗಿ ಸ್ವೀಕರಿಸಿದ್ದರೆಂದು ತಿಳಿಯುತ್ತದೆ.

ತಲೆಮಾರುಗಳಿಗೆ ಸೇರಿದವರಾಗಿರುವರು."[2] ಅವರು ಪ್ರಸ್ತುತ ಗ್ರಂಥದ ಇನ್ನೊಂದೆಡೆ ಈ ರೀತಿ ಬರೆದಿದ್ದಾರೆ. "ನೂಹ್‌ರ ಮಗ ಯಾಫೇತ್‌ನ ಮಗ ಸುಬೇಲ್‌ನ (ತೂಬಲ್) ಸುತ ಅಬೂರ್ ಅಥವಾ ಆಮೂರ್ ಭಾರತದ ಸರಹದ್ದುಗಳಲ್ಲಿ ಭದ್ರವಾಗಿ ನೆಲೆಸಿದರು."[3]

ಈ ಪ್ರಸ್ತಾವನೆಗಳ ಆಧಾರದಲ್ಲಿ ಸುಮೇರಿಯಾದಿಂದ ಸಿಂಧ್‌ಗೆ ವಲಸೆ ಬಂದವರು ನೂಹ್‌ರ ವಂಶಜರೆಂಬುದನ್ನು ಖಚಿತಪಡಿಸಬಹುದಾಗಿದೆ.

ಮೆಸಪೊಟೇಮಿಯನ್ ಸಾಹಿತ್ಯಗಳಲ್ಲಿ ಅಲ್ಲಿ ಸಂಭವಿಸಿದ ಭೀಕರ ಜಲಪ್ರಳಯವೊಂದರ ಕಥೆಗಳು ಉಲ್ಲೇಖಿತವಾಗಿವೆ ಎಂಬುದನ್ನು ನಾವು ಈ ಹಿಂದೆಯೇ ನೋಡಿದ್ದೇವೆ. ಅಂತೆಯೇ ಭಾರತದ ಪುರಾಣ ಗ್ರಂಥಗಳಲ್ಲಿಯೂ ಒಂದು ಜಲಪ್ರಳಯದ ಕಥೆಯನ್ನು ಕಾಣಬಹುದು. 'ಮನು' ಎಂಬ ಮಹಾಪುರುಷನಿಗೆ ಸಂಬಂಧಿಸಿ ಈ ಕಥೆಯು ಇಲ್ಲಿ ಪ್ರಚುರಗೊಂಡಿದೆ. ಭಾರತದ ಪುರಾಣ ಗ್ರಂಥಗಳಲ್ಲಿ 'ಮನು'ವಿಗೆ 'ಸತ್ಯವ್ರತ' ಎಂಬ ಇನ್ನೊಂದು ನಾಮವೂ ಇದೆ. ಈ ಮನು ದ್ರಾವಿಡರ ನಾಯಕನಾಗಿದ್ದನೆಂದು 'ಮಹಾಭಾರತ'ದ ಒಂದು ಶ್ಲೋಕದಿಂದ ಗ್ರಹಿಸಬಹುದು.

"ಯೋ ಸೌ ಸತ್ಯವ್ರತೋ ನಾಮ ರಾಜರ್ಷಿರ್ ದ್ರವಿಡೇಶ್ವರಃ"
"ಜ್ಞಾನಂ ಯೋ ತೀತ ಕಲ್ಪಾಂದೇ ಲೇಭೇ ಪುರುಷ ಸೇವಯಾರ್ಥ"[4]

ಬೈಬಲ್‌ನ ಜಲಪ್ರಳಯದ ಕಥಾ ನಾಯಕನಾದ ನೋಹ ಮತ್ತು ಕುರ್‌ಆನಿನ ಜಲಪ್ರಳಯದ ಕಥಾ ನಾಯಕನಾದ ನೂಹ್ ಒಂದೇ ವ್ಯಕ್ತಿ ಎಂಬುದನ್ನು ಪ್ರತ್ಯೇಕ ವಿವರಿಸಬೇಕಾಗಿಲ್ಲ. ಅಂತೆಯೇ ಭಾರತದ ಕಥಾ ನಾಯಕನಾದ ಮನು ಕೂಡಾ ಅದೇ ವ್ಯಕ್ತಿಯಾಗಿರಬೇಕು. ಮಹಾನಾಮಗಳ ಪ್ರಾರಂಭದಲ್ಲಿ ಗೌರವ ಸೂಚಕವಾಗಿ 'ಮಾ'ವನ್ನು ಸೇರಿಸಿ ಹೇಳುವ ರೂಢಿಯಿದೆಯಲ್ಲವೇ? ಉದಾಹರಣೆಗೆ ಮಾಬಲಿ. ಅದೇ ರೀತಿ ನೂಹ್‌ಗೆ 'ಮ' ಸೇರಿದರೆ 'ಮನೂಹ್' ಮಹಾನೂಹ್ ಅಥವಾ ಮನೂಹ್ ಕಾಲ ಕ್ರಮೇಣ 'ಮನು' ಆಗಿ

2. ಕ್ರಿ.ಶ. 956ರಲ್ಲಿ ದಿವಂಗತರಾದ ಅರಬ್ ಇತಿಹಾಸಗಾರ ಅಬುಲ್ ಹಸನ್ ಮಸೂದಿ ವಿರಚಿತ ಅರಬೀ ಗ್ರಂಥ: 2ನೆಯ ಭಾಗ 144-145ನೇ ಪುಟ ನೋಡಿರಿ.

3. ಅದೇ ಗ್ರಂಥ ಭಾಗ - 1, ಪುಟ: 131, 132 ನೋಡಿರಿ. 132ರಲ್ಲಿ ಹೀಗಿದೆ: "ಅಬೂರ್‌ನ ಸಂತತಿಗಳಲ್ಲಿ ಒಂದು ಪಂಗಡವು ಭಾರತದ ಸರಹದ್ದುಗಳನ್ನು ತಲುಪಿತು. ಅವರು ಭಾರತದ ವರ್ಣಗಳನ್ನು ಸ್ವೀಕರಿಸಿದರು."

4. ಮಹಾಭಾರತ(ವೇದವ್ಯಾಸ ವಿರಚಿತವೆಂದು ಗ್ರಹಿಸಲ್ಪಡುವ ಭಾರತೀಯರ ಮಹಾ ಇತಿಹಾಸ ಕಾವ್ಯ) ಸ್ಕಂಧ 9 ನೋಡಿರಿ. ಇದರ ಪ್ರಕಾರ ದ್ರಾವಿಡರು ಮನುವನ್ನು ಈಶ್ವರನೆಂದು ನಂಬಿದ್ದ ಒಂದು ಶ್ಲೋಕವನ್ನು ಅದೇ ಗ್ರಂಥದ 8ನೆಯ ಸ್ಕಂದದಲ್ಲಿ ಕಾಣಬಹುದು. ಅದು ಹೀಗಿದೆ: "ಸತ್ಯ ವ್ರತೋಂಜಲಿಗತಾಂ ಸಹತೋ ಯೇನ ಭಾರತ ಉತ್ಸ ಸರ್ ಜನನದೀತೋಯೇ ಶಫರೀಂ ದ್ರವಿಡೇಶ್ವರಃ"

ಇದರಿಂದ ಮನುವು ದ್ರಾವಿಡರ ಒಂದು ಮಹಾ ಕುಲಪತಿಯಾಗಿದ್ದನೆಂದು ಗ್ರಹಿಸಬಹುದು. ಪ್ರಭು, ನಾಥ, ರಕ್ಷಕ, ರಾಜ ಮೊದಲಾದ ಅರ್ಥಗಳು ಈಶ್ವರ ಎಂಬ ಪದಕ್ಕಿದೆ.

ಅಪಭ್ರಂಶವಾಯಿತೆಂದು ಭಾವಿಸಬಹುದು. ಹಿಂದಿನ ಕಾಲಗಳಲ್ಲಿ ಯಾವುದಾದರೂ ಕುಲ ಮುಖಂಡನ ಹೆಸರಿನಲ್ಲಿ ವಂಶ ಮತ್ತು ಗೋತ್ರಗಳು ಜನ್ಮ ತಾಳುತ್ತಿದ್ದುವು. ಸೆಮಿಟಿಕ್ ವಂಶವು 'ಷೇಂ' ಎಂಬ ಕುಲನಾಯಕನ ಹೆಸರಿನಲ್ಲಿ ಪ್ರಖ್ಯಾತಗೊಂಡಿತು. ಅದೇ ರೀತಿ ಭಾರತದ ದ್ರಾವಿಡರು ತಮ್ಮ ಕುಲನಾಯಕನಾದ ಯಾಫೇತ್‌ನ ಹೆಸರಿನಲ್ಲಿ ಪ್ರಸಿದ್ಧರಾದರೆಂದು ಊಹಿಸಬಹುದು. ಮಹಾನಾಮಗಳ ಪ್ರಾರಂಭದಲ್ಲಿ 'ತಿರು' ಎಂಬ ವಿಶೇಷಣ ಸೇರಿಸುವ ಸಂಪ್ರದಾಯವಿದೆ. ಈ ರೀತಿ ದ್ರಾವಿಡರು ಅವರ ಕುಲನಾಯಕನನ್ನು ತಿರುಯಾಫೇತ್ ಎಂದು ಕರೆಯುತ್ತಿದ್ದರೆಂದೂ ಕ್ರಮೇಣ ಅದು ದ್ರಾವಿಡವೆಂದಾಯಿತೆಂದೂ ಅನುಮಾನಿಸಬಹುದು. ತಿರುಟ್ಟಿಯು ದೃಷ್ಟಿ ಎಂಬುದಾಗಿ ಪರಿವರ್ತನೆಗೊಂಡಂತೆ.

ಅದು ಏನೇ ಆಗಿದ್ದರೂ ಭಾರತದಲ್ಲಿ ಬೆಳೆದು ಬಂದ ಪ್ರಥಮ ಸಂಸ್ಕೃತಿಯು ಒಬ್ಬ ಪ್ರವಾದಿಯ ಬೋಧನೆಗಳಿಂದ ಜನ್ಮ ತಾಳಿದ್ದಾಗಿದೆ. ಸಿಂಧುಗಳ ಏಕದೇವತ್ವ ವಿಶ್ವಾಸವು ಅದಕ್ಕೆ ಸೂಕ್ತ ನಿದರ್ಶನವಾಗಿದೆ. ಆ ಪರಂಪರೆಯಿಂದ ಸ್ಫೂರ್ತಿ ಪಡೆದ ಧಾರ್ಮಿಕ ನಂಬಿಕೆಗಳು ಭಾರತದಲ್ಲಿ ಇಂದಿಗೂ ನೆಲೆ ನಿಂತಿವೆ ಎಂಬುದು ನಿರ್ವಿವಾದ.

ಸಾಬಿ ಮತಸ್ಥರು

ಇನ್ನು ಕುರ್‌ಆನಿನ ದೃಷ್ಟಿಯಲ್ಲಿ ಭಾರತದ ಮೂಲ ಮತಸ್ಥನ ಹೆಸರೇನೆಂಬುದನ್ನು ನೋಡೋಣ. ಕುರ್‌ಆನಿನಲ್ಲಿ ಗತ ಪ್ರವಾದಿಗಳ ಧರ್ಮವನ್ನು ಅವಲಂಬಿಸಿದ ಜನವಿಭಾಗ ಗಳನ್ನು ಹೆಸರಿಸಿದ ಸಾಲಿನಲ್ಲಿ 'ಸಾಬಿಗಳು' ಎಂಬ ಒಂದು ಪಂಗಡವನ್ನು ಕಾಣಬಹುದು. ಇವರ ಬಗ್ಗೆ ಕುರ್‌ಆನ್ ಹೆಚ್ಚೇನೂ ವಿವರಿಸಿಲ್ಲ. ಆದರೆ ಕೆಲವು ಮುಸ್ಲಿಮ್ ಚರಿತ್ರಕಾರರು ಮತ್ತು ಕುರ್‌ಆನ್ ವ್ಯಾಖ್ಯಾನಕಾರರು ಈ ವರ್ಗದ ವಿಶೇಷತೆಗಳ ಬಗ್ಗೆ ಕೂಲಂಕಷವಾಗಿ ಅಧ್ಯಯನ ನಡೆಸಿ ಕೆಲವು ತೀರ್ಮಾನಕ್ಕೆ ಬಂದಿದ್ದಾರೆ. ಆದರೆ ಅವರಿಗೆ ಖಚಿತ ಅಭಿಪ್ರಾಯವಿಲ್ಲ. ಅವರು ವಿಭಿನ್ನ ಅಭಿಪ್ರಾಯಗಳನ್ನು ಬರೆದಿಟ್ಟಿರುವರು. ಅವುಗಳಲ್ಲಿ ಹೆಚ್ಚು ಪ್ರಬಲವಾದ ಒಂದೆರಡು ಅಭಿಪ್ರಾಯಗಳನ್ನು ಇಲ್ಲಿ ಕೊಡಲಾಗಿದೆ.

ಸುಪ್ರಸಿದ್ಧ ಮುಸ್ಲಿಮ್ ಚರಿತ್ರಕಾರರಾದ ಇಬ್ನುನ್ನದೀಮ್ (ಕ್ರಿ.ಶ. 936-995) ತನ್ನ ಅಲ್ ಫಿಹ್ರಸ್ತ್ ಎಂಬ ಕೃತಿಯಲ್ಲಿ, ಸಾಬಿಗಳ ಕುರಿತು ವಿವರವಾಗಿ ಚರ್ಚಿಸಿರುವರು. ಅದರಲ್ಲಿ ಸಾಬಿಗಳು ಪ್ರವಾದಿ ಇಬ್ರಾಹೀಮ್‌ರಿಗಿಂತ(ಅ) ಹಿಂದಿನ ಪ್ರವಾದಿಗಳಾದ ನೂಹ್ ಮತ್ತು ಶೀಥ್‌ರವರ(ಅ) ಅನುಯಾಯಿಗಳೆಂದು ವಾದಿಸಲಾಗಿದೆ. ಶೀಥ್‌ರವರ(ಅ) ಒಂದು ಧರ್ಮ ಗ್ರಂಥವು ಅವರ ಅಧೀನವಿದೆ. ಧಾರ್ಮಿಕ ನಿರ್ದೇಶನಗಳು ಅದರಲ್ಲಿ ಪ್ರತಿಪಾದಿಸಲ್ಪಟ್ಟಿವೆ.[5] ಇನ್ನೋರ್ವ ಪ್ರಖ್ಯಾತ ಮುಸ್ಲಿಮ್ ಪಂಡಿತರಾದ ಅಲಿ ಬಿನ್ ಹಝ್ಮ್(ಕ್ರಿ.ಶ. 994-1064)ರವರು 'ಅಲ್‌ಫಿಸ್ಲ್ ಫಿಲ್ ಮಿಲಲಿ ವನ್ನಿಹಲ್' ಎಂಬ ಗ್ರಂಥದಲ್ಲಿ ಉಲ್ಲೇಖಿಸಿರುವುದನ್ನು ನೋಡಿರಿ: "ಸಾಬಿಗಳ ಮತವು ಲೋಕದಲ್ಲಿ ಅತ್ಯಂತ

5. ಅರ್‍ದುಲ್ ಕುರ್‌ಆನ್ (ಭಾಗ -2, ಪುಟ: 195)

ಪುರಾತನವಾದುದು.[6] ವಹಬ್ ಬಿನ್ ಮುನಬ್ಬಃ, ಅಬ್ದುಲ್ ರಹಿಮಾನ್ ಬಿನ್ ಝೈದ್, ಫಕ್ರುದ್ದೀನ್‌ರಾಝಿ, ಇಬ್ನು ಕಸೀರ್ ಮೊದಲಾದ ಹಲವು ಕುರ್‌ಆನ್ ವ್ಯಾಖ್ಯಾನಗಾರರ ಅಭಿಪ್ರಾಯದಲ್ಲಿ ಸಾಬಿಗಳು ಏಕದೇವೋಪಾಸಕರಾಗಿದ್ದರು.[7]

ಪ್ರಸ್ತುತ ಅಭಿಪ್ರಾಯಗಳ ಆಧಾರದಲ್ಲಿ ಸಾಬಿಗಳನ್ನು ನೂಹ್‌ರ ಅನುಯಾಯಿಗಳೆಂದು ಪರಿಗಣಿಸಬಹುದು. ಪಶ್ಚಿಮ ಏಶ್ಯಾದ ಹರ‍್ರಾನ್ ನಗರವು ಸಾಬಿ ಮತದವರ ಒಂದು ಕೇಂದ್ರವಾಗಿತ್ತು. ಸುಪ್ರಸಿದ್ಧ ವಿದ್ವಾಂಸರಾದ ಇಬ್ನು ತೈಮಿಯಾರವರು ಆ ಕೇಂದ್ರದಲ್ಲಿಯೇ ಜನ್ಮ ತಾಳಿದರು. ಅವರ ಕಾಲದಲ್ಲಿ (ಕ್ರಿ.ಶ. 1263 - 1328) ಹರ‍್ರಾನ್ ಮತ್ತು ಡಮಾಸ್ಕಸ್‌ಗಳಲ್ಲಿ ಸಾಬಿಗಳ ಸ್ಮಾರಕಗಳಾಗಿ ಹಲವು ದೇವಾಲಯಗಳು ಅಸ್ತಿತ್ವದಲ್ಲಿದ್ದುವು. ಆ ಕಾಲದಲ್ಲಿ ಅವರೆಲ್ಲರೂ ಇಸ್ಲಾಮ್ ಧರ್ಮಾವಲಂಬಿಗಳಾಗಿದ್ದುದರಿಂದ ಇನ್ನಾವ ಅವಶೇಷಗಳೂ ಅಲ್ಲಿ ಇರಲಿಲ್ಲ. ಆ ದೇವಾಲಯಗಳಾದರೋ ಮುಸ್ಲಿಮರ ಮಸೀದಿಗಳಾಗಿ ಉಪಯೋಗಿಸಲ್ಪಡುತ್ತಿದ್ದುವು. ಆದರೆ ಅವುಗಳಿಗೆ 2 'ಕಿಬ್ಲಾಗಳು' (ಅಭಿಮುಖ ಸ್ಥಾನಗಳು) ಇದ್ದುವು. ಒಂದು ಉತ್ತರ ಧ್ರುವದ ಕಡೆಗೆ ಇನ್ನೊಂದು ಕಅಬಾದ ಕಡೆಗೆ ಅಭಿಮುಖವಾಗಿರುತ್ತಿತ್ತು. ಸಾಬಿಗಳು ತಮ್ಮ ಮತ ನಿಯಮದಂತೆ ಪ್ರಾರ್ಥನೆಗಾಗಿ ಉತ್ತರ ಧ್ರುವವನ್ನು ಅಭಿಮುಖೀಕರಿಸುವ ಮಸೀದಿಗಳನ್ನು ನಿರ್ಮಿಸಿದರು. ಆ ಬಳಿಕ ಅವರು ಇಸ್ಲಾಮ್ ಧರ್ಮ ಸ್ವೀಕರಿಸಿದರು. ಇಸ್ಲಾಮ್ ಧರ್ಮದಂತೆ ಅದೇ ಮಸೀದಿಗಳಲ್ಲಿ ಪ್ರಾರ್ಥನೆಗಳನ್ನು ನಡೆಸಿದರು. ಆ ಸಂದರ್ಭದಲ್ಲಿ ಕಅಬಾಕ್ಕೆ ಅಭಿಮುಖವಾದ ಇನ್ನೊಂದು 'ಕಿಬ್ಲಾ' ನಿರ್ಮಿಸಿದರು. ತನ್ಮೂಲಕ ಪ್ರಸ್ತುತ ದೇವಾಲಯಗಳಿಗೆ ಎರಡು ಕಿಬ್ಲಾಗಳಾದುವು.

(ಅರ‍್ರದ್ದು ಅಲಲ್ ಮಂತಿಕಿಯ್ಯೀನ್ ನೋಡಿರಿ)[8]

6. ಅದೇ ಗ್ರಂಥ (ಭಾಗ - 2, ಪುಟ: 196)

7. ಕುರ್‌ಆನ್ ಅಧ್ಯಾಯ 2, ಸೂಕ್ತ 62ರ ವ್ಯಾಖ್ಯಾನ (ಇಬ್ನುಕಸೀರ್ ಭಾಗ - 1, ಪುಟ: 104) ಈ ಆಯತ್‌ನ ಸಾರಾಂಶ ಹೀಗಿದೆ: "ಮುಸ್ಲಿಮರು, ಯಹೂದಿಯರು, ಕ್ರೈಸ್ತರು, ಸಾಬಿಗಳು ಇವರಲ್ಲಿ ಅಲ್ಲಾಹ್ ಮತ್ತು ಅಂತ್ಯ ದಿನದಲ್ಲಿ ವಿಶ್ವಾಸವಿಟ್ಟು ಸತ್ಕರ್ಮವೆಸಗಿದವರಿಗೆ ಅವರ ಒಡೆಯನ ಬಳಿ ಪ್ರತಿಫಲವಿದೆ. ಅವರು ಏನನ್ನೂ ಭಯಪಡಬೇಕಾಗಿಲ್ಲ. ಅವರು ದುಃಖಿಸುವುದೂ ಬೇಡ." ಇದರಲ್ಲಿ ಇತರ ಮೂರು ವರ್ಗದವರಂತೆ ಸಾಬಿಗಳು ಕೂಡಾ ಓರ್ವ ಪ್ರವಾದಿಯ ಅನುಯಾಯಿಗಳೆಂಬ ಸೂಚನೆ ಇದೆಯಲ್ಲವೇ?

8. ಪ್ರಖ್ಯಾತ ನಿರೀಕ್ಷಕನಾದ ಅಹ್ಮದ್ ಬಿನ್ ತೈಮಿಯ್ಯ (ಕ್ರಿ. ಶ. 1263-1328) ಬರೆದ 'ಅರ‍್ರದ್ದು ಅಲಲ್ ಮಂತಿಕಿಯ್ಯೀನ್'ನಿಂದ ಅರ್ದುಲ್ ಕುರ್‌ಆನ್ ಭಾಗ - 2, ಪುಟ: 196ರಲ್ಲಿ ಉದ್ಧೃತ. ಅದರಲ್ಲಿ ಹೀಗೆ ಹೇಳುತ್ತದೆ: ಹರ‍್ರಾನ್ ಈ ಸಾಬಿಗಳ ಒಂದು ಪ್ರತ್ಯೇಕ ಕೇಂದ್ರವಾಗಿತ್ತು. ಇಸ್ಲಾಮ್‌ನ ಆರಂಭ ಕಾಲದಲ್ಲಿಯೂ ಸಾಬಿಗಳು ಮತ್ತು ತತ್ವಚಿಂತಕರು ಇಸ್ಲಾಮಿ ರಾಷ್ಟ್ರದ ಅಂತ್ಯ ಕಾಲದವರೆಗೆ ಅಸ್ತಿತ್ವದಲ್ಲಿದ್ದರು. ಆ ಸಾಬಿಗಳು ಬಗ್ದಾದ್ ಮುಂತಾದೆಡೆಗಳಲ್ಲಿ ವೈದ್ಯ ಮತ್ತು ಅಧ್ಯಾಪಕ ವೃತ್ತಿಗಳನ್ನು ಮಾಡುತ್ತಿದ್ದರು. ಅವರಲ್ಲಿ ಹೆಚ್ಚಿನವರು ಅಂದು ಇಸ್ಲಾಮ್ ಧರ್ಮ ಸ್ವೀಕರಿಸಿರಲಿಲ್ಲ.

ಇರಾಕಿನಲ್ಲಿ ಸಾಬಿಗಳ ಒಂದು ಸಣ್ಣ ಪಂಗಡವು ವಾಸ ಹೂಡಿತ್ತು. ಅದನ್ನು 'ಮಾಂಡನ್ಸ್' (Mandaens) ಎಂಬ ಹೆಸರಿನಿಂದ ಕರೆಯಲಾಗುತ್ತಿತ್ತು. ಕ್ರೈಸ್ತ ಮಿಷನರಿಗಳ ಪ್ರಚಾರದಿಂದಾಗಿ ಅವರಲ್ಲಿ ಕೆಲವರು ಕ್ರೈಸ್ತರಾದರು. ಈ ಹೊಸ ವಿಶ್ವಾಸಿಗಳು ತಮ್ಮ ಹಿಂದಿನ ಮತದ ವೈಶಿಷ್ಟ್ಯಗಳನ್ನು ವಿವರಿಸಿದರು. 'ಎನ್‌ಸೈಕ್ಲೋಪೀಡಿಯಾ ಬ್ರಿಟಾನಿಕಾ'ದ ಹಳೆಯ ಪ್ರತಿಯೊಂದರಲ್ಲಿ ಅವರ ಕುರಿತು ವಿಸ್ತಾರವಾಗಿ ಪ್ರತಿಪಾದಿಸಿರುವುದನ್ನು ಕಾಣಬಹುದು. ಅವುಗಳ ಪೈಕಿ ಕೆಲವನ್ನು ಇಲ್ಲಿ ಉಲ್ಲೇಖಿಸುವುದು ಸೂಕ್ತವೆನಿಸುತ್ತದೆ. ಅವರು ಮೂರು ಹೊತ್ತು ಉತ್ತರ ಧ್ರುವಕ್ಕೆ ಮುಖ ಮಾಡಿ ಪ್ರಾರ್ಥಿಸುತ್ತಿದ್ದರು. ಪ್ರತಿಯೊಂದು ಪ್ರಾರ್ಥನೆಯ ಮೊದಲು ಸ್ನಾನ ಮಾಡುತ್ತಿದ್ದರು. ಅನೇಕ ವ್ರತಗಳನ್ನು ಆಚರಿಸುತ್ತಿದ್ದರು. ವ್ರತಾನುಷ್ಠಾನ ಕಾಲದಲ್ಲಿ ಸ್ತ್ರೀ-ಪುರುಷರು ಶ್ವೇತವಸ್ತ್ರ ಧರಿಸುತ್ತಿದ್ದರು. ಪ್ರಾಣಿಗಳನ್ನು ವಧಿಸುತ್ತಿರಲಿಲ್ಲ. ಮಾಂಸಾಹಾರ ಸೇವಿಸುತ್ತಿರಲಿಲ್ಲ. ಮತ ತತ್ವಗಳನ್ನು ಇತರರಿಗೆ ತಿಳಿಸದೆ ರಹಸ್ಯವಾಗಿಡುವುದು ಅವರು ನಿಷ್ಠೆಯಿಂದ ಪಾಲಿಸುತ್ತಿದ್ದ ಒಂದು ಪದ್ಧತಿಯಾಗಿತ್ತು. ನೂಹ್‌ರ(ಅ) ಅನಂತರ 'ಊರ್' ಪಟ್ಟಣದಲ್ಲಿ ಜನ್ಮತಾಳಿದ ಅಬ್ರಹಾಮ್‌ರನ್ನು ಅವರು 'ಸುಳ್ಳುಗಾರ'ನೆಂದು ನಂಬಿದ್ದರು. ಇಸ್ರಯೇಲ್ ಪ್ರವಾದಿಗಳಲ್ಲಿ ಅವರು ಜೋನನ್ನು (ಯಹ್ಯಾ) ಮಾತ್ರವೇ ಅಂಗೀಕರಿಸುತ್ತಾರೆ....[9] ಈ ರೀತಿ ಅವರ ಮತ ವೈಶಿಷ್ಟ್ಯ ವಿವರಣೆಗಳು ಮುಂದುವರಿಯುತ್ತವೆ. ಈ ಲಘು ವಿವರಣೆಯಿಂದ ಸಾಬಿಗಳು ಸ್ನಾನಕ್ಕೆ ಕೊಡುತ್ತಿದ್ದ ಮಹತ್ವವನ್ನು ಗ್ರಹಿಸಬಹುದು. ಅದು ಅವರ ಧಾರ್ಮಿಕ ಆಚಾರವಾಗಿತ್ತು.

ಇನ್ನು, ಸಿಂಧೂದಡ ವಾಸಿಗಳ ಕುರುಹುಗಳು ಏನನ್ನು ಹೇಳುತ್ತಿವೆಯೆಂಬುದನ್ನು ನೋಡೋಣ. ಅಲ್ಲಿದ್ದ ಪ್ರತಿಯೊಂದು ಮನೆಗೆ ಬಾವಿ, ಬಚ್ಚಲಕೋಣೆ ಮತ್ತು ಅಲ್ಲಿಂದ ಕೊಳಕು ನೀರು ಸರಾಗವಾಗಿ ಹರಿದು ಹೋಗಲು ಚರಂಡಿಗಳೂ ಇದ್ದುವು. ಅದಲ್ಲದೆ ನಿರ್ಮಲ

(ಪ್ರಸಿದ್ಧ ಮುಸ್ಲಿಮ್ ದಾರ್ಶನಿಕರಾದ) ಫಾರಾಬಿಯು ಹರ್ರಾನಿಗೆ ಬಂದಾಗ ಅವರ ತತ್ವಶಾಸ್ತ್ರಗಳನ್ನು ಕಲಿತರು... ಕ್ರೈಸ್ತ ಧರ್ಮಕ್ಕಿಂತ ಮೊದಲು ಡಮಾಸ್ಕಸ್‌ನವರ ಧರ್ಮ ಸಾಬಿ ಧರ್ಮವಾಗಿತ್ತು. ಅವರು ಉತ್ತರ ಧ್ರುವಕ್ಕೆ ಮುಖಮಾಡಿ ಪ್ರಾರ್ಥನೆ ನಡೆಸುತ್ತಿದ್ದರು. ಇಂದಿಗೂ ಡಮಾಸ್ಕಸ್‌ನಲ್ಲಿ ಹಲವಾರು ಪುರಾತನ ದೇವಾಲಯಗಳನ್ನು ಕಾಣಬಹುದು. ಅವುಗಳ ಒಂದು ಕಿಬ್‌ಲ (ಅಭಿಮುಖ ದಿಕ್ಕು) ಉತ್ತರ ಧ್ರುವಕ್ಕಿದೆ. ಡಮಾಸ್ಕಸಿನ ಮಸೀದಿಯ ಕೆಳಗೆ ಒಂದು ದೊಡ್ಡ ದೇವಾಲಯವಿದೆ. ಇದು (ಹಿಂದೆ) ಸಾಬಿಗಳದ್ದಾಗಿತ್ತು. ಮುಂದುವರಿಯುತ್ತಾ, ಅವರು ಸಾಬಿಗಳಲ್ಲಿ ಪ್ರವಾದಿ ಇಬ್ರಾಹೀಮ್‌ರನ್ನು ನಂಬಿದ ಏಕದೇವ ವಿಶ್ವಾಸಿಗಳು ಮತ್ತು ಅಲ್ಲದವರೆಂಬ ಎರಡು ವರ್ಗದವರಿದ್ದಾರೆಂದು ಹೇಳಿದ್ದಾರೆ. ಈ ಎರಡು ಪಂಗಡದವರ ಕುರಿತು ಕುರ್‌ಆನ್ ಸೂಚಿಸಿದೆ.

9. ಈ ಎಲ್ಲಾ ವಿವರಣೆಗಳು ಎನ್‌ಸೈಕ್ಲೋಪೀಡಿಯಾ ಬ್ರಿಟಾನಿಕದ 11ನೆಯ ಮುದ್ರಣ -9 ಭಾಗ -17 ಪುಟ 555ರಿಂದ, ಸಯ್ಯಿದ್ ಸುಲೈಮಾನ್ ನದ್ವಿಯವರು ತನ್ನ ಅರ್ದುಲ್ ಕುರ್‌ಆನ್‌ನ ಭಾಗ -2 ಪುಟ: 198ರಿಂದ 201ರ ವರೆಗೆ ಸಂಗ್ರಹಿಸಿದ್ದರ ಸಾರಾಂಶವಾಗಿದೆ.

ಸಾರ್ವಜನಿಕ ಕೊಳಗಳೂ ಅವುಗಳ ಸುತ್ತ ಸ್ನಾನದ ಕೋಣೆಗಳೂ ಕಂಡು ಬಂದಿವೆ. ಶ್ರೀ ಕೆ.ವಿ. ಗೋಪಾಲ ಮೆನನ್‌ರು ಅವರ 'ಲೋಕ ಚರಿತ್ರೆ' ಎಂಬ ಗ್ರಂಥದಲ್ಲಿ ಹೀಗೆ ಬರೆದಿರುವರು:

"ಮೊಹೆಂಜೋದಾರೊದ ಅವಶೇಷಗಳು ಸುಮಾರು ಒಂದು ಚದರ ಮೈಲು ವಿಸ್ತೀರ್ಣದಲ್ಲಿ ವ್ಯಾಪಿಸಿದೆ. ಅದರ ರಾಜ ಬೀದಿಗಳು, ಮನೆಗಳು ಅವುಗಳಲ್ಲಿರುವ ಸ್ನಾನದ ಕೋಣೆಗಳು ಮತ್ತು ಕೊಳಕು ನೀರು ಹರಿಯುವ ಒಳಚರಂಡಿಗಳ ಕ್ರಮಬದ್ಧವಾದ ಸಂಯೋಜನೆಯು ಅತ್ಯಾಶ್ಚರ್ಯಕರವಾದ ಆಧುನಿಕ ಬೆಡಗಿನಿಂದ ಕೂಡಿದೆ.... ಮನೆಗಳ ಮಧ್ಯಭಾಗದಲ್ಲಿ ಒಂದು ಅಂಗಣ. ಈ ನಡುವಂಗಣದ ಸುತ್ತಲೂ ಅಡುಗೆ ಮನೆ, ದಾಸ್ತಾನು ಕೋಣೆ, ಸ್ನಾನದ ಕೋಣೆ ಇತ್ಯಾದಿಗಳಿದ್ದುವು. ಎಲ್ಲ ಮನೆಗಳಿಗೂ ಬಾವಿಗಳಿವೆ.... ಆದರೆ ಅಲ್ಲಿ ನಿರ್ಮಿಸಲ್ಪಟ್ಟ ಕೊಳಗಳು ಇವೆಲ್ಲಕ್ಕಿಂತ ಕುತೂಹಲದಾಯಕವಾಗಿವೆ. ಈ ಕೊಳದ ಸುತ್ತಲೂ ಅಂಗಣಗಳೂ ಅಂಗಣದ ನಾಲ್ಕು ದಿಕ್ಕುಗಳಲ್ಲಿ ಚಾವಡಿಗಳೂ ಚಾವಡಿಗಳ ಹಿಂದೆ ಸ್ನಾನದ ಕೋಣೆಗಳೂ ಇವೆ. ಕೆಲವು ಸ್ನಾನದ ಕೋಣೆಗಳಲ್ಲಿ ಹಬೆಯಿಂದ ಸ್ನಾನ ಮಾಡುವ ಏರ್ಪಾಡುಗಳೂ ಕಂಡು ಬಂದಿವೆ."[10]

ಹರ್‍ರಾನ್ ಸಮೀಪ ಕೂಡಾ ಇಂತಹ ನಿರ್ಮಿತ ಕೊಳಗಳು ಕಂಡು ಬಂದಿರುವುದಾಗಿ ಪ್ರಾಚ್ಯ ವಸ್ತುತಜ್ಞರು ವರದಿ ಮಾಡಿದ್ದಾರೆ. ಹರ್‍ರಾನ್ ನಗರವು ಸಾಬಿಗಳ ಒಂದು ಕೇಂದ್ರವಾಗಿತ್ತೆಂದು ಈ ಹಿಂದೆ ಹೇಳಿದೆಯಲ್ಲವೇ! ಹರ್‍ರಾನ್ ಸಮೀಪ ಯೆಮನ್‌ನ ಕೆಲವು ಭಾಗಗಳಲ್ಲಿ 3 ದೊಡ್ಡ ಕೃತಕ ಕೊಳಗಳನ್ನು ಸಂಶೋಧಿಸಿರುವುದಾಗಿ A Journey through the Yemen. P. 279ರಲ್ಲಿ ಉಲ್ಲೇಖಿಸಲಾಗಿದೆ.[11]

ಮಸೀದಿಗಳಿಗೆ ಹೊಂದಿಕೊಂಡು ಹಲವೆಡೆಗಳಲ್ಲಿ ಒಂದು ಕೃತಕ ಕೊಳ ಕಟ್ಟಿಸಿರುವುದನ್ನು ಕಾಣಬಹುದು. ಅದಕ್ಕೆ 'ಹೌಳ್' ಎಂದು ಹೆಸರು. ಮುಸ್ಲಿಮರು ನಮಾಝ್‌ಗೆ ಬೇಕಾಗಿ 'ವುಝೂ (ಅಂಗ ಸ್ನಾನ)' ಮಾಡಲು ಈ 'ಹೌಳ್'ಗಳನ್ನು ಕಟ್ಟುತ್ತಾರೆ. ಇದೇ ಪ್ರಕಾರ ಸಾಬಿಗಳಿಗೆ ಪ್ರಾರ್ಥನೆಗಾಗಿ ಸ್ನಾನ ಅನಿವಾರ್ಯವಾಗಿತ್ತು. ಸಿಂಧೂ ದಡದ ಕೃತಕ ಕೊಳಗಳನ್ನು ಈ ಅವಶ್ಯಕತೆಗಾಗಿ ನಿರ್ಮಿಸಿರಬೇಕು. ಮೊಹೆಂಜೋದಾರೋವಿನಂತೆಯೇ ಹರಪ್ಪಾದಲ್ಲಿಯೂ ಇಂತಹ ಕೃತಕ ಜಲಾಶಯಗಳು ಕಂಡು ಬಂದಿವೆ.

ಒಟ್ಟಿನಲ್ಲಿ ಸಿಂಧೂ ದಡವಾಸಿಗಳ ಮತವು ಸಾಬಿಮತವಾಗಿತ್ತೆಂದು ಊಹಿಸಬಹುದು. ಸಾಬಿಗಳು ನೂಹ್‌ರ(ಅ) ಅನುಚರರಾಗಿದ್ದರೆಂಬ ಮುಸ್ಲಿಮ್ ಪಂಡಿತರ ಅಭಿಪ್ರಾಯವನ್ನು ಸುಲಭದಲ್ಲಿ ಅಲ್ಲಗಳೆಯುವಂತಿಲ್ಲ. ಸಂಕ್ಷಿಪ್ತವಾಗಿ ಹೇಳುವುದಿದ್ದರೆ, ಸಿಂಧೂ ಕಣಿವೆಯಲ್ಲಿ ಅಭಿವೃದ್ಧಿ ಶೀಲವಾದ ಈ ಸಂಸ್ಕೃತಿಗೆ ಬುನಾದಿ ಹಾಕಿದ ಕರಗಳು ನೂಹ್‌ರ(ಅ) ಸಂತತಿಗಳಾದ

---

10. ಲೋಕ ಚರಿತ್ರೆ [ಮಾತೃಭೂಮಿ ಪ್ರಕಾಶನ, by ಶ್ರೀ ಕೆ.ವಿ. ಗೋಪಾಲ ಮೆನನ್ ಭಾಗ -1, ಪುಟ: 66 (1954)]

11. ಅರ್ದುಲ್ ಕುರ್‌ಆನ್ ಭಾಗ - 1, ಪುಟ 47.

ಸುಮೇರಿಯನರದಾಗಿತ್ತು. ಅವರು ಏಕದೇವ ಭಕ್ತರಾಗಿದ್ದರು. ಮೂರ್ತಿ ಪೂಜಕರಾಗಿರಲಿಲ್ಲ. ಇದೇ ಪರಂಪರೆಯಿಂದ ದ್ರಾವಿಡ ವರ್ಗವು ರೂಪುಗೊಂಡಿರಬೇಕು.

ಆರ್ಯರು

ಇಲ್ಲಿಯವರೆಗೆ ಭಾರತದ ಆದಿವಾಸಿಗಳಾದ ದ್ರಾವಿಡರ ಸಂಸ್ಕೃತಿಯ ಪರಂಪರೆಯನ್ನು ಪ್ರಸ್ತಾಪಿಸಲಾಗಿದೆ. ಇನ್ನು ಭಾರತದಲ್ಲಿ ಬಂದು ನೆಲೆಸಿದ ಆರ್ಯರ ಸಂಸ್ಕೃತಿಯ ವಿಶೇಷತೆಗಳ ಕುರಿತು ಸ್ವಲ್ಪ ಆಲೋಚಿಸೋಣ.

ಆರ್ಯ ಜನತೆಯ ಮೂಲ ತಲೆಮಾರು ಮತ್ತು ಅವರ ವಂಶ ಪಾರಂಪರ್ಯಗಳ ಕುರಿತು ತೀವ್ರ ಭಿನ್ನಾಭಿಪ್ರಾಯಗಳಿವೆ. ಆ ಸಂಗತಿಯನ್ನು ಸದ್ಯ ವಿವರಿಸಬಯಸುವುದಿಲ್ಲ. ಅವರು ಸೆಮಿಟಿಕ್ ವಂಶಜರಾಗಿದ್ದು ಆ ವಂಶವು ಅರಾಮ್‌ನ ಅನುಗಾಮಿಗಳೆಂಬ ಅಭಿಪ್ರಾಯಕ್ಕೆ ಆಧಾರಗಳಿವೆ. ಈ ವಂಶಕ್ಕೆ ಸೇರಿದ ಒಂದು ಪಂಗಡವು ಪ್ರವಾದಿ ಹೂದ್‌ರ(ಅ) ಕಾಲದಲ್ಲಿ ಅರೇಬಿಯಾದಲ್ಲಿ ರಾಜ್ಯಭಾರ ನಡೆಸಿತ್ತು. ಕುರ್‌ಆನಿನಲ್ಲಿ ಆ ಜನತೆಯನ್ನು 'ಆದ್' ಮತ್ತು 'ಇರಂ' ಎಂದು ಕರೆಯಲಾಗಿದೆ. ಆರ್ಯನ್ ಎಂಬ ಹೆಸರಿನಲ್ಲಿ ಪ್ರಖ್ಯಾತವಾದ ಜನತೆಯು ಇರಮ್‌ನ ತಲೆಮಾರುಗಳೆಂದು ಊಹಿಸಬಹುದು. ಬೈಬಲ್‌ನಲ್ಲಿ ಅವರನ್ನು 'ಅರಾಂ' ಎಂದೂ ಪರ್ಷಿಯನ್‌ರ ಸಾಹಿತ್ಯಗಳಲ್ಲಿ 'ಐರಿಯಾನ' ಎಂದೂ ಕರೆಯಲಾಗಿದೆ. ಅದು ಹೇಗಿದ್ದರೂ ಈ ಸಂದರ್ಭದಲ್ಲಿ ಆ ವಂಶವನ್ನು ಹೆಚ್ಚು ಚರ್ಚಿಸಲು ಇಚ್ಛಿಸುವುದಿಲ್ಲ. ನಾವು ಇಂಡೋ ಆರ್ಯನರ ಧಾರ್ಮಿಕ ನಂಬಿಕೆಗಳ ಕುರಿತು ಮಾತ್ರ ಪರಿಶೀಲಿಸೋಣ.

ಇಂಡೋ ಆರ್ಯನರಿಗೆ ಹಲವಾರು ಪ್ರಾಚೀನ ಧರ್ಮ ಗ್ರಂಥಗಳಿವೆ. ಅತ್ಯಂತ ಪುರಾತನ ಧರ್ಮ ಸಾಹಿತ್ಯಗಳ ಒಡೆಯರಾಗಿ ಈ ಆರ್ಯರಂತೆ ಇನ್ನಾವ ಜನತೆಯೂ ತಿಳಿಯಲ್ಪಟ್ಟಿಲ್ಲ. ಆದುದರಿಂದ ಅವುಗಳ ಆಧಾರದಲ್ಲಿ ಅವರ ಧಾರ್ಮಿಕ ಆಚಾರ - ವಿಚಾರಗಳನ್ನು ಪರಿಶೀಲಿಸಿ ತಿಳಿಯಲು ಯಾರಿಗೂ ಸಾಧ್ಯವಿದೆ. ಆದರೆ ಆ ಸಾಹಿತ್ಯಗಳನ್ನು ವಸ್ತುನಿಷ್ಠವಾಗಿ ಅಧ್ಯಯನ ಮಾಡಬೇಕು.

ನಾಲ್ಕು ವೇದ ಸಂಹಿತೆಗಳು ಇಂಡೋ ಆರ್ಯನರ ಅತ್ಯಂತ ಪ್ರಾಚೀನವಾದ ಮತ ಸಾಹಿತ್ಯಗಳಾಗಿವೆ. ಅವುಗಳನ್ನು ಋಕ್, ಯಜುರ್, ಸಾಮ ಮತ್ತು ಅಥರ್ವ ಎಂದು ಕರೆಯಲಾಗುತ್ತದೆ. ಅತಿ ಪ್ರಾಚೀನ ಸಂಸ್ಕೃತ ಭಾಷೆಗಳಲ್ಲಿ ಅವು ಬರೆಯಲ್ಪಟ್ಟಿವೆ. ಋಗ್ವೇದವು ಅವುಗಳಲ್ಲಿ ಹೆಚ್ಚು ಪುರಾತನವಾದುದು. ಋಗ್ವೇದದ ಕಾಲವು ಸುಮಾರು ಕ್ರಿ.ಪೂ. 1500 ವರ್ಷಗಳೆಂದು ಪಾಶ್ಚಾತ್ಯ ನಿರೂಪಕರು ಸಾಮಾನ್ಯವಾಗಿ ಅಭಿಪ್ರಾಯಪಡುತ್ತಾರೆ. ಆದರೆ ಭಾರತದ ವಿದ್ವಾಂಸರಾದ ಬಾಲ ಗಂಗಾಧರ ತಿಲಕರ ಅಭಿಪ್ರಾಯದಂತೆ ಋಗ್ವೇದಕ್ಕೆ ಕ್ರಿ.ಪೂ. 3500 ವರ್ಷಗಳ ಪ್ರಾಚೀನತೆಯಿದೆ. ಅದು ಹೇಗಿದ್ದರೂ ಲೋಕದಲ್ಲಿ ಇದರಷ್ಟು ಪುರಾತನವಾದ ಬೇರೆ ವೇದ ಗ್ರಂಥಗಳಿಲ್ಲವೆಂದೇ ಹೇಳಬಹುದು.

ವೇದದ ಭಾಷೆಯ ಕುರಿತು ಸಂಶೋಧನೆ ನಡೆಸಿದ ವಿದ್ವಾಂಸರು ಅದಕ್ಕೆ ಇತರ ಹಲವು ಭಾಷೆಗಳೊಡನೆ ಸಾಮ್ಯತೆಯಿದೆಯೆಂದು ಕಂಡುಕೊಂಡಿದ್ದಾರೆ. ಇರಾನಿನ ಪುರಾತನ ಭಾಷೆಯೊಡನೆ ಅದಕ್ಕೆ ಹೆಚ್ಚು ಹೋಲಿಕೆಯಿದೆ. ಇರಾನೀಯರ ವೇದ ಗ್ರಂಥವಾದ 'ಅವೆಸ್ತ'ದ

ಭಾಷೆ ಮತ್ತು ಸಂಸ್ಕೃತ ಭಾಷೆಗೆ ಹೆಚ್ಚು ಸಾಮ್ಯತೆ ಇರುವುದಾಗಿ ಸಂಸ್ಕೃತ ಸಾಹಿತ್ಯ ಚರಿತ್ರೆಕಾರ ಶ್ರೀ ಕೃಷ್ಣ ಚೈತನ್ಯರು ಬರೆದಿರುವುದನ್ನು ನೋಡಿರಿ:

"ಪ್ರಾಚೀನ ಇರಾನೀಯರ ಪ್ರಥಮ ವೇದಭಾಷೆಯಾದ ಅವಸ್ಥಿಕ್‌ನೊಡನೆ ಅದಕ್ಕೆ ಹೆಚ್ಚು ಹೋಲಿಕೆಯಿದೆ. ಶಬ್ದ ಶಾಸ್ತ್ರ ವಿಧಿಗಳ ಪ್ರಯೋಗದಿಂದ ಅಂದರೆ ಉಚ್ಚಾರಣೆಯನ್ನು ಸೂಕ್ತ ರೀತಿಯಲ್ಲಿ ಸ್ವಲ್ಪವೇ ಬದಲಾವಣೆ ಮಾಡುವುದರಿಂದ 'ಅವೆಸ್ತ'ದಲ್ಲಿರುವ ಎಲ್ಲ ಶ್ಲೋಕಗಳನ್ನೂ ವೈದಿಕ ಸಂಸ್ಕೃತ ಭಾಷೆಗೆ ಪದಾನುಪದ ಪರಿವರ್ತಿಸಬಹುದು. ಅವು ಯಥಾವತ್ತಾಗಿ ಶ್ಲೋಕ ರೂಪದಲ್ಲಿ ಉಳಿಯುವುದು ಮಾತ್ರವಲ್ಲ, ಅದರ ಕಾವ್ಯ ಸೌಂದರ್ಯವನ್ನು ಸೋರಿ ಹೋಗದಂತೆಯೂ ಸಂರಕ್ಷಿಸಬಲ್ಲುದು."[12] ಪ್ರಾಚೀನ ಪರ್ಷಿಯನ್ ಭಾಷೆ ಮತ್ತು ವೈದಿಕ ಭಾಷೆಯ ಈ ಸಾಮ್ಯತೆಯು ಇಂಡೋ ಆರ್ಯನರು ಮತ್ತು ಪರ್ಷಿಯನರು ಮೂಲತಃ ಒಂದೇ ವರ್ಗಕ್ಕೆ ಸೇರಿದ್ದರೆಂಬುದನ್ನು ಸಾದರಪಡಿಸುತ್ತದೆ: ಇರಾನ್ ಎಂಬ ಶಬ್ದಕ್ಕೆ ಆರ್ಯರ ಸಾಮ್ರಾಜ್ಯ ಎಂಬ ಅರ್ಥವಿದೆ.[13] ಒಟ್ಟಿನಲ್ಲಿ ಪ್ರಾಚೀನ ಪರ್ಷಿಯನ್ ಜನಾಂಗವು ಆರ್ಯನರಿಗೆ ಸಂಬಂಧಿಸಿದ ಒಂದು ಪಂಗಡ ವೆಂಬುದು ಖಚಿತ.

'ಅವೆಸ್ತ'ವು ಇರಾನೀಯರ ಪ್ರಪ್ರಥಮ ವೇದಗ್ರಂಥ. ಅದರ ವ್ಯಾಖ್ಯಾನವೇ 'ಝೆಂದಅವೆಸ್ತ' ಅಂತೆಯೇ 'ದಸಾತೀರ್' ಕೂಡಾ ಅವರ ಒಂದು ಪವಿತ್ರ ಮತಗ್ರಂಥ. ಇರಾನಿಯರ ಓರ್ವ ಪ್ರವಾದಿಯಾಗಿದ್ದ ಝುರತುಷ್ಟನ ಬೋಧನೆಗಳು ಆ ಗ್ರಂಥಗಳಲ್ಲಿ ಅಡಕವಾಗಿವೆ. ಗ್ರೀಕರು ಸೈರಸ್ ಎಂಬ ಹೆಸರಿನಿಂದ ಕರೆಯುತ್ತಿದ್ದ ಗೋರಸನು ಝುರತುಷ್ಟ ಮತಾವಲಂಬಿಯಾದ ಮಹಾ ಪುರುಷನಾಗಿದ್ದನೆಂದು ಮೌಲಾನಾ ಅಬುಲ್ ಕಲಾಮ್ ಆಝಾದ್‌ರವರು ತನ್ನ ಕುರ್‌ಆನ್ ವ್ಯಾಖ್ಯಾನ ಗ್ರಂಥದಲ್ಲಿ ಉದಾಹರಣೆಗಳ ಸಹಿತ ಸಮರ್ಥಿಸಿದ್ದಾರೆ.[14] ಕುರ್‌ಆನಿನಲ್ಲಿ ದುಲ್‌ಕರ್‌ನೈನ್ ಎಂದು ಸೂಚಿಸಿದ ವ್ಯಕ್ತಿಯೂ ಆತನೇ ಎಂಬ ಪ್ರಬಲ ಅಭಿಪ್ರಾಯವಿದೆ.[15] ಯಹೂದಿಯರ ಧರ್ಮ ಕೇಂದ್ರ ಹಾಗೂ ರಾಷ್ಟ್ರದ ರಾಜಧಾನಿಯಾಗಿದ್ದ ಜೆರೂಸಲೇಮನ್ನು ಬಾಬಿಲೋನಿಯಾದ ಚಕ್ರವರ್ತಿಯಾಗಿದ್ದ ನಬೂಕ್ಕದ್ನಸರ್ (ಬುಖ್ತ್‌ನಸರ್ ಕ್ರಿ.ಪೂ. 745-734)

---

12. ಶ್ರೀ ಕೃಷ್ಣ ಚೈತನ್ಯ ಅವರ ಸಂಸ್ಕೃತ ಸಾಹಿತ್ಯ ಚರಿತ್ರೆ (ಯಸ್.ಪಿ.ಯಸ್. ಪ್ರಕಾಶನ) ಪುಟ: 58.

13. ವಿಶ್ವಕೋಶ ಭಾಗ -2, ಪುಟ: 471. ಅದರಲ್ಲಿ ಹೇಳಿದೆ: "ಇರಾನ್ ಎಂದರೆ ಆರ್ಯರ ನಾಡು ಎಂದರ್ಥ."

14. ತರ್ಜುಮಾನುಲ್ ಕುರ್‌ಆನ್ ಭಾಗ -1, ಪುಟ: 414

15. ದುಲ್‌ಕರ್‌ನೈನ್ ಎಂದರೆ ಎರಡು ಕೋಡಿನವ ಎಂದರ್ಥವಿದೆ. ಪರ್ಷಿಯಾದ ಪಾಸರ್‌ಗಾಢ ಎಂಬ ಸ್ಥಳದಲ್ಲಿ ನಡೆಸಿದ ಭೂಗರ್ಭ ಶೋಧದಲ್ಲಿ ದೊರೆತ ಸೈರಸ್‌ನ ಪ್ರತಿಮೆಗೆ 2 ಕೋಡುಗಳಿದ್ದುವು. (ತರ್ಜುಮಾನುಲ್ ಕುರ್‌ಆನ್ ಭಾಗ -2. ಪುಟ: 400, 401) ಡೇನಿಯಲ್ ಪ್ರವಾದಿಯು ಒಂದು ದರ್ಶನದಲ್ಲಿ 2 ಕೋಡಿನ ಒಂದು ಹೋತವು ನದೀ ತೀರದಲ್ಲಿ ನಿಂತಿರುವುದನ್ನು

ನಾಮಾವಶೇಷಗೊಳಿಸಿದನು. ಅಳಿದುಳಿದ ಯಹೂದಿಯರನ್ನು ಬಾಬಿಲೋನಿಯಾಕ್ಕೆ ಒಯ್ದು ಗುಲಾಮರನ್ನಾಗಿ ಮಾಡಿದನು. ಆ ಕಾಲದ ಇಸ್ರಾಯೇಲ್ ಪ್ರವಾದಿಗಳಲ್ಲೊಬ್ಬರಾದ 'ಯಶಯ್ಯಾವ್' ಒಂದು ಭವಿಷ್ಯ ನುಡಿದರು. ಅದರಲ್ಲಿ ಬರಲಿರುವ ಓರ್ವ ಮಸೀಹ್(ಪ್ರವಾದಿ)ನ ವಿವರಣೆ ನೀಡಿದ್ದು, ಆತನು ಬಾಬಿಲೋನಿಯಾವನ್ನು ಮರಳಿ ಜಯಿಸಿ, ಯಹೂದಿಯರನ್ನು ರಕ್ಷಿಸುವನೆಂಬ ಸುವಾರ್ತೆಯನ್ನು ನೀಡಲಾಗಿತ್ತು.[16] ಅದಲ್ಲದೇ ಆತನ ಹೆಸರು ಕೋರೆಸ್ ಎಂದಿರುವುದೆಂದೂ ಅವರು ನುಡಿದಿದ್ದರು. ಈ ಭವಿಷ್ಯವಾಣಿಯಂತೆ ಸೈರಸ್ ಬಾಬಿಲೋನಿಯಾವನ್ನು ಜಯಿಸಿದನು. ಯಹೂದಿಯರನ್ನು ವಿಮೋಚನೆಗೊಳಿಸಿ, ಗೌರವದಿಂದ ಜೆರೂಸಲೇಮ್‌ಗೆ ಕಳುಹಿಸಿದನು. ನಬೂಕದ್ನಸರ್ ನಾಶಗೊಳಿಸಿದ ದೇವಾಲಯವನ್ನು ಪುನರ್ ನಿರ್ಮಿಸಲು ಅನುಮತಿಕೊಟ್ಟನು. ಅವನು ದೋಚಿದ್ದ ವಸ್ತುಗಳೆಲ್ಲವನ್ನೂ ಯಹೂದಿಯರಿಗೆ ಮರಳಿಸಲು ಆಜ್ಞಾಪಿಸಿದನು. ಈ

ಕಂಡರು. ಅದು ಉತ್ತರ, ದಕ್ಷಿಣ ಮತ್ತು ಪಶ್ಚಿಮ ಭಾಗಗಳಿಗೆ ಹಾಯುತ್ತಿತ್ತು. ಅದೇ ರೀತಿ ಒಂಟಿ ಕೋಡಿನ ಒಂದು ಸಾಮಾನ್ಯ ಆಡನ್ನೂ ಕಂಡರು. ಅದು ಕೋಪೋದ್ರಿಕ್ತವಾಗಿ ಎರಡು ಕೋಡಿನದನ್ನು ತಿವಿಯಿತು. ತನ್ಮೂಲಕ ಅದರ ಎರಡು ಕೋಡುಗಳೂ ಮುರಿದು ಬಿದ್ದುವು. ಆ ಬಳಿಕ ಈ ಜ್ಞಾನದರ್ಶನದ ಉದ್ದೇಶ ತಿಳಿಯದೆ ಡೇನಿಯಲ್ ಪ್ರವಾದಿಯು ತೊಳಲುತ್ತಿದ್ದಾಗ ಗಾಬ್ರಿಯೇಲ್ (ಜಿಬ್ರೀಲ್) ಎಂಬ ದೇವಚರ ಪ್ರತ್ಯಕ್ಷವಾಗಿ ಅದರ ಉದ್ದೇಶವನ್ನು ಈ ರೀತಿ ವಿವರಿಸಿಕೊಟ್ಟಿತು: 'ಎರಡು ಕೋಡಿರುವುದು ಪರ್ಶಿಯಾದ ರಾಜ ಮತ್ತು ಒಂದು ಕೋಡಿರುವುದು ಯವನ ರಾಜ. (ಬೈಬಲ್, ಡೇನಿಯಲ್ ಪುಸ್ತಕ 8ನೆಯ ಅಧ್ಯಾಯ ನೋಡಿರಿ) ಇದರಿಂದ ದುಲ್‌ಕರ್‌ನೈನ್ (ಎರಡು ಕೋಡಿನವ) ಪರ್ಶಿಯನ್ ರಾಜನೆಂಬುದು ವ್ಯಕ್ತವಾಗುತ್ತದಲ್ಲವೇ? ಡೇನಿಯಲ್ ಪ್ರವಾದಿಯ ಕಾಲದಲ್ಲಿ ಪರ್ಶಿಯಾ ಮತ್ತು ಮಿಡಿಯಾವನ್ನು ಸೈರಸ್ ರಾಜನು ಆಳುತ್ತಿದ್ದನು. ಸೈರಸ್‌ನ ಆಸ್ಥಾನದಲ್ಲಿ ಡೇನಿಯಲ್‌ರಿಗೆ ಬಹಳ ಗೌರವವಿತ್ತು. ಸೈರಸ್ ಸ್ಥಾಪಿಸಿದ ಬೃಹತ್ ಸಾಮ್ರಾಜ್ಯವು ಕ್ರಮೇಣ ಯವನ ರಾಜರಿಂದ ಸೋಲಿಸಲ್ಪಟ್ಟಿತು. ಡೇನಿಯಲ್ ಪ್ರವಾದಿಗೆ ಉಂಟಾದ ದರ್ಶನದ ತಿರುಳು ಇದೇ ಆಗಿರಬೇಕು.

16. ಯಶಾಯ 44:28 ಮತ್ತು 45:1 ನೋಡಿರಿ. ಅಲ್ಲಿ ಕೋರಸ್(ಸೈರಸ್)ನ ಕುರಿತು ಹೀಗೆ ಹೇಳಿದೆ: "ಕೋರಸ್ ನನ್ನ (ಯಹೋವನ) ಮಾರ್ಗದರ್ಶಿ. ಅವನು ನನ್ನ ಹಿತವನ್ನು ರಕ್ಷಿಸುವನೆಂದೂ ಜರೂಸಲೇಮ್ ನಿರ್ಮಿಸಲ್ಪಡುತ್ತದೆಯೆಂದೂ ನಾನು ಘೋಷಿಸುತ್ತೇನೆ. ಯಹೋವ ತನ್ನ ಅಭಿಷಿಕ್ತನಾದ ಕೋರಸ್‌ನೊಡನೆ ಈ ರೀತಿ ಬಿನ್ನವಿಸಿರುವನು. ನಾನು ನಿನಗಿಂತ ಮುಂಚೆ ತೆರಳಿ ಸಂಕಷ್ಟಗಳನ್ನು ಅಳಿಸಿ, ತಾಮ್ರದ ಬಾಗಿಲುಗಳನ್ನು ಮುರಿದು ಕಬ್ಬಿಣದ ಸಂಕೋಲೆಗಳನ್ನು ತುಂಡರಿಸುತ್ತೇನೆ. ನಿನ್ನ ಹೆಸರು ಹೇಳಿ ಕರೆಯುವ ನಾನು ಯಹೋವ, ಇಸ್ರಾಯೇಲ್ ದೇವನೇ ಎಂದು ನೀನು ತಿಳಿಯಲಿಕ್ಕಾಗಿ ನಾನು ನಿನಗೆ ಕತ್ತಲೆಯಲ್ಲಿರುವ ನಿಕ್ಷೇಪಗಳನ್ನು ಮತ್ತು ರಹಸ್ಯ ಸ್ಥಳಗಳಲ್ಲಿರುವ ಗುಪ್ತ ನಿಧಿಯನ್ನು ನೀಡುವೆನು." ಸೈರಸ್ ಬಾಬಿಲೋನಿಯಾ ಸಾಮ್ರಾಜ್ಯವನ್ನು ನಿರಾಯಾಸವಾಗಿ ವಶಪಡಿಸುವೆನೆಂದು ಈ ಭವಿಷ್ಯವಾಣಿಯ ಸಾರಾಂಶ. ಯಶಾಯ ಪ್ರವಾದಿಯ ಕಾಲವು ಸೈರಸ್‌ಗಿಂತ 160 ವರ್ಷಗಳ ಹಿಂದೆ. (ತರ್ಜುಮಾನುಲ್ ಕುರ್‌ಆನ್, ಭಾಗ -2, ಪುಟ: 403)

ಎಲ್ಲ ಕಾರಣಗಳಿಂದ ಯಹೂದಿ ಪ್ರವಾದಿಗಳು ಸೈರಸ್‌ನನ್ನು ಓರ್ವ ಮಸೀಹನೆಂದು ವರ್ಣಿಸಿರುವರು.[17]

ಝರತುಷ್ಟ ಮತದವರನ್ನು ಅರಬರು 'ಮಜೂಸಿ'ಗಳೆಂದು ಕರೆಯುತ್ತಾರೆ. ಕುರ್‌ಆನಿನಲ್ಲಿ ಅವರನ್ನು ಗ್ರಂಥ ನೀಡಲ್ಪಟ್ಟವರ ಸಾಲಿನಲ್ಲಿ ಪರಿಗಣಿಸಲಾಗಿದೆ.[18] ಇವರು ಆದಿಕಾಲದಲ್ಲಿ ಏಕದೇವೋಪಾಸಕರಾಗಿದ್ದರು. ಅಗ್ನಿಕುಂಡವನ್ನು ಒಂದು ಅಭಿಮುಖ ಕೇಂದ್ರ(ಕಿಬ್ಲಾ) ವಾಗಿ ಪರಿಗಣಿಸಿದ್ದರು. ಕಾಲಕ್ರಮೇಣ ಅಗ್ನಿಯನ್ನೇ ಆರಾಧಿಸತೊಡಗಿದರು. ಅದಕ್ಕೆ ಹೊಂದಿಕೊಂಡು ಕೆಲವು ಮತಗ್ರಂಥಗಳು ನಿರ್ಮಾಣಗೊಂಡವು. ಆದರೆ ಝರತುಷ್ಟನ ಬೋಧನೆಗಳು ಸಂಪೂರ್ಣವಾಗಿ ಏಕದೇವ ವಿಶ್ವಾಸದಲ್ಲಿ ಅಧಿಷ್ಠಿತವಾಗಿದ್ದುವು. ಇದಕ್ಕೆ 'ಝುಂದಅವೆಸ್ತ'ದ ಕೆಲವು ಸೂಕ್ತಗಳೇ ಆಧಾರ. ದೇವನನ್ನು ಅದರಲ್ಲಿ ಈ ರೀತಿ ವರ್ಣಿಸಲಾಗಿದೆ;

"ಆದಿ ಮತ್ತು ಅಂತ್ಯವಿಲ್ಲದವನು, ಶತ್ರುವಿಲ್ಲ, ಸಮಾನರಿಲ್ಲ, ತಂದೆಯಿಲ್ಲ, ತಾಯಿಯಿಲ್ಲ, ಪುತ್ರನಿಲ್ಲ, ಪತ್ನಿಯಿಲ್ಲ, ಮನೆ ಅಥವಾ ವಾಸಸ್ಥಳವಿಲ್ಲ, ಶರೀರ, ವರ್ಣ ಮತ್ತು ಗಂಧವಿಲ್ಲ."[19]

ಅದಲ್ಲದೆ ಝುಂದಅವೆಸ್ತದಲ್ಲಿ ಆಗತನಾಗಲಿರುವ ಓರ್ವ ಪ್ರವಾದಿಯ ಬಗ್ಗೆ ಭವಿಷ್ಯ ನುಡಿ ಕಾಣಬಹುದು. 'ಸೋಯ್‌ಶ್ಯಾಂತ್' (Soeshyant) ಎಂದು ಆತನನ್ನು ಹೆಸರಿಸಲಾಗಿದೆ. ಇದು ಅಂತ್ಯ ಪ್ರವಾದಿಯವರಿಗೆ ಸಂಬಂಧಪಟ್ಟ ಒಂದು ಭವಿಷ್ಯವಾಣಿಯೆಂದೂ ಅವರ 'ರಹ್ಮತುಲ್‌ಲಿಲ್ ಆಲಮೀನ್' (ಲೋಕಾನುಗ್ರಹಿ) ಎಂಬ ವಿಶೇಷಣದ ಪರ್ಶಿಯನ್ ಪರ್ಯಾಯ ಪದವೆಂದೂ ಕೆಲವು ಮುಸ್ಲಿಮ್ ವಿದ್ವಾಂಸರು ವಾದಿಸುತ್ತಾರೆ. ಫಾರ್ಸಿಗಳ ಇನ್ನೊಂದು ಧರ್ಮಗ್ರಂಥವಾದ 'ದಸಾತೀರ್'ನ 14ನೇ ಅಧ್ಯಾಯದಲ್ಲಿ ಇದಕ್ಕಿಂತ ಸ್ಪಷ್ಟವಾದ ಇನ್ನೊಂದು ಭವಿಷ್ಯ ನುಡಿಯನ್ನು ನೋಡಬಹುದು. ಅದರ ಸಾರಾಂಶ ಹೀಗಿದೆ:

"ಪರ್ಷಿಯನರು ಸತ್ಪಥ ಮತ್ತು ಧರ್ಮದಿಂದ ಅಧಃಪತನಗೊಂಡ ಕಾಲದಲ್ಲಿ ಅರೇಬಿಯಾದಲ್ಲಿ ಒಬ್ಬ ವ್ಯಕ್ತಿ ಜನಿಸುವನು. ಆತನ ಅನುಗಾಮಿಗಳು ಪಾರ್ಸಿಗಳನ್ನು ಜಯಿಸು

---

17. ಅದೇ ಪುಸ್ತಕ 45:1 ನೋಡಿರಿ.

18. ಕುರ್‌ಆನ್ 22:17ರಲ್ಲಿ ಹೀಗಿದೆ: "ಮುಸ್ಲಿಮರು, ಯಹೂದಿಯರು, ಸಾಬಿಗಳು, ಕ್ರೈಸ್ತರು, ಮಜೂಸಿಗಳು ಮತ್ತು ಬಹುದೇವಾರಾಧಕರು ಇವರ ಬಗ್ಗೆ ಅಂತ್ಯ ದಿನದಲ್ಲಿ ಅಲ್ಲಾಹನು ನಿಶ್ಚಯವಾಗಿಯೂ ತೀರ್ಮಾನ ಕೈಗೊಳ್ಳುತ್ತಾನೆ." ಈ ಸೂಕ್ತದಲ್ಲಿ ಬಹುದೇವವಾದಿಗಳೆಂದು ಹೇಳಿರುವುದು ವಿಗ್ರಹಾರಾಧಕರನ್ನು ಸೂಚಿಸುತ್ತದೆ. ಉಳಿದ 5 ವರ್ಗಗಳು ಯಾವುದಾದರೊಂದು ಪ್ರವಾದಿಯನ್ನು ಮತ್ತು ದೈವಿಕ ಗ್ರಂಥವನ್ನು ಅಂಗೀಕರಿಸಿದವರಾಗಿರುತ್ತಾರೆ. ಝರತುಷ್ಟನ ಅನುಯಾಯಿಗಳಾದ ಮಜೂಸಿಗಳನ್ನು ಕುರ್‌ಆನಿನಲ್ಲಿ ಇದೇ ವರ್ಗಕ್ಕೆ ಸೇರಿಸಲಾಗಿದೆ.

19. ಪೂರ್ವಿಕ ಮತ ಗ್ರಂಥಗಳಲ್ಲಿ ಪ್ರವಾದಿ ಮುಹಮ್ಮದರ ಕುರಿತು ಸಂಜ್ಞಾ ರೂಪದಲ್ಲಿ ಅಥವಾ ಗುಣನಾಮ ರೂಪದಲ್ಲಿ ಭವಿಷ್ಯ ನುಡಿಯಲಾಗಿದೆಯೆಂದು ಸಮರ್ಥಿಸಿ, ಅಂತಹ ಭವಿಷ್ಯ ನುಡಿಗಳನ್ನು ಕ್ರೋಡೀಕರಿಸಿ ವಿದ್ಯಾರ್ಥಿ ಅಬ್ದುಲ್ ಹಕ್‌ರವರು ಬರೆದಿರುವ Muhammad in World Scriptures ಎಂಬ ನವನೂತನ ಸಂಶೋಧನಾತ್ಮಕ ಗ್ರಂಥ: ಅದರಲ್ಲಿ ಝುಂದಅವೆಸ್ತದಲ್ಲಿ ಬಂದ ಆ ವಾಕ್ಯವನ್ನು ಉದ್ಧರಿಸಲಾಗಿದೆ.

ವರು. ಪಾರ್ಸೀ ದೇಶದ ವೀರರೆಲ್ಲರೂ ಸೋತು ಹೋಗುವರು. ಅಲ್ಲಿ (ಇಬ್ರಾಹೀಮ್‌ನಿಂದ) ಸ್ಥಾಪಿಸಲ್ಪಟ್ಟು, ಬಳಿಕ ಅನೇಕ ವಿಗ್ರಹಗಳು ಪ್ರಸ್ತಾಪಿಸಲ್ಪಟ್ಟ ದೇವಾಲಯದ ವಿಗ್ರಹಗಳು ಧ್ವಂಸಿಸಲ್ಪಡುವುವು. ಜನರು ಆ ಮಂದಿರಕ್ಕೆ ಮುಖ ಮಾಡಿ ಪ್ರಾರ್ಥನೆ ಸಲ್ಲಿಸುವರು. ಮದಾಯಿನ್, ತೂಸ್ ಮತ್ತು ಬಲ್ಕ್ ಮೊದಲಾದ ಪಾರ್ಸಿ ನಗರಗಳನ್ನೂ ಇತರ ನೆರೆ ರಾಷ್ಟ್ರಗಳನ್ನೂ ಅವರು ಜಯಿಸುವರು. ವಿವೇಕಮತಿಗಳು ಅವರೊಡನೆ ಸೇರುವರು."[20]

ಈ ವಸ್ತುಸ್ಥಿತಿಗಳ ಹಿನ್ನೆಲೆಯಲ್ಲಿ ಇಸ್ಲಾಮ್ ಧರ್ಮದ ಪ್ರವಾದಿವರ್ಯರ(ಸ) ಒಂದು ನುಡಿಮುತ್ತಿನ ತಿರುಳು ಸ್ಪಷ್ಟವಾಗಿ ಅರ್ಥವಾಗುತ್ತದೆ. "ವೇದದವರೊಡನೆ ವ್ಯವಹರಿಸಿದ ರೀತಿಯಲ್ಲಿಯೇ ಮಜೂಸಿಗಳೊಡನೆ ವರ್ತಿಸಿರಿ" ಎಂದು ಆ ನುಡಿಮುತ್ತಿನಲ್ಲಿ ಹೇಳಲಾಗಿದೆ.[21] ಮಜೂಸಿಗಳು ಒಂದು ವೇದದ ವಾಹಕರಾಗಿದ್ದುದರಿಂದ ಪ್ರವಾದಿವರ್ಯರು(ಸ) ಆ ರೀತಿ ಆಜ್ಞಾಪಿಸಿದ್ದರು. ಖಲೀಫಾ ಉಮರ್‌ರ(ರ) ಆಡಳಿತ ಕಾಲದಲ್ಲಿ ಮುಸ್ಲಿಮರು ಪರ್ಷಿಯಾವನ್ನು ಜಯಿಸಿದ್ದರು. ಆ ಸಂದರ್ಭದಲ್ಲಿ ಅವರೊಡನೆ ವ್ಯವಹರಿಸಬೇಕಾದ ರೀತಿನೀತಿಗಳ ಬಗ್ಗೆ ಪರ್ಯಾಲೋಚಿಸಲಿಕ್ಕಾಗಿ ಖಲೀಫರು ವಿದ್ವಾಂಸರ ಸಭೆಯನ್ನು ಕರೆದರು. ಪ್ರಶ್ನೆಯನ್ನು ಸಭಿಕರ ಮುಂದಿಡಲಾಯಿತು. ಆಗ ಅಲೀ ಬಿನ್ ಅಬೀತಾಲಿಬ್(ರ) ಹೀಗೆಂದರು: "ಮಜೂಸಿಗಳು ವೇದದವರಾಗಿರುವರು[22] ಅವರೊಡನೆ ಆ ನೆಲೆಯಲ್ಲಿ ವರ್ತಿಸಬೇಕು."

ಈ ಎಲ್ಲ ವಿವರಣೆಗಳಿಂದ ಆರ್ಯರ ಒಂದು ವಿಭಾಗದ ಇರಾನೀಯರ ನಾಗರಿಕ ಪರಂಪರೆಯನ್ನು ನಾವು ಗ್ರಹಿಸಿದೆವು. ಅವರು ಮೊದಲು ಒಬ್ಬ ಪ್ರವಾದಿಯ ಅನುಯಾಯಿಗಳಾಗಿದ್ದರು. ಇನ್ನು ಅವರು ಇನ್ನೊಂದು ವಿಭಾಗವಾದ ಇಂಡೋ-ಆರ್ಯರ ಸಂಸ್ಕೃತಿಯ ಕುರಿತು ಆಲೋಚಿಸೋಣ.

ಇಂಡೋ-ಆರ್ಯರು

ಭಾರತಕ್ಕೆ ಬಂದು ನೆಲೆಸಿದ ಆರ್ಯರಿಗೆ ಅನೇಕ ಧರ್ಮ ಗ್ರಂಥಗಳಿವೆಯೆಂದು ಈ ಹಿಂದೆ ಸೂಚಿಸಿದೆನಷ್ಟೆ? ಅವೆಲ್ಲವೂ ಅರಬ್ ವಿದ್ವಾಂಸರಿಗೆ ಅಜ್ಞಾತವಾದ ಸಂಸ್ಕೃತ ಭಾಷೆಯಲ್ಲಿದ್ದುವು. ಆದುದರಿಂದ ಮುಸ್ಲಿಮ್ ವಿದ್ವಾಂಸರಿಗೆ ಆರ್ಯ ಜನತೆಯ ಬಗ್ಗೆ ಅಧ್ಯಯನ ನಡೆಸಲು ಬಹಳ ಶ್ರಮಪಡಬೇಕಾಯಿತು. ಆದರೂ ಆ ಯತ್ನದಲ್ಲಿ ಅವರಿಗೆ ಸಂಪೂರ್ಣ

20. Muhammad in World Scriptures ಪುಟ: 47 ನೋಡಿರಿ. ಅಲ್ಲದೆ ದೆಹಲಿಯಿಂದ ಪ್ರಸಾರವಾಗುವ ಜಮಾಅತೆ ಇಸ್ಲಾಮಿಯ ಉರ್ದು ಮುಖ ಪತ್ರಿಕೆ 'ದಅವತ್'ನ 'ರಹ್ಮತೇ ಆಲಂ' ವಿಶೇಷಾಂಕದಲ್ಲಿಯೂ ಪ್ರಸ್ತುತ ಉದ್ಧರಣೆ ಕಾಣಬಹುದು. (1962)

21. ಅಬ್ದುಸ್ಸಲಾಮ್ ಬಿನ್ ತೈಮಿಯಾ (ಹಿ. 690-752, ಕ್ರಿ.ಶ. 1193-1254) ಎಂಬ ಅರಬ್ ಪಂಡಿತರಿಂದ ವಿರಚಿತ ಒಂದು ಹದೀಸ್ ಗ್ರಂಥವೇ 'ಮುನ್‌ತಖಲ್ ಅಖ್ಬಾರ್.' ಅದರಲ್ಲಿ 'ಜಿಝ್‌ಯಾ' ಅಧ್ಯಾಯದಲ್ಲಿ ಇಮಾಮ್ ಶಾಫಿಯವರು ಪ್ರಸ್ತುತ ಪ್ರವಾದಿ ವಚನವನ್ನು ವರದಿ ಮಾಡಿರುವರೆಂದು ಉಲ್ಲೇಖಿಸಲಾಗಿದೆ.

22. 'ಮುನ್‌ತಖಲ್ ಅಖ್ಬಾರ್'ಗೆ ಅಲ್ಲಾಮಾ ಶೌಕಾನಿ ಬರೆದ 'ನೈಲುಲ್ ಔತಾರ್' ಎಂಬ ವ್ಯಾಖ್ಯಾನ ಗ್ರಂಥ. ಭಾಗ - 6, ಪುಟ: 57 ನೋಡಿರಿ.

ಯಶಸ್ವಿಯಾಗಲು ಸಾಧ್ಯವಾಗಲಿಲ್ಲ. ಅಬೂ ರೈಹಾನ್ ಅಲ್ ಬೈರೂನಿ ಎಂಬ ಮಹಾ ಪಂಡಿತರು ಪಶ್ಚಿಮ ಏಶ್ಯಾದಿಂದ ಭಾರತಕ್ಕೆ ಬಂದು 13 ವರ್ಷಗಳ ಕಾಲ ಭಾರತದ ಪ್ರಾಚೀನ ಚರಿತ್ರೆಗಳ ಅಧ್ಯಯನ ನಡೆಸಿದ್ದರು. ಅವರು ಈ ಸಾಧನೆಗಾಗಿ ಕೆಲವು ಬ್ರಾಹ್ಮಣ ಪಂಡಿತರ ಶಿಷ್ಯತ್ವವನ್ನೂ ಸ್ವೀಕರಿಸಿದ್ದರು. ತನ್ನ ಅಧ್ಯಯನಗಳ ಫಲಿತಾಂಶಗಳನ್ನು ಅವರು ಹಲವು ಗ್ರಂಥಗಳಲ್ಲಿ ಉಲ್ಲೇಖಿಸಿರುವರು. ಈಗ ಮಲಯಾಳಕ್ಕೆ ಅನುವಾದಗೊಂಡಿರುವ 'ಅಲ್ ಬೈರೂನಿ ಕಂಡ ಇಂಡಿಯಾ' ಎಂಬುದು ಅವುಗಳಲ್ಲೊಂದು. ಅದರಲ್ಲಿ ಅವರು ತನ್ನ ಸೋಲನ್ನು ಒಪ್ಪಿಕೊಂಡಿರುವುದನ್ನು ನೋಡಿರಿ:

"ನನ್ನ ಗರಿಷ್ಠ ಸಾಮರ್ಥ್ಯ ಉಪಯೋಗಿಸಿ, ಲಭ್ಯವಾದ ಎಲ್ಲ ಆಧಾರಗಳನ್ನು ಸಂಗ್ರಹಿಸಿಯೂ ಅವರ ಸ್ಥಿತಿಗತಿಗಳ ಬಗ್ಗೆ ಸಂಪೂರ್ಣವಾಗಿ ತಿಳಿದುಕೊಳ್ಳುವ ಪ್ರಯತ್ನದಲ್ಲಿ ನಾನು ಸಂಪೂರ್ಣ ವಿಫಲನಾಗಿದ್ದೇನೆಂದೇ ಹೇಳಬೇಕಾಗಿದೆ."[23]

ಭಾರತದ ಜನತೆಯ ಪ್ರಾಚೀನ ಸಂಸ್ಕೃತಿಯ ಮೌಲ್ಯ ಮಾಪನವು ಅಷ್ಟೊಂದು ತ್ರಾಸದಾಯಕವಾಗಿದೆ. ಆದರೂ ಅನೇಕ ಮುಸ್ಲಿಮ್ ವಿದ್ವಾಂಸರು ಭಾರತೀಯರನ್ನೂ ಅವರ ಮತವನ್ನೂ ಅಂದಾಜಿಸಲು ಯತ್ನಿಸಿದ್ದಾರೆ. ಅಂತಹ ವಿದ್ವಾಂಸರಲ್ಲಿ ಪ್ರಖ್ಯಾತ ಸೂಫೀ ವಿದ್ವಾಂಸರಾದ ಅಬ್ದುಲ್ ಕರೀಮ್ ಅಲ್ ಜೀಲಿಯವರೂ (ಕ್ರಿ.ಶ. 1365) ಒಬ್ಬರು. ಅವರು 'ಅಲ್ ಇನ್ಸಾನುಲ್ ಕಾಮಿಲ್' ಎಂಬ ತನ್ನ ಗ್ರಂಥದಲ್ಲಿ ಹೀಗೆಂದಿದ್ದಾರೆ.

"ಬ್ರಾಹ್ಮಣ ಧರ್ಮದವರು ಪ್ರಪಂಚದ ಸಕಲ ವಸ್ತುಗಳು ಏಕದೇವನ ಸೃಷ್ಟಿಯೆಂದು ನಂಬುತ್ತಾರೆ. ಅವರು ಅಲ್ಲಾಹನ ಏಕತ್ವವನ್ನು ಒಪ್ಪುತ್ತಾರೆ. ಆದರೆ ದೇವದೂತರನ್ನಾಗಲೀ, ಪ್ರವಾದಿಗಳನ್ನಾಗಲೀ ಅವರು ಒಪ್ಪುವುದಿಲ್ಲ. ಆದುದರಿಂದ ಪ್ರವಾದಿಯವರ ಆಗಮನಕ್ಕಿಂತ ಹಿಂದಿನ ಸತ್ಯನಿಷ್ಠರ ನಿಲುಮೆಯೇ ಅವರಿಗೆ ಇರುವುದು. ತಾವು ಪ್ರವಾದಿ ಇಬ್ರಾಹೀಮ್‌ರ(ಅ) ಸಂತತಿಯವರೆಂದು ಬ್ರಾಹ್ಮಣರು ವಾದಿಸುತ್ತಾರೆ. ಅವರ ಬಳಿ ಇರುವ ವೇದವು ಇಬ್ರಾಹೀಮ್‌ರು(ಅ) ಬರೆದಿರುವುದಂತೆ. ಆದರೆ ಅದು ದೇವನ ಕಡೆಯಿಂದ ಅವತೀರ್ಣ ಗೊಂಡಿದೆಯೆಂದು ಅವರು ಹೇಳುವುದಿಲ್ಲ. ಆ ವೇದಗಳಲ್ಲಿ ತತ್ವಜ್ಞಾನವು ಒಳಗೊಂಡಿದೆ. ವೇದಗಳಲ್ಲಿ 5 ಭಾಗಗಳಿವೆ. ಅದರಲ್ಲಿ ನಾಲ್ಕು ಭಾಗಗಳನ್ನು ಓದಲು ಎಲ್ಲರಿಗೂ ಅನುಮತಿ ಯಿದೆ. ಆದರೆ ಐದನೆಯ ಭಾಗವು ಅತೀ ಗಹನವಾಗಿದ್ದು, ನಿಗೂಢ ತತ್ವಗಳನ್ನು ಒಳಗೊಂಡಿರು ವುದರಿಂದ ಕೆಲವು ವಿಶಿಷ್ಟ ವ್ಯಕ್ತಿಗಳಿಗೆ ಮಾತ್ರ ಅದನ್ನು ಓದಲು ಅನುಮತಿಯಿದೆ. ಒಂದು ವೇಳೆ ವೇದದ ಐದನೆಯ ಭಾಗವನ್ನು ಓದಿದರೆ ಇಸ್ಲಾಮ್ ಧರ್ಮಕ್ಕೆ ಸೇರುವುದು ಅನಿವಾರ್ಯ ವಾಗುತ್ತದೆಂಬುದಾಗಿ ಬ್ರಾಹ್ಮಣರಲ್ಲಿ ಪ್ರತೀತಿಯಿದೆ."[24]

23. ಅಲ್‌ಬೈರೂನಿ (ಕ್ರಿ.ಶ. 973-1048)ಯವರ 'ಕಿತಾಬುಲ್ ಹಿಂದ್' ಅನುವಾದ 'ಅಲ್‌ಬೈರೂನಿ ಕಂಡ ಇಂಡಿಯಾ' (ಸಾಹಿತ್ಯ ಅಕಾಡೆಮಿ ಪ್ರಕಾಶನ) ಪುಟ - 17.

ಪ್ರವಾದಿ ಇಬ್ರಾಹಿಮರಿಗೆ ಮೂವರು ಪತ್ನಿಯರಿದ್ದರು: ಸಾರಾಹ್, ಹಾಗಾರ್ ಮತ್ತು ಕತೂರಾ. ಸಾರಾಹ್‌ರ ಮಗ ಇಸ್‌ಹಾಕ್. ಇವರೇ ಯಹೂದಿಯರ ಕುಲನಾಯಕ. ಹಾಗಾರಿನ ಪುತ್ರ ಇಸ್ಮಾಈಲ್. ಇವರು ಹಿಜಾಝಿನ ಅರಬರ ಪಿತಾಮಹ. ಕತೂರಾಗೆ 7 ಮಂದಿ ಗಂಡು ಮಕ್ಕಳು ಹುಟ್ಟಿದ್ದರು. ಇವರಲ್ಲಿ ಒಬ್ಬನ ಹೆಸರು ಮಿದ್ಯಾನ್ ಅಥವಾ ಮದ್‌ಯನ್ ಎಂದಿತ್ತು.[25] ಮಿದ್ಯಾನ್‌ನ ತಲೆಮಾರಿನವರು ಅಕಬಾ ಕೊಲ್ಲಿಯ ತೀರ ಪ್ರದೇಶಗಳಲ್ಲಿ ವಾಸವಾಗಿದ್ದರು. ಪ್ರವಾದಿ ಮೂಸಾರವರ(ಅ) ಮಾವ ಪ್ರವಾದಿ ಶುಐಬ್(ಯಿತ್ರೋ)ರವರು ಮಿದ್ಯಾನ್‌ರಿಗೆ ನಿಯೋಗಿಸಲ್ಪಟ್ಟ ಒಬ್ಬ ಪ್ರವಾದಿಯೆಂದು ಕುರ್‌ಆನ್ ಹೇಳುತ್ತದೆ.[26] ಆ ಕಾಲದಲ್ಲಿ ಐದು ರಾಜವಂಶಗಳು ಅಲ್ಲಿ ರಾಜ್ಯಭಾರ ನಡೆಸಿದ್ದುವು. ಹೂರ್ ವಂಶವು ಅವುಗಳಲ್ಲೊಂದು.[27] ಈ ವಂಶಜರು ಆರ್ಯರ ದೇವತೆಗಳಾದ ಇಂದ್ರ, ಮಿತ್ರ, ವರುಣ ಮತ್ತು ನಾಸತ್ಯರನ್ನು ಆರಾಧಿಸುತ್ತಿದ್ದಾರೆಂದು ಏಷ್ಯಾ ಮೈನರ್‌ನ ಬಘಾಸ್ಕೊದಲ್ಲಿ ನಡೆಸಿದ ಭೂಗರ್ಭ ಶೋಧಗಳಿಂದ ದೊರೆತ ಶಿಲಾಫಲಕಗಳಲ್ಲಿ ಕಂಡು ಬಂದಿದೆ: ಹೂರ್‌ವಂಶದ ರಾಜ ಮತಿವಸ್ ಮತ್ತು ಹಿತ್ಯನ್ ರಾಜ ಸುಪಿಲಿಲಿಯುಮಸ್‌ರೊಳಗೆ ಆಗಿದ್ದ ಒಂದು ಕರಾರು ಪತ್ರವೂ ಅಲ್ಲಿ ದೊರೆತಿದೆ. ಆ ಕರಾರಿಗೆ ದಿವ್ಯ ಸಾಕ್ಷಿಗಳಾಗಿ ಪ್ರಸ್ತುತ ಆರ್ಯರ ದೇವತೆಗಳನ್ನು ಉಲ್ಲೇಖಿಸಲಾಗಿದೆ.[28] ಇದರಿಂದ ಮಿದ್ಯಾನ್ ರಾಜವಂಶಜರಾದ ಹೂರಿಯರು ಮತ್ತು ಇಂಡೋ-ಆರ್ಯರು ಒಂದೇ

---

24. 'ಅಲ್ ಇನ್ಸಾನುಲ್ ಕಾಮಿಲ್' (ಸೂಫಿಗಳ ತತ್ವಶಾಸ್ತ್ರವನ್ನು ವಿವರಿಸುವ ಒಂದು ಅರಬಿ ಗ್ರಂಥ) ಭಾಗ - 2, ಪುಟ: 80.

25. ಆದಿಕಾಂಡ 25:2 ನೋಡಿರಿ.

26. ಕುರ್‌ಆನ್, 7:85.

27. ಸಂಖ್ಯಾ ಪುಸ್ತಕ 31:8,9ರಲ್ಲಿ ಹೇಳಲಾಗಿದೆ. 'ಯಹೋವನು ಮೋಶೆಯೊಡನೆ ಆಜ್ಞಾಪಿಸಿದಂತೆ ಅವರು ಮಿದ್ಯಾನರೊಡನೆ ಯುದ್ಧ ಮಾಡಿದರು. ಗಂಡಸರನ್ನು ಸಂಪೂರ್ಣ ಕೊಂದರು. ಉಳಿದವರ ಪೈಕಿ ಅವರು ಮಿದ್ಯಾನರ ರಾಜಂದಿರಾದ ಏ.ವಿ. ರೇಕ್ಕಂ, ಸೂರ್, ಹೂರ್, ರೇಬ ಎಂಬೀ 5 ರಾಜರನ್ನು ಕೊಂದರು. ಇದರಿಂದ ಆ ಕಾಲದಲ್ಲಿ ಹೂರ್ ವಂಶವು ಮಿದ್ಯಾನ್ ದೇಶವನ್ನು ಆಳುತ್ತಿತ್ತೆಂದು ಗ್ರಹಿಸಬಹುದು.

28. ಆಧುನಿಕ ಚರಿತ್ರೆಕಾರರು ಇವರ ರಾಜ್ಯವನ್ನು 'ಮಿಟ್ಟಾಣಿ' ಅಥವಾ 'ಮಿತ್ತಣಿ' ಎಂದು ಕರೆಯುತ್ತಾರೆ. ಡಾ| ಎ. ಅಯ್ಯಪ್ಪನ್ ತನ್ನ 'ಭಾರತದ ಪ್ರಾಚೀನತೆ'ಯಲ್ಲಿ ಹೀಗೆ ಬರೆದಿರುವರು: 'ಕ್ರಿ.ಪೂ. ಸುಮಾರು 1500ರಲ್ಲಿ, ಅನಟೋಲಿಯದ ಪೂರ್ವ ಭಾಗದಲ್ಲಿ ಸಿರಿಯಾವರೆಗೆ 'ಹೂರಿಯರ್' ಎಂಬ ಹೆಸರಿನಿಂದ ಪ್ರಸಿದ್ಧರಾದ ಒಂದು ಜನತೆಯಿತ್ತು. ಅನಂತರ ಮಿತ್ತಣಿ ಎಂಬ ಹೆಸರಿನ ಒಂದು ಪುಟ್ಟ ಸಾಮ್ರಾಜ್ಯವು ಹೂರಿಯರಿಂದ ಸ್ಥಾಪಿಸಲ್ಪಟ್ಟಿತು. ಹೂರಿಯರ ಸಂಬಂಧಿಗಳಾದ 'ಹಿಕ್‌ಸೋಸ್' (ಕುರುಬ ರಾಜರು) ಎಂಬ ಪಂಗಡದವರು ಪ್ರಬಲರಾಗಿ ಈಜಿಪ್ಟನ್ನು ಆಕ್ರಮಿಸಿದರು."

ಮತದವರೆಂದು ವಿದಿತವಾಯಿತು. ಹಾಗಾದರೆ ಆರ್ಯ ಜನತೆಯು ಮಿದ್ಯಾನರಂತೆ ಅಬ್ರಹಾಮರ ಪರಂಪರೆಗೆ ಸೇರಿದವರೆಂಬ ಮುಸ್ಲಿಮ್ ವಿದ್ವಾಂಸರ ವಾದವು ಆಧಾರರಹಿತವಲ್ಲ.

ಆದರೆ ಬ್ರಾಹ್ಮಣ ಮತದವರು ದೇವದೂತರನ್ನು ಮತ್ತು ಪ್ರವಾದಿಗಳನ್ನು ಒಪ್ಪುವುದಿಲ್ಲ ಹಾಗೂ ವೇದಗಳು ದೈವಿಕವೆಂದು ಅವರು ನಂಬುವುದಿಲ್ಲವೆಂಬ ವಾದಗಳು ಸರಿ ಕಾಣುವುದಿಲ್ಲ. ನಖ್ಶ್‌ಬಂದಿ ಪರಂಪರೆಯ ಸೂಫಿವರ್ಯರಾದ ಮಿರ್ಝಾ ಮಝ್ಹರ್ ಜಾನೆ ಜಾನಾನ್‌ರವರು ಭಾರತೀಯ ವೇದಗಳು ಅಲ್ಲಾಹನಿಂದ ಅವತೀರ್ಣಗೊಂಡವುಗಳಾಗಿರ ಬೇಕೆಂದೇ ಹೇಳುತ್ತಾರೆ.[29] ವೇದಕರ್ತರಾದ ಮಹರ್ಷಿಗಳು ಅವು ದೇವವಚನಗಳೆಂದೇ ಹೇಳಿರುವುದಾಗಿ ದೇವಿಪ್ರಸಾದ ಚಟ್ಟೋಪಾಧ್ಯಾಯರು 'ಭಾರತೀಯ ತತ್ವ ಚಿಂತನೆಗಳು' ಎಂಬ ಕೃತಿಯಲ್ಲಿ ಉಲ್ಲೇಖಿಸಿರುವರು. ಅವರ ಮಾತುಗಳಲ್ಲಿಯೇ ನೋಡಿರಿ:

"ಎಲ್ಲದರಲ್ಲಿಯೂ ಈಶ್ವರ ಚೈತನ್ಯವನ್ನು ಹೇರಿ ಅಭ್ಯಾಸವಾದ ಅವರು ಇದಕ್ಕೆ ಕೂಡಾ ಈಶ್ವರ ಚೈತನ್ಯವೇ ಕಾರಣವೆಂದು ಭಾವಿಸಿದರು. ಆದುದರಿಂದ ಕವಿ(ಋಷಿ)ಯೇ ಘೋಷಿಸಿದ, 'ನನ್ನಲ್ಲಿ ಈಶ್ವರನು ಪ್ರವೇಶಿಸಿರುವನು.' ಎಂಬುದಾಗಿ... ಬ್ರಾಹ್ಮಣ ಮತದಲ್ಲಿ ಏಕೇಶ್ವರ ವಾದವು ಸ್ಥಾನ ಗಳಿಸಿದಾಗ ವೇದಗಳ ನಿರ್ಮಾತೃ ಸರ್ವೇಶನೆಂಬುದಾಗಿ ವಿಧಿಸಲ್ಪಟ್ಟಿತು. ಈಶ್ವರನಿಗೆ ಆದಿ ಮತ್ತು ಅಂತ್ಯವಿಲ್ಲ. ಹಾಗಾದರೆ ವೇದಕ್ಕೆ ಆದಿ ಮತ್ತು ಅಂತ್ಯವಿಲ್ಲ. ಈಶ್ವರ ನಿರ್ಮಿತವಾದುದರಿಂದ ಅದರಲ್ಲಿ ಪ್ರಮಾದಗಳಿರಲಾರದು. ಅದು ಸಂಪೂರ್ಣ ಸತ್ಯ, ಸಂಪೂರ್ಣ ಪಾವನ ಮತ್ತು ಸಂಪೂರ್ಣ ಪ್ರತ್ಯಕ್ಷವೂ ಆಗಿದೆ."[30]

ಇದುವೇ ಬ್ರಾಹ್ಮಣರ ನಂಬುಗೆ. ಒಮ್ಮೆ ಸಂಸ್ಕೃತ ಮಹಾಕವಿಯಾದ ಕಾಳಿದಾಸನ ನಾಲಗೆಯಿಂದ 'ಮಂತ್ರ ಕೃತಃ' ಎಂಬ ಮಾತು ಹೊರಬಿತ್ತು. ಆ ಸಂದರ್ಭದಲ್ಲಿ ಕವಿ ಭವಭೂತಿಯು ಹಣೆ ನಿಮಿರಿಸಿ ಕೋಪ ವ್ಯಕ್ತಪಡಿಸಿದರು. ಮಂತ್ರಕೃತಃ ಎನ್ನುವ ಬದಲು

(ಭಾರತದ ಪ್ರಾಚೀನತೆ, ಪುಟ: 103, 104) ಮುಂದುವರಿಯುತ್ತಾ ಹೀಗೆಂದಿರುವರು: "ಸುಪ್ಪಿಲುಲಿಯುಮಸ್ ಚಕ್ರವರ್ತಿ ಮತ್ತು ಮಿತ್ತಾಸಿ ಚಕ್ರವರ್ತಿಯಾದ ಮತಿನಸ್‌ರು ಮಾಡಿಕೊಂಡಿದ್ದ ಕರಾರು ಪತ್ರದಲ್ಲಿ ಇಂದ್ರ, ಮಿತ್ರ, ವರುಣ, ನಾಸತ್ಯಾದಿ ವೈದಿಕ ದೇವತೆಗಳನ್ನು ಸಾಕ್ಷಿಗಳಾಗಿ ಬರೆದಿದ್ದರು." (ಪುಟ: 107) ಇವುಗಳಿಂದ ಹೂರಿಯರು ಅಥವಾ ಮಿದ್ಯಾನರು ಆರ್ಯ ವರ್ಗದವರಾಗಿದ್ದರೆಂಬುದು ರುಜುವಾಯಿತಷ್ಟೆ. ಮಿದ್ಯಾನ ರಾದರೋ ಪ್ರವಾದಿ ಇಬ್ರಾಹೀಮ್‌ರ(ಅ) ಕತೂರಾ ಎಂಬ ಹೆಂಡತಿಗೆ ಜನಿಸಿದ ಮಿದ್ಯಾನ್‌ನ ವಂಶಜ ರಾಗಿರುವರು. ಹಾಗಾದರೆ ಇಂಡೋ-ಆರ್ಯರು ಇಬ್ರಾಹೀಮರ ಸಂತಾನ ಪರಂಪರೆಗೆ ಸೇರಿದವರಾಗಿರಬಹುದು. ಈ ರೀತಿ ಬ್ರಾಹ್ಮಣ ಮತವು ಆದಿಯಲ್ಲಿ ಅಬ್ರಹಾಮರ ಮತವಾಗಿರಬಹುದು.

29. ಇಸ್ಲಾಮ್ ಔರ್ ಅಸ್ರೆ ಜದೀದ್ (ದೆಹಲಿ) ಎಂಬ ಮಾಸ ಪತ್ರಿಕೆಯ ಭಾಗ 1, ಸಂಚಿಕೆ 1, ಪುಟ 43ರಲ್ಲಿ ಉದ್ಧರಿಸಿರುವುದು.

30. ಭಾರತೀಯ ತತ್ವಚಿಂತನೆ(ಕರೆಂಟ್ ಬುಕ್ಸ್ ಪ್ರಕಾಶನ) ಪುಟ: 336.

ಮಂತ್ರದೃಶವೆಂದು ಹೇಳಬೇಕಾಗಿತ್ತೆಂದು ಭವಭೂತಿಯ ವಾದ. ಋಷಿಗಳು ಮಂತ್ರ ರಚಕರಲ್ಲ. ಮಂತ್ರ ದಾರ್ಶನಿಕರು ಮಾತ್ರ.[31] ಒಟ್ಟಿನಲ್ಲಿ ವೇದಗಳು ದೈವಿಕ ಜ್ಞಾನ ದರ್ಶನದ ಮೂಲಕ ಲಭಿಸಿತೆಂಬ ವಿಶ್ವಾಸ ಬ್ರಾಹ್ಮಣರಲ್ಲಿತ್ತು. ಆದುದರಿಂದ ಬ್ರಾಹ್ಮಣರಿಗೆ ಪ್ರವಾದಿತ್ವ ದಲ್ಲಿ ವಿಶ್ವಾಸವಿರಲಿಲ್ಲವೆಂಬ ಜೀಲಿಯವರ ವಾದವು ಸಮಂಜಸವಾಗಿ ತೋರುವುದಿಲ್ಲ.

ಹಾಗೆಯೇ ಭಾರತೀಯರು ಪ್ರವಾದಿತ್ವವನ್ನು ನಂಬುವುದಿಲ್ಲವೆಂಬ ವಾದವೂ ಸರಿಯಲ್ಲ. ಅವರು ಅವತಾರ ಪುರುಷರಲ್ಲಿ ವಿಶ್ವಾಸವಿಡುತ್ತಾರೆ. ಭಾರತೀಯ ಅವತಾರ ಪುರುಷರು ತತ್ವ ಮತ್ತು ಉದ್ದೇಶಗಳಲ್ಲಿ ಮುಸ್ಲಿಮರ ಪ್ರವಾದಿಗಳನ್ನು ಹೋಲುತ್ತಾರೆ. ಧರ್ಮ ಸಂಸ್ಥಾಪನೆಯೇ ಪ್ರವಾದಿ ದೌತ್ಯದ ಮತ್ತು ಅವತಾರ ಪುರುಷರ ಗುರಿ. ವೇದವ್ಯಾಸ ಎಂಬ ಗುಪ್ತ ನಾಮದಿಂದ ಪ್ರಖ್ಯಾತನಾದ ಬಾದರಾಯಣ ಕೃಷ್ಣ ವಿರಚಿತವೆಂದು ಪ್ರತೀತಿಯಿರುವ 'ಭಗವದ್ಗೀತೆ'ಯಲ್ಲಿ ಹೀಗಿದೆ:

"ಯದಾ ಯದಾ ಹಿ ಧರ್ಮಸ್ಯ ಗ್ಲಾನಿರ್ಭವತಿ ಭಾರತ,
ಅಭ್ಯುತ್ಥಾನಮದರ್ಮಸ್ಯ ತದಾತ್ಮಾನಂ ಸೃಜಾಮ್ಯಹಮ್
ಪರಿತ್ರಾಣಾಯ ಸಾಧೂನಾಂ ವಿನಾಶಾಯ ಚ ದುಷ್ಕೃತಾಮ್
ಧರ್ಮ ಸಂಸ್ಥಾಪನಾರ್ಥಾಯ ಸಂಭವಾಮಿ ಯುಗೇ ಯುಗೇ"[32]

(ಭಗವಾನ್ ಶ್ರೀಕೃಷ್ಣನು ಅರ್ಜುನನಿಗೆ ಉಪದೇಶಿಸುತ್ತಾನೆ; "ಎಲೈ ಭರತ ಕುಲಜಾತನಾದ ಅರ್ಜುನಾ! ಯಾವಾಗಲೆಲ್ಲ ಧರ್ಮಕ್ಕೆ ಅವನತಿ ಮತ್ತು ಅಧರ್ಮಕ್ಕೆ ಅಭ್ಯುದಯವು ಸಂಭವಿಸುತ್ತದೆಯೋ ಆ ಸಂದರ್ಭದಲ್ಲೆಲ್ಲಾ ನಾನು ಅವತರಿಸಿ ಬರುತ್ತೇನೆ. ಶಿಷ್ಟ ಜನರ ಸಂರಕ್ಷಣೆ ಮತ್ತು ದುಷ್ಟ ಜನರ ನಿಗ್ರಹವನ್ನು ಮಾಡಿ, ತನ್ಮೂಲಕ ಧರ್ಮವನ್ನು ಸಂಸ್ಥಾಪನೆ ಮಾಡಲಿಕ್ಕಾಗಿ ನಾನು ಪ್ರತಿ ಯುಗದಲ್ಲಿಯೂ ಅವತರಿಸುತ್ತೇನೆ.)

ಇಸ್ಲಾಮಿನ ದೃಷ್ಟಿಕೋನದಂತೆ ಪ್ರವಾದಿಗಳು ದೇವರು ಅಥವಾ ದೇವಾಂಶ ಸಂಭೂತರಲ್ಲ. ಆದರೆ ಅವರಲ್ಲಿ ದಿವ್ಯ ಚೇತನವು ಹರಿಯುತ್ತವೆ. ಈ ದಿವ್ಯ ಜ್ಞಾನ ಶಕ್ತಿಯನ್ನೇ ಭಾರತೀಯರು ಅಲಂಕಾರವಾಗಿ ದೇವಾವತಾರವೆಂದು ವರ್ಣಿಸುತ್ತಾರೆ. ಮೇಲೆ ಉದ್ಧರಿಸಿದ ಶ್ಲೋಕಗಳಲ್ಲಿ ದಿವ್ಯ ಚೈತನ್ಯವು ಪ್ರತೀ ಯುಗದಲ್ಲಿಯೂ ಅವತರಿಸುವುದೆಂದೂ ಅವರ ಉದ್ದೇಶವು ಧರ್ಮ ಸಂಸ್ಥಾಪನೆಯೆಂದೂ ಹೇಳಿರುವುದರಿಂದ ಭಾರತೀಯರಿಗೆ ದೇವ ಸಂದೇಶ ವಾಹಕರಲ್ಲಿ ನಂಬಿಕೆ ಇತ್ತೆಂದು ವ್ಯಕ್ತವಾಗುತ್ತದೆ.

ಭಾರತೀಯರು ದಶಾವತಾರಗಳಲ್ಲಿ ವಿಶ್ವಾಸವಿಡುತ್ತಾರೆ. ಇನ್ನೊಂದು ವರ್ಗದವರ ಅಭಿಪ್ರಾಯದಂತೆ 24 ಅವತಾರಗಳಿವೆ. ಕೊನೆಯ ಅವತಾರ ಮಾತ್ರ ಬಾಕಿ ಇದೆ. ಕಲಿಯುಗದಲ್ಲಿ ಅವತರಿಸುವುದೆಂದು ವಿಶ್ವಾಸವಿರುವ ಕಲ್ಕಿ ಅವತಾರವೇ ಕೊನೆಯದ್ದು. ಕಲ್ಕಿ ಅವತಾರದ ಕುರಿತು

---

31. ಅದೇ ಗ್ರಂಥ ಪುಟ: 336

32. ಭಗವತ್ ಗೀತೆ ಅ. 4 ಶ್ಲೋಕ 7, 8.

ಹಿಂದೂ ಪುರಾಣಗಳಲ್ಲಿ ಸುದೀರ್ಘ ವಿವರಣೆಗಳಿವೆ. ಹಿಂದಿನ ಅವತಾರ ಪುರುಷರಲ್ಲಿ ಓರ್ವನಾದ ಭಗವಾನ್ ಶ್ರೀ ಕೃಷ್ಣನು ಹೇಳಿದ ಹಾಗೂ ಶ್ರೀ ಶುಕಮುನಿ ಮತ್ತಿತರರು ಆಲಿಸಿದ ಒಂದು ಭವಿಷ್ಯವಾಣಿಯು ಕಲ್ಕಿ ಪುರಾಣದಲ್ಲಿ ಮತ್ತು ಮಹಾ ಭಾಗವತದಲ್ಲಿ ಉಲ್ಲೇಖಿಸ ಲ್ಪಟ್ಟಿದೆ. ಅದರ ಸಂಗ್ರಹವನ್ನು ನೋಡಿರಿ.

ಕಲಿಯುಗದ 3658ನೇ ವರ್ಷದಲ್ಲಿ ಆತನು (ಕಲ್ಕಿ) 'ಶಾಮ ದ್ವೀಪ'ದಲ್ಲಿ ಅವತರಿಸುತ್ತಾನೆ. ಆತನು ಲೋಕದ ಪಾಪಭಾರವನ್ನು ವಹಿಸುತ್ತಾನೆ. ಆತನ ತಂದೆ ತಾಯಿಗಳ ಹೆಸರು 'ವಿಷ್ಣು ಯಶಸ್' ಮತ್ತು 'ಸುಮತಿ' ಎಂದಿರುವುದು. 'ನರ್ಮೀಸಾಕ್ಕು ತಿಂಗಳ' 12ನೇ ಸೋಮವಾರ ಉದಿಸಿ ಎರಡು ಗಳಿಗೆಗಳಾಗುವಾಗ ಆತನು ಹುಟ್ಟುತ್ತಾನೆ. ಆತನು ಗರ್ಭಾಶಯದಲ್ಲಿರುವಾಗಲೇ ತಂದೆ ತೀರಿ ಹೋಗುವರು. ಆತನ ಶಿಶು ಪ್ರಾಯದಲ್ಲಿಯೇ ತಾಯಿಯೂ ಮರಣ ಹೊಂದುವರು. ಗುಹೆಯೊಂದರಲ್ಲಿ ಪರಶುರಾಮನು ಆತನಿಗೆ ವೇದಜ್ಞಾನವನ್ನು ಕಲಿಸಿಕೊಡುವನು. ಉತ್ತರ ಮಲೆನಾಡಿಗೆ ಆತನು ಪಲಾಯನ ಮಾಡುವನು. ಅನಂತರ ಖಡ್ಗದೊಡನೆ ಮರಳಿ ಬಂದು ಜನ್ಮದೇಶವನ್ನು ವಶಪಡಿಸುವನು."[33]

ಈ ಭವಿಷ್ಯವಾಣಿಯು ಪ್ರವಾದಿ ಮುಹಮ್ಮದ್‌ರ(ಸ) ಚರಿತ್ರೆಯ ಸುಪ್ರಧಾನ ಘಟನೆಗಳನ್ನು ಸೂಚಿಸುತ್ತದೆ. ಆದುದರಿಂದ ಭಾರತೀಯ ಪುರಾಣಗಳಲ್ಲಿ ದೀರ್ಘ ದರ್ಶನ ಮಾಡಿರುವ ಕಲ್ಕಿ ಅವತಾರದ ವಿಭಾವನೆಯು ಪ್ರವಾದಿಯವರೆಂಬುದಾಗಿ ಕೆಲವು ಮುಸ್ಲಿಮ್ ವಿದ್ವಾಂಸರು ಅಭಿಪ್ರಾಯಪಟ್ಟಿದ್ದಾರೆ. ಅವರ ಅಭಿಪ್ರಾಯದಂತೆ ವಿಷ್ಣುಯಶಸ್ ಎಂದರೆ ಪ್ರವಾದಿಯವರ(ಸ) ತಂದೆ ಅಬ್ದುಲ್ಲಾ, ಸುಮತಿ ಅಥವಾ ಸೌಮ್ಯವತಿ ಎಂದರೆ ಪ್ರವಾದಿಯವರ ತಾಯಿ ಅಮಿನಾ ಹಾಗೂ 'ಶಾಮ ದ್ವೀಪ'ವೆಂದರೆ ಅರೇಬಿಯಾ ಆಗಿದೆ. ಹೀಗೆಯೇ ನರ್ಮೀಸಾಕ್ಕು ತಿಂಗಳ 12ನೆಯ ದಿನವೆಂಬುದು ರಬೀ ಉಲ್ ಅವ್ವಲ್ ತಿಂಗಳ 12ನೆಯ ದಿನವಾಗಿದೆ. ಅಂದು ಪ್ರಭಾತದಲ್ಲಿಯೇ ಪ್ರವಾದಿಯವರು ಜನ್ಮ ತಾಳಿರುವರು. ಅಂದು ಸೋಮವಾರವಾಗಿತ್ತು. ಪ್ರವಾದಿಯವರು(ಸ) ಹುಟ್ಟುವುದಕ್ಕಿಂತ ಮೊದಲೇ ಅವರ ತಂದೆಯವರು ನಿಧನರಾಗಿದ್ದು, ಬಾಲ್ಯದಲ್ಲಿ ತಾಯಿಯೂ ನಿಧನರಾಗಿರುವುದರಿಂದ ಈ ಅಭಿಪ್ರಾಯಕ್ಕೆ ಇನ್ನಷ್ಟು ಬಲ ಬರುತ್ತದೆ. ಪರಶುರಾಮ ಎಂಬುದಾಗಿ ಇಲ್ಲಿ ಹೇಳಿರುವುದು ದೇವದೂತರಾದ ಜಿಬ್ರೀಲ್(ಗೇಬ್ರಿಯೇಲ್)ರನ್ನು ಸೂಚಿಸುತ್ತದೆ. ಪ್ರವಾದಿಯವರು ತಮ್ಮ 40ನೆಯ ವರ್ಷ ಪ್ರಾಯದಲ್ಲಿ ಹಿರಾಗುಹೆಯಲ್ಲಿ ಧ್ಯಾನನಿರತರಾಗಿದ್ದಾಗ ಜಿಬ್ರೀಲ್ ಪ್ರತ್ಯಕ್ಷರಾಗಿ ಕುರ್‌ಆನಿನ ಕೆಲವು ವಾಕ್ಯಗಳನ್ನು ಓದಿ ಹೇಳಿದರು. ಪರಶುರಾಮನು ಗುಹೆಯಲ್ಲಿ ವೇದ ಜ್ಞಾನವನ್ನು ನೀಡುವನೆಂಬ ಪ್ರಸ್ತಾವನೆಯು ಇದರ ಸೂಚನೆಯಾಗಿರಬೇಕು. ಮದೀನಾವು ಮಕ್ಕಾದ ಉತ್ತರ ಭಾಗದಲ್ಲಿರುವ ಒಂದು ಮಲೆನಾಡು ಪ್ರದೇಶ. ಪ್ರವಾದಿವರ್ಯರು(ಸ) ಶತ್ರು ಸಮೂಹದ ಗೂಢ ತಂತ್ರದಿಂದ ರಕ್ಷಣೆ ಪಡೆಯಲು ತಲೆಮರೆಸಿ ಮದೀನಾದಲ್ಲಿ ಹೋಗಿ ನೆಲೆಸಿದರು. ಅಲ್ಲಿಯ ಜನತೆ ಪ್ರವಾದಿಯವರನ್ನು(ಸ) ಮನಸಾ ವಾಚಾ ಕರ್ಮಣಾ

33. ದಲ್‌ವತ್, 'ರಹ್ಮತೇ ಆಲಂ' ವಿಶೇಷಾಂಕ(1962)

ಬೆಂಬಲಿಸಿತು. ಕೊನೆಗೆ ಪ್ರವಾದಿವರ್ಯರು(ಸ) ಸೇನಾ ಸಮೇತರಾಗಿ ಮರಳಿ ಬಂದು ಮಕ್ಕಾ ನಗರವನ್ನು ಅಧೀನಪಡಿಸಿದರು. ಇದೇ ಚಾರಿತ್ರಿಕ ಘಟನೆಯನ್ನು ಪ್ರಸ್ತುತ ಪ್ರವಚನದ ಕೊನೆಯಲ್ಲಿ ಸೂಚಿಸಿದ್ದಿರಬೇಕು.

ಅಥರ್ವ ವೇದದ 20ನೆಯ ಕಾಂಡದಲ್ಲಿ 'ಕುಂದಪ' ಎಂಬ ಒಂದು ವಾಕ್ಯವಿದೆ. ಅದರಲ್ಲಿ ಒಂದು 'ಮಾಮಾ' ಮುನಿಯ ಬಗ್ಗೆ ಪ್ರಸ್ತಾಪಿಸಿರುವುದನ್ನು ಕಾಣಬಹುದು. ಈ ಮಾಮಾ ಎಂಬುದು ಮುಹಮ್ಮದ್ ಎಂಬ ಸಂಜ್ಞಾ ನಾಮದ ಭಾರತೀಯ ರೂಪವಾಗಿರಬೇಕೆಂದು ಕೆಲವರು ಅಭಿಪ್ರಾಯಪಡುತ್ತಾರೆ. ಆದರೆ ಭವಿಷ್ಯ ಪುರಾಣದಲ್ಲಿ ಬಂದ ಒಂದು ಪ್ರವಚನವು ಇದಕ್ಕಿಂತ ಸ್ಪಷ್ಟವಾಗಿದೆ. ವೇದವ್ಯಾಸ ಮುನಿಯಿಂದ ವಿರಚಿತವೆಂದು ನಂಬಲಾದ ಆ ಪುರಾಣದಲ್ಲಿ ಭವಿಷ್ಯತ್ ಘಟನೆಗಳು ಉಲ್ಲೇಖಿಸಲ್ಪಟ್ಟಿವೆ. ಭವಿಷ್ಯ ಎಂಬ ಹೆಸರಿಗೆ ಅದುವೇ ಪೂರಕ. ಲೋಕವೆಲ್ಲಾ ಅಧರ್ಮ ಮತ್ತು ಅಕ್ರಮಗಳಿಂದ ತುಂಬಿರುವ ಸಮಯದಲ್ಲಿ ಮಾನವಕುಲದ ಉದ್ಧಾರಕ್ಕಾಗಿ 'ಮಹಾಮದಾ' ಎಂಬ ಒಬ್ಬ ವಿದೇಶಿ ಆಚಾರ್ಯನು ತನ್ನ ಶಿಷ್ಯ ಗಣದೊಡನೆ ಪ್ರತ್ಯಕ್ಷನಾಗುತ್ತಾನೆಂದು ಪ್ರಸ್ತುತ ಪುರಾಣದಲ್ಲಿ ಭವಿಷ್ಯ ಹೇಳಲಾಗಿದೆ. 'ಮಹಾಮದಾ' ಎಂಬುದು ಮುಹಮ್ಮದ್ ಎಂಬುದರ ಭಾರತೀಯ ಉಚ್ಚಾರಣೆಯಾಗಿರಬೇಕು. ವ್ಯಾಸನ ಮಾತುಗಳಲ್ಲಿಯೇ ನೋಡಿರಿ:

"ಏತಸ್ಮಿನ್ನಂತರೇ ಮ್ಲೇಚ್ಛ ಆಚಾರ್ಯೇಣ ಸಮನ್ವಿತಃ
ಮಹಾಮದ ಇತಿಖ್ಯಾತಃ ಶಿಷ್ಯ ಶಾಖಾ ಸಮನ್ವಿತಃ"[34]

"ಹೀಗಿರುವಾಗ ಮಹಾಮದಾ ಎಂಬ ಹೆಸರಿನ ಒಬ್ಬ ಮ್ಲೇಚ್ಛ ಆಚಾರ್ಯನು ತನ್ನ ಶಿಷ್ಯ ಕುಲದೊಡನೆ ಪ್ರತ್ಯಕ್ಷನಾಗುವನು."

ಮ್ಲೇಚ್ಛ ಎಂಬ ಶಬ್ದಕ್ಕೆ ಪರದೇಶದವನು ಎಂಬ ಅರ್ಥವಿದೆ. ಆದುದರಿಂದ ಈ ಆಚಾರ್ಯನು ಭಾರತದಲ್ಲಿ ಆಗಮಿಸುವುದಲ್ಲವೆಂಬುದನ್ನೂ ಮುನಿಯು ಸೂಚಿಸಿದ್ದಾನೆ. ಒಟ್ಟಿನಲ್ಲಿ, ಭಾರತೀಯ ಮತ ಸಾಹಿತ್ಯಗಳಲ್ಲಿ ಓರ್ವ ಮಹಾಚಾರ್ಯನ ಆಗಮನವನ್ನು ನಿರೀಕ್ಷಿಸಿರುವುದಾಗಿ ಕಾಣಬಹುದು. ಆದುದರಿಂದ ಬ್ರಾಹ್ಮಣ ಮತದವರು ಪ್ರವಾದಿಗಳು ಮತ್ತು ಅವರ ಪ್ರವಾದಿತ್ವದಲ್ಲಿ ವಿಶ್ವಾಸವಿಡುವುದಿಲ್ಲವೆಂಬ ವಾದವು ಸರಿಯಲ್ಲ. ಆದರೆ ಪ್ರವಾದಿಯನ್ನು ಸೂಚಿಸುವ ಸಾಂಕೇತಿಕ ಸಂಜ್ಞೆಯಲ್ಲಿ ಮಾತ್ರ ವ್ಯತ್ಯಾಸವಿದೆ.

---

34. ಭವಿಷ್ಯ ಪುರಾಣ, ಕಾಂಡ - 3 ಪರ್ವ - 3 ಅಧ್ಯಾಯ - 3 ಶ್ಲೋಕ - 25.

ಏಕದೇವ ಸಿದ್ಧಾಂತ

ಋಗ್ವೇದ ಭಾರತೀಯರ ಅತಿ ಪ್ರಾಚೀನ ಮತಗ್ರಂಥವೆಂಬುದನ್ನು ಈ ಹಿಂದೆ ನೋಡಿದ್ದೇವೆ. ಅದರಲ್ಲಿ ದೇವನ ಕೀರ್ತನೆ ಮತ್ತು ಅಭೀಷ್ಟಗಳನ್ನು ಬೇಡುವ ಕವಿತೆಗಳಿವೆ. ಈ ಕವಿತೆಗಳನ್ನು 'ಋಕ್'ಗಳು ಅಥವಾ ಮಂತ್ರಗಳೆಂದು ಕರೆಯುತ್ತಾರೆ. ಹಲವು ಮಂತ್ರಗಳು ಸೇರಿದರೆ ಒಂದು ಶ್ಲೋಕವಾಗುತ್ತದೆ. ಋಗ್ವೇದದಲ್ಲಿ 1017 ಶ್ಲೋಕಗಳಿವೆ. ಕೆಲವು ಶ್ಲೋಕಗಳಿಗೆ ಕುರ್‌ಆನಿನ ಪ್ರಾರಂಭದ ಅಧ್ಯಾಯವಾಗಿರುವ ಫಾತಿಹಾದೊಂದಿಗೆ ಹೆಚ್ಚಿನ ಹೋಲಿಕೆಯನ್ನು ಕಾಣಬಹುದು. ಒಟ್ಟಿನಲ್ಲಿ ಅದೊಂದು ದೇವಗ್ರಂಥವಲ್ಲವೆನ್ನಲು ನಿರ್ವಾಹವಿಲ್ಲ.

ವೇದದಲ್ಲಿ 33 ದೇವನಾಮಗಳು ಕೀರ್ತನೆ ಮಾಡಲ್ಪಟ್ಟಿರುವುದಾಗಿ ಒಂದು ಋಕ್‌ನಿಂದ ಗ್ರಹಿಸಬಹುದು.[1] ಈ ದೇವತೆಗಳು ಯಾರು? ಇದರ ಕುರಿತು ಒಂದು ನಿರ್ದಿಷ್ಟ ಅಭಿಪ್ರಾಯ ವೇದ ಪಾರಂಗತರಿಗಿಲ್ಲ. ಆದರೂ ಈ ದೇವತೆಗಳು ಅದೃಶ್ಯ ಲೋಕದೊಡನೆ ಸಂಪರ್ಕವಿರುವ ಶಕ್ತಿಗಳೆಂಬ ವಿಷಯದಲ್ಲಿ ಸಂಶಯವಿಲ್ಲ. ಈ ದೇವತೆಗಳು ಬಹುಶಃ ಮುಸ್ಲಿಮರು ಮಲಕ್‌ಗಳೆಂದೂ ಕ್ರೈಸ್ತರು ಏಂಜಲ್‌ಗಳೆಂದೂ ಕರೆಯುವ ಅದೃಶ್ಯ ಶಕ್ತಿಗಳಾಗಿರಬೇಕು. ಆದರೆ ಪಾಶ್ಚಾತ್ಯ ವಿಮರ್ಶಕರ ಅಭಿಪ್ರಾಯದಂತೆ ಆ ದೇವತೆಗಳು ಕೇವಲ ನೈಸರ್ಗಿಕ ಶಕ್ತಿಗಳು. ಇಂಡೋ-ಆರ್ಯನ್ ಜನತೆಯು ಆರಂಭದಲ್ಲಿ ನೈಸರ್ಗಿಕ ಶಕ್ತಿಗಳನ್ನು ಆರಾಧಿಸುತ್ತಿದ್ದರೆಂದೂ ಬರಬರುತ್ತಾ ಏಕದೇವ ವಿಶ್ವಾಸವನ್ನು ಹೊಂದಿದರೆಂದೂ ಅವರ ಅಭಿಪ್ರಾಯ.

ಆದರೆ, ಹಲವು ಭಾರತೀಯ ವಿದ್ವಾಂಸರು ಈ ಅಭಿಪ್ರಾಯವನ್ನು ವಿರೋಧಿಸಿದ್ದಾರೆ. ಸ್ವಂತ ಮನೆಯ ವಿಷಯ ಇತರರಿಗಿಂತ ಹೆಚ್ಚಾಗಿ ಮನೆಯವರಿಗೆ ತಿಳಿದಿರುತ್ತದಲ್ಲವೇ? ಆದುದರಿಂದ ಈ ವಿಷಯದಲ್ಲಿ ಭಾರತೀಯ ವಿದ್ವಾಂಸರ ಅಭಿಪ್ರಾಯಗಳಿಗೆ ಪ್ರಾಮುಖ್ಯ ನೀಡಬೇಕಾಗಿದೆ. ದೇವತೆಗಳಲ್ಲಿರುವ ದೇವನಾಮಗಳು ಯಥಾರ್ಥದಲ್ಲಿ ಏಕದೇವನ ವಿವಿಧ ನಾಮಗಳೆಂದೂ ಆದುದರಿಂದಲೇ ಆರ್ಯರು ಏಕದೇವನನ್ನೇ ಆರಾಧಿಸುತ್ತಿದ್ದುದೆಂದೂ ಅವರ ನಿಲುವು. ಈ ರೀತಿ ವೇದದಲ್ಲಿ ಏಕದೇವನ ನೂರು ನಾಮಗಳಿವೆಯೆಂದು 'ಆರ್ಯ ಸಮಾಜ' ಸ್ಥಾಪಕರಾದ

1. ಋಗ್ವೇದಃ ಮಂಡಲ 8, ಶ್ಲೋಕ 30, ಋಕ್ 2ರಲ್ಲಿ ಹೇಳಿದೆ: "ರಿಪು ಭಯಂಕರವಾದ ದೇವತೆಗಳೇ, ಮನುವಿಗೆ ಯಜನೀಯರಾದ ನೀವು ಮೂವತ್ತಮೂರು ಮಂದಿಯೂ ಈ ರೀತಿ ಸ್ತುತಿಸಲ್ಪಡುತ್ತೀರಿ."

ಶ್ರೀ ದಯಾನಂದ ಸರಸ್ವತಿಯವರ ಅಭಿಪ್ರಾಯ. ಅವರು ತನ್ನ ವೇದ ವ್ಯಾಖ್ಯಾನದಲ್ಲಿ ಆ ನಾಮಗಳನ್ನು ಎತ್ತಿ ತೋರಿಸಿರುವರು. ಆದರೆ ದಯಾನಂದ ಸರಸ್ವತಿಯವರು ತೋರಿಸಿದ ನಾಮಗಳು ಯಥಾರ್ಥದಲ್ಲಿ 99 ಮಾತ್ರ ಇರುವುದು. ಶಿವ ನಾಮವನ್ನು ಎರಡು ಬಾರಿ ಉಲ್ಲೇಖಿಸಿರುವುದರಿಂದ ನೂರಾಗಿದೆಯೆಂದು ಮೌ| ಸಯ್ಯದ್ ಹಾಮಿದಲಿಯವರು ತನ್ನ 'ಹಿಂದೂ ಮತ್ ಔರ್ ತೌಹೀದ್' ಎಂಬ ಕೃತಿಯಲ್ಲಿ ಹೇಳಿರುವರು. ಇಸ್ಲಾಮ್ ಧರ್ಮದಲ್ಲಿಯೂ ಅಲ್ಲಾಹನಿಗೆ 99 ನಾಮಗಳಿವೆ."[2]

ದಯಾನಂದಜೀ ಮತ್ತಿತರರ ಪ್ರಸ್ತುತ ವ್ಯಾಖ್ಯಾನವನ್ನು ಋಗ್ವೇದದ ಕೆಲವು ಮಂತ್ರಗಳು ದೃಢಪಡಿಸುತ್ತವೆ. ಉದಾಹರಣೆಗಾಗಿ ಪ್ರಥಮ ಮಂಡಲದ ಒಂದು ಮಂತ್ರದಲ್ಲಿ ಹೀಗಿದೆ:

ಇಂದ್ರಂ ಮಿತ್ರಂ ವರುಣಮಗ್ನಿ ಮಾಹು
ರಥೋ ದಿವ್ಯಸ್ಸುಪರ್ಣೋ ಗರುಣ್ಮಾನ್
ಏಕಂ ಸದ್ವಿಪ್ರಾ ಬಹುಧಾವದ-
ನ್ತ್ಯಗ್ನಿಂ ಯಮಂ ಮಾತರಿಶ್ವಾನ ಮಾಹು.[3]

(ಆತನನ್ನು ಇಂದ್ರನೆಂದೂ ಮಿತ್ರನೆಂದೂ ವರುಣನೆಂದೂ ಅಗ್ನಿಯೆಂದೂ ಕರೆಯುತ್ತಾರೆ. ಆಕಾಶದಲ್ಲಿ ಶೀಘ್ರವಾಗಿ ತೀವ್ರಿಯಿಂದ ಹಾರಾಡುವ ಗರುಡನೂ ಅವನೇ. ವಿದ್ವಾಂಸರು ಒಂದನ್ನು ಹಲವು ಮಾಡಿ ಹೇಳುತ್ತಾರೆ. ವೈದ್ಯುತಾಗ್ನಿ, ಯಮ, ಮಾತರಿಶ್ವ ಎಲ್ಲವೂ ಅವನೇ ಆಗಿದ್ದಾನೆ.)

ಇದರಿಂದ ಏಕೈಕ ಶಕ್ತಿಯನ್ನೇ ಋಷಿವರ್ಯರು ಅನೇಕ ನಾಮಗಳಿಂದ ಕರೆಯುತ್ತಿದ್ದರೆಂದು ವ್ಯಕ್ತವಾಗುತ್ತದೆ. ಏಕದೇವನಿಗೆ ವಿವಿಧ ಗುಣ ಸ್ವಭಾವಗಳಿವೆ. ಅವುಗಳಿಗೆ ಹೊಂದಿಕೊಂಡು ಕವಿಗಳು ಅವನನ್ನು ವಿವಿಧ ರೂಪದಲ್ಲಿ ಕಲ್ಪನೆ ಮಾಡಿದ್ದರು. ಪ್ರತಿಯೊಂದು ಭಾವನೆಗೆ ಬೇರೆ ಬೇರೆ ಹೆಸರುಗಳನ್ನು ನೀಡಿದರು. ಇನ್ನೊಂದು ವೇದ ಮಂತ್ರದಲ್ಲಿ ಈ ರೀತಿ ಹೇಳಲಾಗಿದೆ: 'ಏಕ ಸಂತಂ ಬಹುಧಾ ಕಲ್ಪಯಂತಿ'[4] (ಅಂದರೆ ಯಥಾರ್ಥವಾದ ಒಂದು ಶಕ್ತಿಯನ್ನು(ಕವಿಗಳು) ಹಲವು ವಿಧದಲ್ಲಿ ಕಲ್ಪನೆ ಮಾಡುತ್ತಾರೆ.) ಒಟ್ಟಿನಲ್ಲಿ ನಾಮಗಳಿಗಲ್ಲದೆ ನಾಮಧಾರಿಗೆ ವಿವಿಧತೆಯಿಲ್ಲ. ಅದನ್ನೇ ವೇದವು ಹೇಳಿದೆ. 'ಯೋ ದೇವಾನಾಂ ನಾಮಧಾ ಏಕ ಏವಃ'[5] (ದೇವನಾಮಗಳನ್ನು ಹೊಂದಿದ ಶಕ್ತಿಯು ಒಂದೇ ಆಗಿದೆ) ಈ ಮಂತ್ರಗಳ ಆಧಾರದಲ್ಲಿ ಪ್ರಾಚೀನ ಆರ್ಯರು ಬಹುದೇವವಾದಿಗಳು ಅಥವಾ ಮೂರ್ತಿ ಪೂಜಕರಾಗಿರಲಿಲ್ಲವೆಂದು ನಿರ್ಧರಿಸಬಹುದು. "ಋಗ್ವೇದವು ಯಾವುದೇ ಒಂದು ಮನುಷ್ಯ

2. ಹಿಂದೂಮತ್ ಔರ್ ತೌಹೀದ್(ಹಿಂದೂ ಮತ ಮತ್ತು ಏಕದೇವತ್ವ) ಎಂಬ ಈ ಉರ್ದು ಕಿರು ಹೊತ್ತಗೆಯನ್ನು ಮೌಲಾನಾ ಹಾಮಿದಲಿಯವರು ರಚಿಸಿದ್ದಾರೆ. ಅದರ 67ನೇ ಪುಟದಲ್ಲಿ ಈ ಉಲ್ಲೇಖವಿದೆ.

3. ಋಗ್ವೇದ ಮ. 1, ಶ್ಲೋಕ 164, ಋ. 46.

4. ಅದೇ ಗ್ರಂಥ ಮ. 10, ಶ್ಲೋಕ 114, ಋ. 5.

5. ಅದೇ ಗ್ರಂಥ ಮ. 10, ಶ್ಲೋಕ 82, ಋ. 3.

ದೇವನನ್ನು ಆರಾಧಿಸಲು ಆಜ್ಞಾಪಿಸುವುದಿಲ್ಲ"[6] ಎಂಬ ಸಂಶೋಧಕರ ಅಭಿಪ್ರಾಯವು ಈ ಸಂದರ್ಭದಲ್ಲಿ ಗಮನಾರ್ಹವಾಗಿದೆ.

ಆದಿಯಲ್ಲಿ ಒಂದು ಶಕ್ತಿ(ಸತ್ಯ) ಮಾತ್ರ ಅಸ್ತಿತ್ವದಲ್ಲಿತ್ತು. ಆತನೇ ಅಖಿಲ ಜಗತ್ತಿನ ಹಾಗೂ ಭೂಮಿ-ಆಕಾಶಗಳ ಪರಮಾಧಿಕಾರಿಯಾಗಿ ವರ್ತಿಸಿದನು. ಆತನೇ ಭೂಮಿ-ಆಕಾಶಗಳ ನಿರ್ಮಾತೃ ಮತ್ತು ನಿಯಂತ್ರಕ. ಋಗ್ವೇದದ 10ನೇ ಮಂಡಲದ 121ನೇ ಶ್ಲೋಕದಲ್ಲಿ ಹೀಗೆ ಹೇಳಿದೆ:

"ಹಿರಣ್ಯ ಗರ್ಭ ಸಮವರ್ತ ತಾಗ್ರೇ
ಭೂತಸ್ಯ ಜಾತಃ ಪತಿರೇಕ ಆಸೀತ್
ಸದಾಧಾರ ಪೃಥಿವೀಂ ದ್ಯಾಮುತೇಮಾಂ
ಕಸ್ಮೈ ದೇವಾಯ ಹವಿಷಾ ವಿಧೇಮಾ"[7]

ಸೃಷ್ಟಿಗೆ ಮೊದಲು ಹಿರಣ್ಯ ಗರ್ಭನಾದ ಪರಮೇಶ್ವರನು ಮಾತ್ರ ಈ ಜಗತ್ತಿನ ಪರಮಾಧಿಕಾರಿಯಾಗಿ ವರ್ತಿಸುತ್ತಿದ್ದನು. ಆ ಈಶ್ವರನು ಪೃಥ್ವಿಯಿಂದ ಪ್ರಕಾಶ ಲೋಕದ ವರೆಗೆ ವ್ಯಾಪಿಸಿರುವ ಅಖಿಲ ವಿಶ್ವವನ್ನು ಸೃಷ್ಟಿಸಿ ಆಧರಿಸಿ ನಿಲ್ಲಿಸಿದ್ದಾನೆ. ಸುಖಸ್ವರೂಪಿಯಾದ ಆ ದೇವನನ್ನು ನಾವು ಪೂಜಿಸುತ್ತೇವೆ. ಇತರ ಯಾರನ್ನೂ ಪೂಜಿಸುವುದಿಲ್ಲ.

ಸೃಷ್ಟಿಗೆ ಮೊದಲು ಒಂದು ಶಕ್ತಿಯಿಲ್ಲದೆ ಇನ್ನೇನೂ ಇರಲಿಲ್ಲವೆಂಬುದು ಇಸ್ಲಾಮಿನ ಬೋಧನೆ. ಋಗ್ವೇದವು ಅದನ್ನೇ ಹೇಳುತ್ತದೆ. 'ನಾಸಿದೀಯ' ಶ್ಲೋಕದಲ್ಲಿ ಹೇಳಿರುವುದನ್ನು ನೋಡಿರಿ:

"ನಾ ಸದಾ ಸಿನ್ನೊ ಸದಾಸೀತದಾನೀಂ
ನಾಸೀದ್ರಜೋ ನೋ ವ್ಯೋಮಾ ಪರೋಯತ್
ಕಿಮಾವರೀವಃ ಕುಹ ಕಶ್ಯ ಶರ್ಮ-
ನ್ನಂಭಃ ಕಿಮಾಸಿದ್ ಗಹನಂ ಗಂಭೀರಂ?
ನ ಮೃತ್ಯುರಾಸೀದಮೃತಂ ನ ತರ್ಹಿ
ನ ರಾತ್ರ್ಯಾ ಅಹ್ನ ಆಸೀತ್ ಪ್ರಕೇತಃ
ಆನೀದವಾತಂ ಸ್ವಧಯಾ ತದೇಕಂ
ತಸ್ಮಾಧಾನ್ಯನ್ನ ಪರಃ ಕಿಂಚನಾಸ"[8]

ಈ ಮಂತ್ರಗಳಿಗೆ ದಯಾನಂದ ಸರಸ್ವತಿಯವರು ಹೀಗೆ ಅರ್ಥೈಸಿದ್ದಾರೆ: "ಈ ಕರ್ಮ ಜಗತ್ತು ಇಲ್ಲದೆ ಇದ್ದಾಗ, ಅಂದರೆ ಸೃಷ್ಟಿಗಿಂತ ಮೊದಲು ಶೂನ್ಯ ಆಕಾಶವೂ ಇರಲಿಲ್ಲ. ಈಶ್ವರ ಮತ್ತು ಸೃಷ್ಟಿಯ ಮೂಲ ಕಾರಣ ಮಾತ್ರ ಇತ್ತು. ಹೇಗೆಂದರೆ ಆಕಾಶವೇ ಮೊದಲಾದುವುಗಳು ಸಕ್ರಿಯವಾಗಿರಲಿಲ್ಲ. ಆಗ ಸತ್ ಅಥವಾ ಪ್ರಕೃತಿ ಎಂಬ ಅಸ್ಪಷ್ಟತೆ, ಅರ್ಥಾತ್

6. 'ಋಗ್ವೇದದಲ್ಲಿ' by ವಿ.ವಿ.ಕೆ. ವಾಲತ್ ಪುಟ: 125.
7. ಋಗ್ವೇದ ಮ. 10, ಶ್ಲೋಕ 121, ಋ. 1.
8. ಅದೇ ಗ್ರಂಥ ಮ. 10, ಶ್ಲೋಕ 129, ಋ. 1, 2.

ಸತ್ ಸಂಕೇತವಾದ ಜಗತ್ ಕಾರಣವೂ, ವ್ಯೋಮ ಅಥವಾ ವಿರಾಟ್ ಎಂಬ ಸ್ಥೂಲ ಜಗತ್ತಿನ ಅಸ್ತಿತ್ವ ಸ್ಥಾನವೂ ಇರಲಿಲ್ಲ. ಆದರೆ ಪರಬ್ರಹ್ಮನ ಸಾಮರ್ಥ್ಯವೆಂಬ ಅತಿ ಸೂಕ್ಷ್ಮ ಮತ್ತು ಎಲ್ಲದರ ಮೂಲ ಕಾರಣ ಮಾತ್ರ ಆಗ ಇತ್ತು. ಮಳೆಗಾಲದಲ್ಲಿ, ಮುಂಜಾನೆ ಧೂಮದಂತೆ ತೋರುವ ಸ್ವಲ್ಪ ಜಲದಿಂದ ಭೂಮಿ ಆವರಿಸಲ್ಪಡುವುದಿಲ್ಲ. ನದಿಯಲ್ಲಿ ಪ್ರವಾಹವುಂಟಾಗುವುದಿಲ್ಲ. ಹೀಗಿರುತ್ತಾ ಆ ಜಲವು ಹೇಗೆ ತಾನೇ ಗಹನ ಮತ್ತು ಗಂಭೀರವಾದೀತು? ಆಗುವುದಿಲ್ಲ. ಅಂತೆಯೇ ಯಾವುದೂ ಬ್ರಹ್ಮನನ್ನು ಆವರಿಸುವ ಸಾಮರ್ಥ್ಯವಿರುವವುಗಳಲ್ಲ. ಯಾಕೆಂದರೆ ಅವೆಲ್ಲವೂ ತುಚ್ಛವಾಗಿವೆ. ಈ ಜಗತ್ತೆಲ್ಲವೂ ಈಶ್ವರನ ಸಾಮರ್ಥ್ಯದಿಂದ ಉಂಟಾಗಿದೆ. ಆ ಬ್ರಹ್ಮನಿಗಿಂತ ಗಹನ ಮತ್ತು ಗಂಭೀರವಾದ ಇನ್ನಾವುದಿದೆ? ಯಾವುದೂ ಇಲ್ಲ. ಆದುದರಿಂದ ಆ ಬ್ರಹ್ಮನ ಆವರಣವಾಗಿ ಏನೊಂದೂ ಇಲ್ಲ. ಯಾಕೆಂದರೆ ಬ್ರಹ್ಮನು ಅನಂತ ಮತ್ತು ಜಗತ್ತು ತುಚ್ಛವಾದುದಾಗಿದೆ. ಬ್ರಹ್ಮಸೃಷ್ಟಿಯಾದ ಈ ಜಗತ್ತನ್ನು ಈಶ್ವರನೊಡನೆ ಹೋಲಿಸಿದಾಗ ಅದು ಅತೀ ತುಚ್ಛವಾಗಿದೆ."[9]

ಪ್ರಸ್ತುತ ವಿವರಣೆಗೆ ಕುರ್‌ಆನಿನ ಸೃಷ್ಟಿ ವಿವರಣೆಯೊಡನೆ ಹೆಚ್ಚು ಸಾಮ್ಯವಿದೆಯೆಂದು ಪ್ರತ್ಯೇಕ ಹೇಳಬೇಕಾಗಿಲ್ಲ. ಆದರೆ ಋಗ್ವೇದದ ಕಾಲವು ಕುರ್‌ಆನಿನ ಅವತೀರ್ಣಕ್ಕಿಂತ ಸಾವಿರಾರು ವರ್ಷಗಳ ಹಿಂದೆ ಎಂಬುದನ್ನು ನಾವು ಸ್ಮರಿಸಬೇಕಾಗಿದೆ. ವರುಣನು ಋಗ್ವೇದದಲ್ಲಿ ಕೀರ್ತಿಸಲ್ಪಟ್ಟ ಒಬ್ಬ ದೇವ. ವರುಣನ ಗುಣಮಹಿಮೆಯನ್ನು ವೇದದಲ್ಲಿ ಹೀಗೆ ಹೇಳಿದೆ: "ಇಬ್ಬರು ಪಿಸು ಮಾತನಾಡುವಾಗ ಮೂರನೆಯವನಾದ ವರುಣ ರಾಜನು ಅದನ್ನು ತಿಳಿಯುತ್ತಾನೆ."[10]

ಅಲ್ಲಾಹನ ಪರಿಚಯ ಮಾಡಿಕೊಡಲು ಕುರ್‌ಆನ್ ಕೂಡಾ ಇದೇ ಶೈಲಿಯನ್ನು ಅವಲಂಬಿಸಿದೆ. ಅದರ ಒಂದು ಉದಾಹರಣೆಯನ್ನು ನೋಡಿರಿ:

"ಮೂವರು ಪಿಸುಗುಟ್ಟುವಾಗ ನಾಲ್ಕನೆಯದಾಗಿ ಆತನಿರುವನು. ಐದು ಮಂದಿ ಪಿಸುಗುಟ್ಟುವಾಗ ಆರನೆಯವನಾಗಿ ಆತನಿರುವನು. ಹೆಚ್ಚು ಮಂದಿಯಿರಲಿ ಅಥವಾ ಕಡಿಮೆಯಿರಲಿ. ಅವರೊಂದಿಗೆ ಅವನು ಇಲ್ಲದಿರುವುದಿಲ್ಲ."[11]

ಸಂಕ್ಷಿಪ್ತವಾಗಿ ಹೇಳುವುದಿದ್ದರೆ, ವೇದವು ಏಕದೇವ ಸಿದ್ಧಾಂತವನ್ನು ಲೋಕದ ಮುಂದೆ ಸಮರ್ಪಿಸಿದೆ. ಆದರೆ ಪುರೋಹಿತರ ವ್ಯಾಖ್ಯಾನ ಚಮತ್ಕಾರಗಳು ವೇದಗಳ ಶಿಕ್ಷಣಗಳನ್ನು ಅಪಾರ್ಥಗೊಳಿಸಿದುವು. ತನ್ನಿಮಿತ್ತ ಬ್ರಾಹ್ಮಣ ಮತವು ವಿಗ್ರಹಾರಾಧನೆಯಾಗಿ ಮಾರ್ಪಟ್ಟಿತು. ಲೋಕದ ಇತರ ಮತಗಳ ಸ್ಥಿತಿಯೂ ಹೆಚ್ಚಿನಂಶ ಇದೇ ರೀತಿಯಾಗಿದೆ.

---

9. ದಯಾನಂದ ಸರಸ್ವತಿಯವರ 'ಋಗ್ವೇದಾದಿ ಬಾಷ್ಯಭೂಮಿಕ' ಅನುವಾದ: 'ವೇದ ಪರ್ಯಟನೆ' by ನರೇಂದ್ರ ಭೂಷಣ್ ಪುಟ: 146-147.

10. ವಿಶ್ವದರ್ಶನಗಳು (ಪುಟ: 551) ಎಂಬ ಗ್ರಂಥದಿಂದ ಉದ್ಧೃತ.

11. ಕುರ್‌ಆನ್ 58:7.

ಉಪನಿಷತ್ತುಗಳು ಮತ್ತು ಏಕದೇವ ವಿಶ್ವಾಸ

ಹಿಂದಿನ ಕಾಲದಲ್ಲಿ ಭಾರತದಲ್ಲಿ ಬೆಳೆದು ಬಂದ ಒಂದು ವಿಶಿಷ್ಟ ರೀತಿಯ ಸಾಹಿತ್ಯಗಳ ಸಮೂಹವೇ ಉಪನಿಷತ್ತುಗಳು. ಅತಿ ನಿಗೂಢವಾದ ಬ್ರಹ್ಮ ಜ್ಞಾನಗಳು ಉಪನಿಷತ್ತುಗಳಲ್ಲಿ ಅಡಕವಾಗಿವೆ. ಆದರೆ ಇಸ್ಲಾಮಿನ ತತ್ವಜ್ಞಾನವನ್ನು ಗ್ರಹಿಸಿದವರಿಗೆ ಉಪನಿಷತ್ತುಗಳ ಬ್ರಹ್ಮಜ್ಞಾನವನ್ನು ತಿಳಿದುಕೊಳ್ಳಲು ಹೆಚ್ಚು ಕಷ್ಟವಿಲ್ಲ. ಭಾಷೆ ಮಾತ್ರ ಕಲಿಯಬೇಕು. ನೂರಾರು ಉಪನಿಷತ್ ಕೃತಿಗಳಿವೆ. ಮೊಗಲ್ ಚಕ್ರವರ್ತಿ ಅಕ್ಬರನ ಕಾಲದಲ್ಲಿ ಒಂದು ಹೊಸ ಉಪನಿಷತ್ತು ರಚಿಸಲ್ಪಟ್ಟಿತು. ಅದರ ಹೆಸರು 'ಅಲ್ಲೋಪನಿಷತ್' ಅಲ್ಲಾಹನ ಹೆಸರಿನಲ್ಲಿ ಅಸ್ತಿತ್ವಕ್ಕೆ ಬಂದ ಈ ಉಪನಿಷತ್ತು ಹಿಂದೂಗಳಿಗೆ ಸ್ವೀಕಾರಾರ್ಹವೆಂದು ತೋರುವುದಿಲ್ಲ. ಆದರೆ ಅವರಿಗೆ ಸ್ವೀಕಾರಾರ್ಹವಾದ ಅನೇಕ ಪ್ರಾಮಾಣಿಕ ಉಪನಿಷತ್ತುಗಳಿವೆ. ಅವುಗಳಲ್ಲಿ ಹದಿಮೂರು ಉಪನಿಷತ್ತುಗಳು ವಿಶ್ವಾಸ ಯೋಗ್ಯವಾಗಿವೆ. ಅವುಗಳಲ್ಲಿ ಹೆಚ್ಚಿನ ಉಪನಿಷತ್ತುಗಳಿಗೆ ಶ್ರೀ ಶಂಕರಾಚಾರ್ಯರು ವ್ಯಾಖ್ಯಾನವನ್ನು ಬರೆದಿರುವರು. ಈಶಾವಾಸ್ಯ, ಛಾಂದೋಗ್ಯ, ಬೃಹದಾರಣ್ಯಕ, ಐತರೇಯ, ತೈತಿರೀಯ, ಪ್ರಶ್ನ, ಕೇನ, ಕಠ, ಮುಂಡಕ, ಮಾಂಡೂಕ್ಯ, ಕೌಷೀತಕಿ, ಮೈತ್ರಿ, ಶ್ವೇತಾಶ್ವತರ ಎಂದು ಅವುಗಳನ್ನು ಕರೆಯಲಾಗುತ್ತದೆ.

ಉಪನಿಷತ್ತುಗಳು ಮಾನವನ ಇಹಲೋಕ ಜೀವನವನ್ನು ನಿರುತ್ತೇಜಿಸುವುದಿಲ್ಲ. ಆತನನ್ನು ಕೇವಲ ಒಂದು ಆಧ್ಯಾತ್ಮಿಕ ಜೀವಿಯನ್ನಾಗಿಯೂ ಮಾಡುವುದಿಲ್ಲ. ಅನೇಕ ಕ್ಷತ್ರಿಯ ರಾಜರು ಉಪನಿಷತ್ ಜ್ಞಾನದ ಪಂಡಿತರಾಗಿದ್ದರು. ಉದಾಹರಣೆಗಾಗಿ, ಪ್ರವಾಹಣ ಜೈವಲಿ, ಅಜಾತ ಶತ್ರು, ಜನಕ ಮತ್ತು ಅಶ್ವಪತಿ ಮೊದಲಾದವರು. ರಾಜರು ಬಳಸುತ್ತಿದ್ದ ಈ ವಿದ್ಯೆಯು ಜನರನ್ನು ಐಹಿಕ ಜೀವನದಿಂದ ದೂರ ಮಾಡಲು ಶಕ್ತವಲ್ಲವೆಂಬುದು ಸ್ವಯಂ ವ್ಯಕ್ತವಾಗುತ್ತದೆ. ಈ ಲೋಕದಲ್ಲಿ ದೀರ್ಘಕಾಲ ಬಾಳಲು ಆಶೆಪಡಬೇಕೆಂದೇ ಉಪನಿಷತ್ತುಗಳು ಉಪದೇಶಿಸುತ್ತವೆ. ಈಶೋಪನಿಷತ್ತಿನಲ್ಲಿ ಹೀಗೆ ಹೇಳಿದೆ: "ಕರ್ಮಣ್ಣೇ ವೇಹ ಕರ್ಮಾಣಿ ಜಿ ಜೀವಿಷೇಚ್ಛತಂ ಸಮಾಃ"[12] (ಸತ್ಕರ್ಮ ಮಾಡುತ್ತಾ ಇಹಲೋಕದಲ್ಲಿ ನೂರು ವರ್ಷ ಜೀವಿಸಲು ಆಗ್ರಹಿಸಿರಿ.)

ಇಸ್ಲಾಮಿನಲ್ಲಿ ಜೀವನ ತತ್ವವು ಇದೇ ರೀತಿ ಇದೆ. ಉದಾ: "ನೀನು ಸದಾ ಜೀವಿಸುತ್ತೀ ಎಂಬ ಭಾವನೆಯಿಂದ ನಿನ್ನ ಐಹಿಕ ಜೀವನದ ಒಳಿತಿಗಾಗಿಯೂ ನಾಳೆಯೇ ಮರಣ ಹೊಂದುತ್ತೀ ಎಂಬ ಭಾವನೆಯಿಂದ ನಿನ್ನ ಪರಲೋಕ ಮೋಕ್ಷಕ್ಕಾಗಿಯೂ ಸತ್ಕರ್ಮ ಮಾಡುತ್ತಿರು" "ಸತ್ಕರ್ಮಗಳನ್ನು ಮಾಡುತ್ತಾ ದೀರ್ಘಕಾಲ ಬದುಕುವ ಮನುಷ್ಯನೇ ಅತ್ಯುತ್ತಮನು" ಎಂಬುದಾಗಿ ಪ್ರವಾದಿವರ್ಯರೂ ಹೇಳಿದ್ದಾರೆ.[13] ಈಶೋಪನಿಷತ್ತಿನ ತತ್ವೋಪದೇಶಗಳನ್ನು ಪ್ರವಾದಿಯವರು ಇನ್ನೊಂದು ಶೈಲಿಯಲ್ಲಿ ಸಮರ್ಪಿಸಿದ್ದಾರೆ.

---

12. ಈಶಾವಾಸ್ಯೋಪನಿಷತ್ ಮಂತ್ರ 2.

13. ಅಬೂಈಸಾ ತಿರ್ಮಿದಿ ತನ್ನ ಸಹೀಹ್‌ನಲ್ಲಿ ಉದ್ಧರಿಸಿರುವುದು ಮತ್ತು ಇಮಾಮ್ ನವವಿಯವರು ತನ್ನ 'ರಿಯಾದುಸ್ಸಾಲಿಹೀನ್ ಬಾಬುಲ್ ಮುಜಾಹದಃದಲ್ಲಿ ಉಲ್ಲೇಖಿಸಿರುವ ಒಂದು ಪ್ರವಾದಿ ವಚನ. ರಿಯಾದುಸ್ಸಾಲಿಹೀನ್ ಪುಟ: 68

ನಾವು ಉಪನಿಷತ್ತುಗಳ ಏಕದೇವತ್ವ ದರ್ಶನದ ಕುರಿತು ಆಲೋಚಿಸೋಣ. ಉಪನಿಷತ್ತುಗಳು ಏಕದೇವನನ್ನು ಬ್ರಹ್ಮ, ಪರಬ್ರಹ್ಮ, ಪರಮಾತ್ಮ ಮೊದಲಾದ ಹೆಸರುಗಳಿಂದ ಕರೆಯುತ್ತವೆ. ಇಸ್ಲಾಮಿನ ಏಕದೇವನ ಗುಣವಿಶೇಷತೆಗಳೆಲ್ಲವನ್ನೂ ಬ್ರಹ್ಮವೆಂಬ ಶಬ್ದವು ಒಳಗೊಂಡಿದೆ. "ಅವನಿಗೆ ಸಮಾನವಾಗಿ ಯಾವುದೂ ಇಲ್ಲ"[14] "ಯಾರೂ ಆತನಿಗೆ ಸಮಾನರಿಲ್ಲ"[15]ಎಂದು ಕುರ್‌ಆನ್ ಏಕದೇವನನ್ನು ಪರಿಚಯಗೊಳಿಸುತ್ತದೆ. ಅಂದರೆ ದೇವನ ಅಸ್ತಿತ್ವವು ಮಾನವನ ಬಾಹ್ಯ ಮತ್ತು ಅಂತರ್ ಇಂದ್ರಿಯಗಳಿಗೆ ಗ್ರಾಹ್ಯವಾಗದ ವಿಷಯ ವೆಂದರ್ಥ. ಇದನ್ನೇ ಉಪನಿಷತ್ತುಗಳೂ ನಮಗೆ ತಿಳಿಸುತ್ತವೆ. ಕೇನೋಪನಿಷತ್ತಿನಲ್ಲಿ ಹೇಳಿರುವುದನ್ನು ನೋಡಿರಿ:

"ನ ತತ್ರ ಚಕ್ಷುರ್ಗಚ್ಛತಿ ನ ವಾಗಚ್ಛತಿ ನೋ ಮನಃ
ನ ವಿದ್‌ಮೋ ನ ವಿಜಾನೀಮೋ ಯೆಥೈ ತದನುಶಿಷ್ಯಾತ್
ಅನ್ಯ ದೇವ ತದ್ವಿದಿತಾದಥೊ ಅವಿಗಿತಾದಧಿ
ಇತಿ ಶುಶ್ರುಮ ಪೂರ್ವೇಷಾಂ ಯೇ ನಸ್ತದ್ವ್ಯಾಚ ಚಕ್ಷಿರೇ."[16]

(ನೇತ್ರಾದಿ ಇಂದ್ರಿಯಗಳಿಗೋ ಮಾತಿಗೋ ಮನಸ್ಸಿಗೋ ಆ ಬ್ರಹ್ಮವನ್ನು ಸಿದ್ಧಿಸಲು ಸಾಧ್ಯವಿಲ್ಲ. ಅದು ಹೇಗಿರುವುದೆಂದು ನಮಗೆ ತಿಳಿಯುವುದಿಲ್ಲ. ಅದನ್ನು ಹೇಗೆ ತಿಳಿಯ ಪಡಿಸುವುದೆಂದೂ ನಮಗೆ ತಿಳಿದಿಲ್ಲ. ಬ್ರಹ್ಮವು ತಿಳಿದ ಮತ್ತು ತಿಳಿಯದುದರಿಂದಲೂ ಭಿನ್ನವಾಗಿರುವುದು. ಅದನ್ನು ವ್ಯಾಖ್ಯಾನಿಸಿದ ಪಂಡಿತರಿಂದ ಈ ರೀತಿಯಲ್ಲಿಯೇ ನಾವು ಆಲಿಸಿರುವೆವು.)

ಆತ್ಮಜ್ಞಾನಿಯಾದ ಅಬೂಬಕರ್ ಸಿದ್ದೀಕ್‌ರವರು(ರ) ದೇವಾಸ್ತಿತ್ವದ ಅನಿರ್ವಚನೀಯತೆಯನ್ನು ಈ ಕೆಳಗಿನ ಮಾತುಗಳಲ್ಲಿ ವಿವರಿಸಿರುವರು.

"ಅವನನ್ನು ಅರಿತಿಲ್ಲವೆಂದು ಅರಿಯುವುದೇ ನಿಜವಾದ ಜ್ಞಾನ"[17]

ಇದೇ ಉದ್ದೇಶವನ್ನು ಕೇನೋಪನಿಷತ್ತಿನಲ್ಲಿ ಈ ರೀತಿ ವಿವರಿಸಲಾಗಿದೆ:

"ಯಸ್ಯಾಮತಂ ತಸ್ಯಮತಂ ಮತಂ ಯಸ್ಯನ ವೇದ ಸಃ
ಅವಿಜ್ಞಾತಂ ವಿಜ್ಞಾತಂ ವಿಜ್ಞಾತಂ ಮವಿಜಾನತಾಂ"[18]

(ಬ್ರಹ್ಮನನ್ನು ತನಗೆ ಅರಿತುಕೊಳ್ಳಲು ಸಾಧ್ಯವಿಲ್ಲವೆಂದು ಅರಿತವನು ಅರಿಯುತ್ತಾನೆ. ಬ್ರಹ್ಮನನ್ನು ಅರಿತೆನೆಂದು ಭಾವಿಸುವವನು ಅರಿಯುವುದಿಲ್ಲ: ಬ್ರಹ್ಮವೆಂಬುದು ಅರಿತಿದೆ ಯೆಂದು ಭಾವಿಸುವವರಿಗೆ ಅರಿಯದ ಮತ್ತು ಅರಿತಿಲ್ಲವೆಂದು ತಿಳಿದವರಿಗೆ ಅರಿತದ್ದೂ ಆಗಿದೆ.)

---

14. ಕುರ್‌ಆನ್, 42:11

15. ಕುರ್‌ಆನ್, 112:4

16. ಕೇನೋಪನಿಷತ್ ಕಾಂಡ 1, ಮಂತ್ರ 3, 4.

17. ಇಮಾಮ್ ಗಝ್ಝಾಲಿಯವರ ಇಹ್ಯಾಉಲೂಮುದ್ದೀನ್ ಭಾಗ -1, ಪುಟ: 362.

18. ಕೇನೋಪನಿಷತ್: ಕಾಂಡ 2, ಮಂತ್ರ 3.

ಬ್ರಹ್ಮನಲ್ಲದೆ ಇನ್ನಾವುದನ್ನೂ ಉಪಾಸನೆ (ಆರಾಧನೆ) ಮಾಡಬೇಡಿರೆಂದೂ ಜನರು ಬ್ರಹ್ಮವೆಂದು ನಿರ್ಧರಿಸಿ ಉಪಾಸನೆ ಮಾಡುವ ಯಾವುದೂ ಯಥಾರ್ಥದಲ್ಲಿ ಬ್ರಹ್ಮವಲ್ಲ ವೆಂದೂ ಕೇನ ಹೇಳುತ್ತದೆ:

"ಯಚ್ಚಕ್ಷುಷಾ ನ ಪಶ್ಯತಿ ಯೇನ ಚಕ್ಷೂಂಷಿ ಪಶ್ಯತಿ
ತದೇವ ಬ್ರಹ್ಮತ್ವಂ ವಿದ್ಧಿನೇದಂ ಯದಿದಮುಪಾಸತೇ"[19]

(ಕಣ್ಣಿನಿಂದ ನೋಡಲಸಾಧ್ಯವಾದ ಆದರೆ ಕಣ್ಣಿಗೆ ದೃಷ್ಟಿಯನ್ನು ನೀಡುವ ಚೇತನವಾವುದೋ ಅದುವೇ ಬ್ರಹ್ಮವೆಂದು ನೀನು ತಿಳಿದಿರು, ಇದುವೇ ಬ್ರಹ್ಮವೆಂದು (ಜನರು) ನಿರ್ಧರಿಸಿ ಉಪಾಸನೆ ಮಾಡುವ ಯಾವುದೂ ಬ್ರಹ್ಮವಲ್ಲವೆಂಬುದು ಖಚಿತ)

ಅಂದರೆ, ಅಜ್ಞಾನಿಗಳು ಬ್ರಹ್ಮವೆಂಬ ಭಾವನೆಯಿಂದ ಹಲವನ್ನು ಆರಾಧಿಸುತ್ತಾರೆ. ಅವು ಬ್ರಹ್ಮವಲ್ಲ, ಬ್ರಹ್ಮನನ್ನು ನಯನೇಂದ್ರಿಯಗಳಿಗೋ ಇತರ ಇಂದ್ರಿಯಗಳಿಗೋ ಸಿದ್ಧಿಸಲು ಸಾಧ್ಯವಿಲ್ಲ. ಆದರೆ ನಯನಾದಿ ಇಂದ್ರಿಯಗಳಿಗೆ ವಸ್ತುಗಳನ್ನು ಸಿದ್ಧಿಸಲು ಸಾಮರ್ಥ್ಯ ನೀಡುವ ಚೈತನ್ಯವೇ ಬ್ರಹ್ಮವಾಗಿದೆ. ಈ ಭಾವನೆಯು ಇಸ್ಲಾಮಿಗೆ ಸ್ವೀಕಾರಾರ್ಹವೆಂಬುದು ನಿರ್ವಿವಾದ ವಿಷಯವಾಗಿದೆ.[20]

ಉಪನಿಷತ್ತುಗಳ ದೇವತ್ವ ನಿರ್ಧಾರವನ್ನು ಗ್ರಹಿಸಿದ ಕೆಲವು ಸೂಫೀವರ್ಯರು ಅದನ್ನು ಪ್ರಚಾರ ಮಾಡಲು ತೋರಿದ ಅತ್ಯುತ್ಸಾಹ ಸೋಜಿಗವಲ್ಲ. ಮೊಗಲ ಸಾಮ್ರಾಟನಾದ ಷಾಜಹಾನನ ಹಿರಿಮಗನೂ ಕಾದಿರಿಯ್ಯಾ ಸೂಫೀ ಪರಂಪರೆಯ ಓರ್ವ ಗುರುವೂ ಆಗಿದ್ದ ಮುಹಮ್ಮದ್ ದಾರಾಶಿಕೂ (ಕ್ರಿ.ಶ. 1615-1659) ಅವರಲ್ಲೊಬ್ಬರಾಗಿದ್ದರು. ದಾರಾಶಿಕೂ ಸುಮಾರು 50 ಉಪನಿಷತ್ತುಗಳನ್ನು ಪರ್ಷಿಯನ್ ಭಾಷೆಗೆ ಅನುವಾದಿಸಿರುವರು. ಆ ಅನುವಾದಗಳಿಂದಾಗಿ ಪಾಶ್ಚಾತ್ಯ ಲೋಕವು ಉಪನಿಷತ್ತುಗಳ ಶಿಕ್ಷಣಗಳ ಕುರಿತು ಪ್ರಥಮವಾಗಿ ತಿಳಿಯುವಂತಾಯಿತು. ಪ್ರಖ್ಯಾತ ವೇದ ವಿದ್ವಾಂಸನಾದ ಮ್ಯಾಕ್ಸ್ ಮುಲ್ಲರ್ "ಪೌರ್ವಾತ್ಯ ಪವಿತ್ರ ಗ್ರಂಥಾವಳಿ" ಎಂಬ ತನ್ನ ಕೃತಿಯಲ್ಲಿ ಆ ಘಟನೆಯನ್ನು ವಿವರಿಸಿರುವುದನ್ನು ನೋಡಿರಿ:

"ಕ್ರಿ.ಶ. 1775ರಲ್ಲಿ ಪರ್ಷಿಯಾವನ್ನು ಆಳುತ್ತಿದ್ದ ಫುವಾದುದ್ದೌಲರ ಅರಮನೆಯಿಂದ ಫ್ರೆಂಚ್ ರೆಸಿಡೆಂಟರಾದ ಯಂ. ಜೆಂಟ್ಲ್ (M. Gentle)ರವರು ದಾರಾಶಿಕೂ ಸಿದ್ಧಪಡಿಸಿದ ಉಪನಿಷತ್ತಿನ ಅನುವಾದಗಳ ಒಂದು ಹಸ್ತಪ್ರತಿಯನ್ನು ದೊರಕಿಸಿಕೊಂಡರು. ಅದನ್ನು ಸುಪ್ರಸಿದ್ಧ ಪ್ರವಾಸಿ ಪಂಡಿತ ಅಂಗ್ವಿಟ್ಟಿಲ್ ಡೂಪರ್‌ನಿಗೆ ನೀಡಿದರು. ಬೆರ್ನಿಯರ್(Bernier) ಅದನ್ನು

19. ಅದೇ ಗ್ರಂಥ: ಕಾಂಡ 1, ಮಂತ್ರ 7.

20. ಕುರ್‌ಆನ್ ಹೇಳುತ್ತದೆ: "ಅವನು ದೃಗ್ಗೋಚರನಲ್ಲ; ಆದರೆ ದೃಷ್ಟಿಗಳು ಅವನಿಗೆ ಗೋಚರಗಳಾಗಿವೆ." 6:103

ಫ್ರಾನ್ಸಿಗೆ ಕೊಂಡುಹೋದನು. ಡೂವರ್ ಆ ಉಪನಿಷತ್ತುಗಳನ್ನು ಫ್ರೆಂಚ್ ಮತ್ತು ಲ್ಯಾಟಿನ್ ಭಾಷೆಗಳಿಗೆ ಅನುವಾದಿಸಿದನು. ಲ್ಯಾಟಿನ್ ಭಾಷಾಂತರವು 1801 ಮತ್ತು 1802ನೆಯ ವರ್ಷಗಲ್ಲಿ ಯಥಾಕ್ರಮವಾಗಿ ಎರಡು ಭಾಗಗಳಲ್ಲಿ ಪ್ರಕಾಶನಗೊಂಡಿತು. ಆತನು ಅದಕ್ಕೆ 'ಔಪನಿಖ್ಖತ್' (Oupnekhat) ಎಂದು ಹೆಸರಿಟ್ಟಿದ್ದನು."[21]

ವೈದಿಕ ಕಾಲದ ಮರಣೋತ್ತರ ಜೀವನ ಪ್ರಜ್ಞೆ

ಇಸ್ಲಾಮಿನ ದೃಷ್ಟಿಯಲ್ಲಿ ಪ್ರಮುಖವಾದ ಮೂರು ಮೂಲಭೂತ ತತ್ವಗಳಿವೆ: 1) ತೌಹೀದ್ ಅಥವಾ ಏಕದೇವತ್ವ. 2) ರಿಸಾಲತ್ ಅಥವಾ ಪ್ರವಾದಿ ದೌತ್ಯ. 3) ಆಖಿರತ್ ಅಥವಾ ಮರಣೋತ್ತರ ಜೀವನ ವಿಶ್ವಾಸ. ಹಿಂದೂ ಧರ್ಮದ ದೃಷ್ಟಿಯಲ್ಲಿ ಏಕದೇವತ್ವ ವಿಶ್ವಾಸ ಮತ್ತು ಪ್ರವಾದಿ ದೌತ್ಯದ ವಿಶ್ವಾಸದ ಸ್ಥಿತಿಯನ್ನು ನಾವು ನೋಡಿದೆವು. ಈ ವಿಷಯದಲ್ಲಿ ಇಸ್ಲಾಮ್ ಮತ್ತು ಹಿಂದೂ ಧರ್ಮಗಳಲ್ಲಿ ಪರಸ್ಪರ ಮೂಲಭೂತ ವ್ಯತ್ಯಾಸವಿಲ್ಲವೆಂಬುದೇ ವಾಸ್ತವ. ಇನ್ನು, ಮರಣೋತ್ತರ ಜೀವನದ ಬಗ್ಗೆ ಹಿಂದೂ ಧರ್ಮದ ನಿಲುಮೆ ಏನೆಂಬುದನ್ನು ಪರಿಶೀಲಿಸೋಣ.

ಇಂದಿನ ಹಿಂದೂಗಳು ಪುನರ್ಜನ್ಮದಲ್ಲಿ ವಿಶ್ವಾಸವಿಡುತ್ತಾರೆ. ಅಂದರೆ ಈ ಜನ್ಮದಲ್ಲಿ ಸತ್ಕರ್ಮವನ್ನು ಮಾಡಿದರೆ ಮುಂದಿನ ಜನ್ಮದಲ್ಲಿ ಸುಜಾತನಾಗುತ್ತಾನೆ. ದುಷ್ಕರ್ಮಗಳನ್ನು ಮಾಡಿದರೆ ನಾಯಿ, ಹಂದಿ, ಶೂದ್ರ ಇತ್ಯಾದಿ ಆಗಿ ಜನ್ಮ ತಾಳುತ್ತಾನೆ. ಸತ್ಕರ್ಮ ಮತ್ತು ದುಷ್ಕರ್ಮಗಳ ಫಲವನ್ನು ಇಹದಲ್ಲಿಯೇ ಅನುಭವಿಸಬೇಕು. ಇದು ಪುನರ್ಜನ್ಮ ವಾದದ ತಿರುಳು. ಇದು ಇಸ್ಲಾಮೀ ವಿಚಾರಕ್ಕೆ ಸರಿ ಹೊಂದುವುದಿಲ್ಲವೆಂಬುದು ಖಚಿತ.

ಆದರೆ ವೇದ ಕಾಲದ ಭಾರತೀಯರು ಪುನರ್ಜನ್ಮ ವಿಶ್ವಾಸಿಗಳಾಗಿರಲಿಲ್ಲ. ಪರಂತು ಪರಲೋಕದ ಕರ್ಮಫಲಗಳಲ್ಲಿ, ಸ್ವರ್ಗ ನರಕಗಳಲ್ಲಿ ಅವರಿಗೆ ವಿಶ್ವಾಸವಿತ್ತು. ವೇದಗಳ ಬಗ್ಗೆ ಕೂಲಂಕಷ ಅಧ್ಯಯನ ನಡೆಸಿದ ಭಾರತದ ವಿದ್ವಾಂಸರಾದ ಶ್ರೀ ರಾಹುಲ್ ಸಾಂಕೃತ್ಯಾಯನ್‌ರು ತನ್ನ 'ವಿಶ್ವ ದರ್ಶನಗಳು' ಎಂಬ ಗ್ರಂಥದಲ್ಲಿ ಹೀಗೆ ಹೇಳಿರುವರು:

"ವೇದದ ಋಷಿಗಳು ಈ ಲೋಕದಿಂದ ಭಿನ್ನವಾದ ಇನ್ನೊಂದು ಲೋಕವಿದೆಯೆಂದು ನಂಬಿದ್ದರು. ಸತ್ಕರ್ಮಿಗಳು ಮರಣಾನಂತರ ಅಲ್ಲಿಗೆ ಹೋಗುತ್ತಾರೆ. ಅಲ್ಲಿ ಅವರು ಸುಖವಾಗಿ ಜೀವಿಸುತ್ತಾರೆ. ಕೆಳಗಿರುವ ಪಾತಾಳವು ಅಂಧಕಾರಮಯವಾದ ನರಕ ಲೋಕವಾಗಿದೆ. ದುಷ್ಕರ್ಮಿಗಳು ಅಲ್ಲಿಗೆ ಹೋಗುವರು.... ವೇದ ಕಾಲದ ಋಷಿವರ್ಯರಿಗೆ ಪುನರ್ಜನ್ಮ ವಾದದೊಂದಿಗೆ ಸಂಬಂಧವಿರಲಿಲ್ಲ."[22]

---

21. Sacred Books of East, Vol. 1. Introduction.

22. ವಿಶ್ವದರ್ಶನಗಳು ಪುಟ : 552

ಒಟ್ಟಿನಲ್ಲಿ ಮರಣಾನಂತರ ಜೀವನಕ್ಕೆ ಸಂಬಂಧಿಸಿದಂತೆ ಇಸ್ಲಾಮ್ ಹೇಳಿದ ಅದೇ ವಿಶ್ವಾಸವನ್ನು ವೇದ ಕಾಲದ ಋಷಿಗಳು ಮತ್ತು ಮತಾಚಾರ್ಯರು ಪ್ರಚಾರ ಗೊಳಿಸಿರುವರು. ಆದರೆ ಕಾಲಕ್ರಮೇಣ ಆ ವಿಶ್ವಾಸವು ಪುನರ್ಜನ್ಮ ಸಿದ್ಧಾಂತವಾಗಿ ವ್ಯಾಖ್ಯಾನಿಸಲ್ಪಟ್ಟಿತು. ಮರಣಾನಂತರ ದೊರೆಯಲಿರುವ ಸ್ವರ್ಗ ನರಕಗಳಲ್ಲಿ ಜನರಿಗೆ ನಂಬಿಕೆ ಕಡಿಮೆಯಾದಾಗ ಅಂದಿನ ಧರ್ಮ ಪಂಡಿತರು ಕಂಡು ಹಿಡಿದ ಒಂದು ನೂತನ ಸಿದ್ಧಾಂತವೇ ಪುನರ್ಜನ್ಮ ವಾದವೆಂದು ಸಾಂಕೃತ್ಯಾಯನ್‌ರು ಇನ್ನೊಂದೆಡೆ ಸಮರ್ಥಿಸಿರುವರು.[23] ಈ ಎಲ್ಲಾ ವಿಚಾರ ಗಳಿಂದ ಭಾರತೀಯರ ಪುರಾತನ ಮತ ಸಿದ್ಧಾಂತಗಳಿಗೆ ಮತ್ತು ಇಸ್ಲಾಮೀ ಸಿದ್ಧಾಂತಗಳಿಗೆ ಪರಸ್ಪರ ಗಾಢ ಸಂಬಂಧವಿದೆಯೆಂದು ವ್ಯಕ್ತವಾಗುತ್ತದೆ. ಭಾರತೀಯರಾದ ನಾವಿಂದು ಪರಸ್ಪರ ಹತ್ತಿರ ಬರಲು ಪ್ರಯತ್ನಿಸುತ್ತಿಲ್ಲ. ಆದರೆ ದೌರ್ಭಾಗ್ಯವಶಾತ್ ಪರಸ್ಪರ ಸಂಶಯ ಗಳನ್ನು ಹರಡುತ್ತಿದ್ದೇವೆ. ಹಿಂದೂಗಳು ಮತ್ತು ಮುಸ್ಲಿಮರು ನಿಜವಾದ ಧಾರ್ಮಿಕ ಶಿಕ್ಷಣಗಳಿಗೆ ಮರಳುವುದರಿಂದ ದೇಶದಲ್ಲಿ ಇಂದು ಬೆಳೆಯುತ್ತಿರುವ ಕೋಮು ವಿದ್ವೇಷಗಳನ್ನು ಬಹಳಷ್ಟು ಕಡಿಮೆ ಮಾಡಲು ಸಾಧ್ಯವಿದೆಯೆಂದು ತೋರುತ್ತಿವೆ.

---

23. ಅದೇ ಗ್ರಂಥದ 552ನೆಯ ಪುಟದಲ್ಲಿ ಸಾಂಕೃತ್ಯಾಯನ್ ಹೇಳುತ್ತಾರೆ: "ವಿಮರ್ಶಕರು ಉಂಟಾದಾಗ ಉಪನಿಷತ್ ಕಾಲದ ಧಾರ್ಮಿಕ ನೇತಾರರಿಗೆ ಪುನರ್ಜನ್ಮವಾದವನ್ನು ಆವಿಷ್ಕರಿಸಬೇಕಾಯಿತು. ಇಲ್ಲಿರುವ ಸಾಮಾಜಿಕ ಸಂಕಷ್ಟಗಳು ಪ್ರತಿಯೊಬ್ಬ ಜೀವಿಯೂ ಮರಳಿ ಬಂದು ಅವರವರ ಪಾಪದ ಶಿಕ್ಷೆಯನ್ನು ಅನುಭವಿಸಲಿಕ್ಕೆ ಬೇಕಾಗಿ ಇರುವುದು ಎಂದು ಅವರು ವಾದಿಸಿದರು."

ಗೌತಮ ಬುದ್ಧನ ಧರ್ಮ ಸಂದೇಶ

ಒಂದು ಕಾಲದಲ್ಲಿ ಭಾರತದಲ್ಲಿ ಬಹಳವಾಗಿ ಪ್ರಚಾರ ಪಡೆದಿದ್ದರೂ ಕ್ರಮೇಣ ಪರದೇಶಕ್ಕೆ ರವಾನಿಸಲ್ಪಟ್ಟ ಒಂದು ದಿವ್ಯ ಸಂದೇಶವೇ ಗೌತಮ ಬುದ್ಧನ ಧರ್ಮ ಸಂದೇಶ. ಹೊಸದಾದ ಒಂದು ಧರ್ಮವನ್ನು ಬುದ್ಧನು ಉಪದೇಶಿಸಿರಲಿಲ್ಲ. ಅದಕ್ಕೆ ಬದಲಾಗಿ ಹಿಂದೆ ಹಲವು ಬುದ್ಧರು ಬೋಧಿಸಿದ ಹಾಗೂ ಕಾಲಕ್ರಮೇಣ ಅಳಿದು ಹೋದ ಒಂದು ಸನಾತನ ಧರ್ಮ ಪದ್ಧತಿಯನ್ನು ಪುನರುತ್ಥಾನಗೊಳಿಸಿ ಸುಧಾರಿಸುವ ಕಾರ್ಯವನ್ನು ಮಾತ್ರ ಅವರು ಮಾಡಿದರು. ಈ ಸತ್ಯಾಂಶವನ್ನು ಅವರು ಸ್ಪಷ್ಟವಾಗಿ ಬಹಿರಂಗಪಡಿಸಿರುವರು. ಬೌದ್ಧ ಸಾಹಿತ್ಯಗಳಲ್ಲಿ ಪ್ರಖ್ಯಾತ ಮತ್ತು ಪ್ರಾಮಾಣಿಕ ಗ್ರಂಥವಾದ 'ಸಂಯುಕ್ತ ನಿಕಾಯ'ದಲ್ಲಿ ಬುದ್ಧನ ಹೇಳಿಕೆಯನ್ನು ಉದ್ಧರಿಸಿರುವುದನ್ನು ನೋಡಿರಿ:

"ಒಬ್ಬ ಕಾಡಿನ ಮಧ್ಯದಲ್ಲಿ ದಾರಿ ತಪ್ಪಿದನೆಂದು ಊಹಿಸಿರಿ. ಅಲ್ಲಿ ಅತ್ತಿತ್ತ ಅಲೆಯುತ್ತಿದ್ದಾಗ ಅತಿ ಪ್ರಾಚೀನವಾದ ಒಂದು ಮಾರ್ಗ ಗೋಚರಿಸಿತೆಂದು ಭಾವಿಸಿರಿ. ಹಿಂದಿನ ಕಾಲದಲ್ಲಿ ಹಲವಾರು ಮಂದಿ ಆ ದಾರಿಯ ಮೂಲಕ ಸಂಚರಿಸಿದ್ದರು. ಕಾಡಿನಲ್ಲಿ ಸಿಲುಕಿದ ಆ ಯಾತ್ರಿಕನೂ ಅದೇ ಮಾರ್ಗದಿಂದ ನಡೆದು ಒಂದು ಪುರಾತನ ನಗರವನ್ನು ತಲುಪುತ್ತಾನೆ. ಅಲ್ಲಿ ಮನೋಹರ ಸೌಧಗಳು, ಅದರೊಂದಿಗೆ ಉದ್ಯಾನ ವನಗಳು, ರಾಜಬೀದಿಗಳು ಮತ್ತು ಸರೋವರಗಳೇ ಮೊದಲಾದ ನಾಗರಿಕ ಸವಲತ್ತುಗಳನ್ನು ಕಾಣುತ್ತಾನೆ. ಅನಂತರ ಆತನು ತನ್ನ ಊರಿಗೆ ಮರಳುತ್ತಾನೆ. ಆತನು ಈ ಸಂಶೋಧನೆಯ ಕುರಿತು ಊರಿನವರೊಂದಿಗೂ ಊರ ಮುಖಂಡನೊಂದಿಗೂ ಹೇಳುತ್ತಾನೆ. ಆ ಪ್ರಾಚೀನ ನಗರವನ್ನು ದುರಸ್ತಿಗೊಳಿಸಿ ಜನವಾಸ ಯೋಗ್ಯವನ್ನಾಗಿ ಮಾಡಲು ಪ್ರೋತ್ಸಾಹಿಸುತ್ತಾನೆ. ನಾನು ಕೂಡಾ ಆ ಪಯಣಿಗನಂತೆಯೇ ಆಗಿರುವೆನು. ನಾನು (ಬುದ್ಧದೇವ) ಕೂಡಾ ಪ್ರಾಚೀನವಾದ ಒಂದು ರಕ್ಷಾಮಾರ್ಗ-ಧರ್ಮ ಮಾರ್ಗವನ್ನು ಕಂಡು ಹಿಡಿದಿರುವೆನು. ಹಿಂದಿನ ಕಾಲದ ಬುದ್ಧರೆಲ್ಲರೂ ಸಾಗಿದ ಅದೇ ಮಾರ್ಗದಲ್ಲಿ ಅವರ ಹೆಜ್ಜೆಯನ್ನು ಅನುಗಮಿಸಿ ನಾನು ಜೀವನದ ರಹಸ್ಯಗಳನ್ನು ಗ್ರಹಿಸಿರುವೆನು. ಆದುದರಿಂದ ಆ ರೀತಿಯ ವಿಷಯಗಳನ್ನು ಈಗ ಘೋಷಿಸುತ್ತೇನೆ. ಎಲ್ಲೆಡೆಯೂ ಪಾವನವಾದ ಧಾರ್ಮಿಕ ಜೀವನವನ್ನು ಬೆಳೆಸುವುದೇ ಅವರ ಉದ್ದೇಶ."[1]

ಗೌತಮ ಬುದ್ಧನು ಬೋಧಿಸಿದ ಧರ್ಮಮಾರ್ಗ ಅಥವಾ ಮತವು ಹಿಂದಿನ ಕಾಲದ ಬುದ್ಧರು ಬೋಧಿಸಿದ ಧರ್ಮವೇ ಆಗಿತ್ತೆಂದು ಪ್ರಸ್ತುತ ಮಾತಿನಿಂದ ಖಚಿತವಾಗುತ್ತದೆ.

1. ಶ್ರೀ ಎ.ಜಿ. ಕೃಷ್ಣ ವಾರಿಯರ್ ಬರೆದ 'ಬುದ್ಧ ಮತ' ಪುಟ: 23, 24ರಿಂದ ಉದ್ಧೃತ.

ಅವರು ಬುದ್ಧರೆಂದು ಪ್ರಯೋಗಿಸಿರುವುದು ಇಸ್ಲಾಮಿನ ಸಾಂಕೇತಿಕ ಭಾಷೆಯಲ್ಲಿ ಉಪಯೋಗಿಸಲ್ಪಡುವ ಪ್ರವಾದಿಗಳು ಎಂಬರ್ಥದಲ್ಲಿಯೇ ಆಗಿದೆ. ಬುದ್ಧ ಎಂದರೆ ದಿವ್ಯ ಬೋಧನೆ ದೊರೆತ ವ್ಯಕ್ತಿ ಎಂದರ್ಥ. ಇಂತಹ ವ್ಯಕ್ತಿಗಳನ್ನೇ ಮುಸ್ಲಿಮರು ಪ್ರವಾದಿಗಳೆಂದು ಹೇಳುವುದು. ಬುದ್ಧನಿಗೆ ಅವತಾರದಲ್ಲಿ ವಿಶ್ವಾಸವಿರಲಿಲ್ಲ. ಆದ್ದರಿಂದಲೇ ಆತನು ಆ ಪ್ರಯೋಗವನ್ನು ಸ್ವೀಕರಿಸದೆ ದೋಷರಹಿತವಾದ ಬುದ್ಧ ಎಂಬ ಪದವನ್ನು ಉಪಯೋಗಿಸಿರಬೇಕು. ಅದು ಹೇಗಿದ್ದರೂ ಬುದ್ಧನ ಧರ್ಮ ಪದ್ಧತಿ ಪುರಾತನ ಪ್ರವಾದಿಗಳದ್ದೇ ಆಗಿತ್ತೆಂಬುದರಲ್ಲಿ ಸಂಶಯವಿಲ್ಲ.

ಲೋಕಕ್ಕೆ ಆಗಮಿಸಿದ ಪ್ರವಾದಿಗಳೆಲ್ಲರೂ ಜನಸಮಕ್ಷಮ ಮೂಲಭೂತವಾಗಿ ಒಂದೇ ತರದ ಧರ್ಮ ಸಮರ್ಪಿಸಿರುವರೆಂದು ಕುರ್‌ಆನ್ ವಿವಿಧ ಶೈಲಿಗಳಲ್ಲಿ ಪ್ರಸ್ತಾಪಿಸಿದೆ. ಕುರ್‌ಆನಿನಲ್ಲಿ ಒಂದೆಡೆ ಹೀಗೆ ಹೇಳಿದೆ: "(ಪ್ರವಾದಿಗಳೇ,) ನಿಮ್ಮ ಈ ಸಮುದಾಯವು ಒಂದೇ ಒಂದು ಸಮುದಾಯವಾಗಿದೆ. ನಾನಾದರೋ, ನಿಮ್ಮೆಲ್ಲರ ಪ್ರಭುವಾಗಿದ್ದೇನೆ. ಆದುದರಿಂದ ನನ್ನನ್ನು ಆರಾಧಿಸಿರಿ."[2] ಕುರ್‌ಆನಿನಲ್ಲಿ ಇನ್ನೊಂದೆಡೆ ಹದಿನೆಂಟು ಮಂದಿ ಪೂರ್ವ ಪ್ರವಾದಿಗಳ ಹೆಸರನ್ನು ಪ್ರಸ್ತಾಪಿಸಿದ ಅನಂತರ ಅಲ್ಲಾಹನು ಅಂತ್ಯ ಪ್ರವಾದಿಯವರಿಗೆ ಈ ರೀತಿ ಉಪದೇಶಿಸಿರುವನು: "ಅವರಿಗೆ ಮಾತ್ರವೇ ಅಲ್ಲಾಹನು ಸತ್ಪಥವನ್ನು ತೋರಿಸಿರುವನು. ಆದುದರಿಂದ ಅವರ ಮಾರ್ಗದರ್ಶನವನ್ನು ಅನುಗಮಿಸಿರಿ."[3] ಒಟ್ಟಿನಲ್ಲಿ, ಬುದ್ಧರೆಲ್ಲರೂ ಒಂದೇ ಧರ್ಮ ಪದ್ಧತಿಯನ್ನು ಬೋಧಿಸಿದ್ದರು. ಆ ಪದ್ಧತಿಯನ್ನೇ ತಾನು ನಿರ್ದೇಶಿಸುತ್ತಿರುವೆನೆಂದು ಗೌತಮನು ವಾದಿಸುತ್ತಾನೆ. ಇಸ್ಲಾಮಿನ ದೃಷ್ಟಿಕೋನದಲ್ಲಿ ಈ ವಾದವು ಸರಿಯಾಗಿದೆ.

ಈ ಸಂದರ್ಭದಲ್ಲಿ, ಬುದ್ಧನ ಧರ್ಮಪದ್ಧತಿಯ ಕುರಿತು ಪ್ರಚಾರದಲ್ಲಿರುವ ಕೆಲವು ತಪ್ಪು ತಿಳುವಳಿಕೆಗಳನ್ನು ನೀಗಿಸಬೇಕಾದುದು ಅತ್ಯಗತ್ಯವೆಂದು ತೋರುತ್ತದೆ. ಗೌತಮ ಬುದ್ಧನು ಓರ್ವ ನಾಸ್ತಿಕನಾಗಿದ್ದನೆಂದೂ ಆತನ ಪದ್ಧತಿಯಲ್ಲಿ ಈಶ್ವರ ಅಥವಾ ಆತ್ಮಕ್ಕೆ ಸ್ಥಾನವಿಲ್ಲವೆಂದೂ ಕೆಲವು ಪಾಶ್ಚಾತ್ಯ ಪೌರ್ವಾತ್ಯ ನಿರೂಪಕರು ಆರೋಪಿಸುತ್ತಾರೆ. ಇದು ಸರಿಯಲ್ಲ. ಬುದ್ಧ ಮತದಲ್ಲಿ ಪಾಂಡಿತ್ಯ ಪಡೆದ ಹಲವು ಪ್ರತಿಭಾಶಾಲಿಗಳು ಕೂಡಾ ಈ ಆರೋಪವನ್ನು ನಿರಾಕರಿಸಿರುವರು. ಹೆಚ್ಚು ವಿವರಿಸಲು ಇಲ್ಲಿ ಆಸ್ಪದವಿಲ್ಲ. ಶ್ರೀ ಆನಂದಕುಮಾರ ಸ್ವಾಮಿಯವರು 'ಗೌತಮ ಬುದ್ಧ' ಎಂಬ ತನ್ನ ಕೃತಿಯಲ್ಲಿ ಪ್ರಸಿದ್ಧ ಬೌದ್ಧ ಗ್ರಂಥಗಳ ಆಧಾರದಲ್ಲಿ ಬರೆದಿರುವುದನ್ನು ನೋಡಿರಿ:

"ಇನ್ನೋರ್ವ ಮಹಾ ಪಂಡಿತನು ಪ್ರಾಚೀನ ಬುದ್ಧ ಮತವು ದೇವ, ಆತ್ಮ ಮತ್ತು ನಿತ್ಯತೆಯನ್ನು ನಿರಾಕರಿಸಿದೆ ಹಾಗೂ ಆತ್ಮವಿಲ್ಲವೆಂದು ಬುದ್ಧನು ಬೋಧಿಸಿರುವುದಾಗಿ ಹೆಚ್ಚಿನಂಶ ಸಾರ್ವತ್ರಿಕ ಅಭಿಪ್ರಾಯವಿದೆಯೆಂದೂ ಒತ್ತಿ ಹೇಳಿರುವನು. ಯಥಾರ್ಥದಲ್ಲಿ ಆತನು (ಬುದ್ಧನು) ನಿರಾಕರಿಸಿರುವುದು ಬದಲಾವಣೆಯಾಗುತ್ತಿರುವ ಅಹಂಕಾರವನ್ನು. ಅಂದರೆ, ದೈಹಿಕ

2. ಕುರ್‌ಆನ್, 21:92.

3. ಕುರ್‌ಆನ್, 6:90.

ಮತ್ತು ಮಾನಸಿಕವಾದ ವ್ಯಕ್ತಿತ್ವದ ನಿಜಾವಸ್ಥೆಯನ್ನು. ಇದನ್ನು ಆ ಪಂಡಿತನು ತಿಳಿದುಕೊಳ್ಳಲಿಲ್ಲ. (ಸಂಯುಕ್ತ ನಿಕಾಯ IV 384 F 401, 402, ಉದಾನ 47 ಇತ್ಯಾದಿ ನೋಡಿರಿ.)"[4]

ಶ್ರೀ ಬುದ್ಧನು ಆತ್ಮ ಪ್ರೇರಣೆಯಿಂದ ಕೆಲವು ಕಾಲ ಕಠೋರ ತಪಸ್ಸನ್ನು ಆಚರಿಸಿದನು. ತಪಸ್ಸಿನಿಂದ ಕಾರ್ಯ ಸಿದ್ಧಿ ಆಗುವುದಿಲ್ಲವೆಂದು ಮನಗಂಡಾಗ ಆತನು ಅದನ್ನು ತೊರೆದನು. ಗಂಗಾನದಿಯ ವಾಯುವ್ಯ ಭಾಗದಲ್ಲಿರುವ ಗಯಾ ಎಂಬ ಸ್ಥಳದಲ್ಲಿ ಒಂದು ವೃಕ್ಷದ ಕೆಳಗೆ ಧ್ಯಾನಾಸಕ್ತನಾಗಿದ್ದಾಗ ಆತನಿಗೆ ಜ್ಞಾನೋದಯವಾಯಿತು. ಇನ್ನೊಂದು ರೀತಿಯಲ್ಲಿ ಹೇಳುವುದಿದ್ದರೆ ದಿವ್ಯ ದರ್ಶನವಾಯಿತು. ಅಲ್ಲಿಂದ ಆತನು ಬುದ್ಧನಾದನು. ಆದರೆ ಆತನಿಗೆ ಪ್ರಾರಂಭದಲ್ಲಿ ತನಗೆ ದೊರೆತ ಧರ್ಮವನ್ನು ಅನ್ಯರಿಗೆ ಬೋಧಿಸಲು ಮನಸ್ಸು ಒಪ್ಪಲಿಲ್ಲ. ಆ ಸಂದರ್ಭದಲ್ಲಿ 'ಮಹಾಬ್ರಹ್ಮ'ನು ಪ್ರತ್ಯಕ್ಷನಾಗಿ ಧರ್ಮೋಪದೇಶ ಮಾಡುವಂತೆ ನಿರ್ದೇಶಿಸಿದನು. ಈ ರೀತಿಯಲ್ಲಿ ಬುದ್ಧನು ಧರ್ಮೋಪದೇಶಕ್ಕೆ ತೊಡಗಿದನು. 'ಮಹಾಪದಾನ ಸೂತಖಂಡ' ಎಂಬ ಕೃತಿಯು ಬುದ್ಧನ ಜೀವನ ಚರಿತ್ರೆಯನ್ನು ಪ್ರತಿಪಾದಿಸುತ್ತದೆ. ಆ ಕೃತಿಯಿಂದ ಧರ್ಮಾನಂದ ಕೋಸಂಬಿಯವರು ತನ್ನ 'ಭಗವಾನ್ ಬುದ್ಧ'ದಲ್ಲಿ ಹೇಳಿರುವುದನ್ನು ನೋಡಿರಿ:

ಭಗವಾನ್ ತನ್ನ ಶಿಷ್ಯರಿಗೆ ಹೀಗೆ ತಿಳಿಸುತ್ತಾನೆ: ಎಲೈ ಭಿಕ್ಷುಗಳೇ.... ಕಷ್ಟದಿಂದ ಸಂಪಾದಿಸಿದ ಈ ಧರ್ಮವನ್ನು ಅನ್ಯರಿಗೆ ಹೇಳಬೇಡಿ. ರಾಗ ದ್ವೇಷಗಳಲ್ಲಿ ಮುಳುಗಿರುವ ಜನತೆಗೆ ಈ ಧರ್ಮವು ಸುಗಮವಲ್ಲ. ಪ್ರವಾಹದ ವಿರುದ್ಧ ಈಜುವಂತಹ, ನಿಪುಣ, ಗಂಭೀರ, ದುರ್ದರ್ಷ ಮತ್ತು ಅಣುರೂಪವಾದ ಈ ಧರ್ಮವನ್ನು ಅಂಧಕಾರದಿಂದ ಆವೃತವಾಗಿರುವ ಕಾಮಾಸಕ್ತರಿಗೆ ಬೋಧಿಸಬೇಡಿರಿ. ಭಿಕ್ಷುಗಳೇ, ಅರ್ಹಂತ ಮತ್ತು ಸಮ್ಯಕ್ ಸಂಬುದ್ಧನಾದ ವಿಪಸ್ಸು ಭಗವಾನ್ (ಗೌತಮ ಬುದ್ಧನು) ಈ ರೀತಿ ಆಲೋಚಿಸಿ ಧರ್ಮೋಪದೇಶ ಮಾಡಲಿಚ್ಛಿಸದೆ ಏಕಾಂಗಿ ಯಾಗಿರಲು ನಿರ್ಧರಿಸಿದನು. ಇದನ್ನು ಅರಿತ ಮಹಾಬ್ರಹ್ಮನು ಹೀಗೆ ಆತ್ಮಗತ ಮಾಡಿಕೊಂಡನು, "ಎಚ್ಚರ! ಜಗತ್ತಿಗೆ ನಾಶ ಸಂಭವಿಸಲಿದೆ; ವಿನಾಶ ಸಂಭವಿಸುತ್ತದೆ!! ಏಕೆಂದರೆ ಅರ್ಹಂತ ಮತ್ತು ಸಮ್ಯಕ್ ಸಂಬುದ್ಧನಾದ ವಿಪಸ್ಸಿ ಭಗವಾನ್‌ನ ಮನಸ್ಸು ಧರ್ಮೋಪದೇಶದಲ್ಲಿ ಆಸಕ್ತಿ ತಾಳದೆ ಏಕಾಂಗಿಯಾಗಿರಲು ಬಯಸುತ್ತಿದೆ. ಭಿಕ್ಷುಗಳೇ, ಆಗ ಬಲವಂತನಾದ ಒಬ್ಬನು ತನ್ನ ಮುಚ್ಚಿದ ಕೈಯನ್ನು ತೆರೆಯುವ, ತೆರೆದ ಕೈಯನ್ನು ಮುಚ್ಚುವಷ್ಟು ವೇಗದಲ್ಲಿ ಮಹಾಬ್ರಹ್ಮನು ಬ್ರಹ್ಮಲೋಕ ದಿಂದ ಅಂತರ್ಧಾನನಾಗಿ ಗೌತಮ ಬುದ್ಧನ ಮುಂದೆ ಪ್ರತ್ಯಕ್ಷನಾದನು. ತನ್ನ ಉತ್ತರೀಯವನ್ನು ಒಂದು ತೋಳಿನಲ್ಲಿ ಹಾಕಿ, ಭೂಮಿಯನ್ನು ಸ್ಪರ್ಶಿಸಿ, ಕೈಮುಗಿದು ಭಗವಾನ್‌ನೊಡನೆ ಹೀಗೆ ಪ್ರಾರ್ಥಿಸಿದನು: "ಭಗವಾನ್, ಧರ್ಮೋಪದೇಶ ಮಾಡು! ಸುಗತ, ಧರ್ಮೋಪದೇಶವನ್ನು ಮಾಡು! ಜೀವಿಗಳೆಲ್ಲವೂ ಅಂಧಕಾರದಲ್ಲಿ ಮುಳುಗಿವೆ. ಅವರು ಧರ್ಮೋಪದೇಶ ದೊರೆಯದೆ ನಾಶವಾಗುತ್ತಾರೆ. ಆ ಧರ್ಮವನ್ನು ತಿಳಿಯ ಬಯಸುವವರು ಬಂದು ಸೇರುತ್ತಾರೆ."[5]

4. ಆನಂದ ಕುಮಾರಸ್ವಾಮಿ, ಐ.ಬಿ. ಹಾರ್ನರ್ ವಿರಚಿತ, ಪಂಡಿತ ವಿ.ವಿ. ಶರ್ಮಾ ಅನುವಾದಿಸಿದ 'ಗೌತಮ ಬುದ್ಧ'ದ 23ನೆಯ ಪುಟದಲ್ಲಿ ಉದ್ಧರಿಸಿರುವುದು.

5. ಧರ್ಮಾನಂದ ಕೋಸಂಬಿಯವರು ರಚಿಸಿದ ಮತ್ತು ಪಿ. ಶೇಷಾದ್ರಿ ಅಯ್ಯರ್ ಅನುವಾದಿಸಿದ 'ಭಗವಾನ್ ಬುದ್ಧ' ಎಂಬ ಕೃತಿಯ 454ನೆಯ ಪುಟದಲ್ಲಿ ಉದ್ಧರಿಸಿರುವುದು.

ಈ ನಿರೂಪಣೆಯಲ್ಲಿ ನಿವೇದಕನ ಭಾವನೆಗಳೂ ಸೇರಿರಬಹುದು. ಆದರೆ ಇದರಲ್ಲಿ ಅಡಕವಾಗಿರುವ ಮೂಲ ಉದ್ದೇಶವನ್ನು ನಿರಾಕರಿಸುವಂತಿಲ್ಲ. ವಿಪಸ್ಸಿ ಭಗವಾನ್ ಆದ ಗೌತಮ ಬುದ್ಧನಿಗೆ ಸಿದ್ಧಿಸಿದ ಧರ್ಮದ ಗಾಂಭೀರ್ಯ ಮತ್ತು ಕಾಠಿಣ್ಯವನ್ನು ಅಂದಿನ ಜನರ ಅಜ್ಞಾನ ಮತ್ತು ಅವಗಣನೆಯ ಕಾರಣದಿಂದ ಪ್ರಾರಂಭದಲ್ಲಿ ಅವರಿಗೆ ಬೋಧಿಸುವ ವಿಷಯದಲ್ಲಿ ಆತನಿಗೆ ಮನಃಕ್ಲೇಶ ಉಂಟಾಯಿತು. ಈ ಸಂದರ್ಭದಲ್ಲಿ ಆತನಿಗೆ ದಿವ್ಯದರ್ಶನ ವುಂಟಾಯಿತು. "ಧರ್ಮವನ್ನು ಉಪದೇಶಿಸಲೇಬೇಕು. ಜನರನ್ನು ವಿನಾಶದಿಂದ ರಕ್ಷಿಸಲು ಅದೊಂದೇ ಮಾರ್ಗವಿರುವುದು" ಇದರಿಂದಾಗಿ ಬುದ್ಧನು ಧರ್ಮೋಪದೇಶಕ್ಕೆ ಸಿದ್ಧನಾದನು.

ಪ್ರವಾದಿ ಮುಹಮ್ಮದ್‌ರವರು(ಸ) ಕೂಡಾ ಪ್ರಾರಂಭ ಘಟ್ಟದಲ್ಲಿ ಬುದ್ಧನು ಅನುಭವಿಸಿದಂತಹ ಒಂದು ಸ್ಥಿತಿಯನ್ನು ಎದುರಿಸಬೇಕಾಗಿತ್ತು. ಅವರು ದೇವಸಂದೇಶವನ್ನು ಪ್ರಚಾರ ಮಾಡುವ ಕುರಿತು ಆತಂಕಪಟ್ಟು ಸ್ವಗೃಹಕ್ಕೆ ತೆರಳಿ ಅಲ್ಲಿ ಕಂಬಳಿ ಹೊದ್ದು ಮಲಗಿಕೊಂಡರು. ಆ ಸಂದರ್ಭದಲ್ಲಿ ದೇವನಿಂದ ಈ ರೀತಿ ಆಜ್ಞೆಯುಂಟಾಯಿತು: "ಹೊದ್ದು ಮಲಗಿದವನೇ! ಎದ್ದೇಳು; (ಜನರಲ್ಲಿ ಸತ್ಯವನ್ನು) ಪ್ರಚಾರಗೊಳಿಸು."[6]

ಸಂಕ್ಷಿಪ್ತವಾಗಿ ಹೇಳುವುದಾದರೆ ಗೌತಮ ಬುದ್ಧನು ನಾಸ್ತಿಕನಾಗಿರಲಿಲ್ಲ. ಪ್ರವಾದಿ ಪರಂಪರೆಯ ನಿಷೇಧಿಯೂ ಆಗಿರಲಿಲ್ಲ. ಸಂಪೂರ್ಣ ದೇವವಿಶ್ವಾಸಿ ಮತ್ತು ಪ್ರವಾದಿ ದೌತ್ಯದ ವಿಶ್ವಾಸಿಯಾಗಿದ್ದನು. ಆತನು 'ನಿರ್ವಾಣ'ಕ್ಕೆ ಬೇಕಾಗಿ ಪ್ರಯತ್ನಿಸಲು ಶಿಷ್ಯರನ್ನು ಬೋಧಿಸಿದನು. ಮಾನವ ಜನ್ಮದ ಸಾಕ್ಷಾತ್ ಗುರಿಯನ್ನು ತಲುಪುವುದು ಅಥವಾ ಪ್ರಪಂಚ ದೊಡೆಯನ ಸಂಪ್ರೀತಿಗೆ ಪಾತ್ರವಾಗುವುದೆಂಬುದೇ ಆ ನಿರ್ವಾಣ. ಪ್ರಸ್ತುತ ಗುರಿ ಸಾಧನೆಗಾಗಿ ಬುದ್ಧನು ದೇವಸ್ಮರಣೆ, ಧ್ಯಾನ ಮತ್ತು ಅಷ್ಟಾಂಗ ಮಾರ್ಗಗಳನ್ನು ನಿರ್ದೇಶಿಸಿದನು. ಅಷ್ಟಾಂಗ ಮಾರ್ಗದಲ್ಲಿ ಇಸ್ಲಾಮ್ ಅಂಗೀಕರಿಸದಂತಹ ಹಾಗೂ ಕುರ್‌ಆನ್ ಸುನ್ನತ್‌ಗಳು ಉಪದೇಶಿಸದ ಏನನ್ನೂ ಕಾಣಲು ಸಾಧ್ಯವಾಗುವುದಿಲ್ಲ. ಅಷ್ಟಾಂಗ ಮಾರ್ಗವು ಇಸ್ಲಾಮಿ ಜೀವನ ಕ್ರಮದ ಸಾರಸರ್ವಸ್ವವಾಗಿದೆ. ಆದರೆ ಅನಂತರ ಮಾಡಿದ ವ್ಯಾಖ್ಯಾನ ಕಸರತ್ತುಗಳಿಗೆ ಸಿಲುಕಿ ಅಷ್ಟಾಂಗ ಮಾರ್ಗವು ಅತೀ ಹೆಚ್ಚು ತಪ್ಪು ಧಾರಣೆಗೆ ಒಳಗಾಗಿದೆ.

ಬೌದ್ಧ ಧರ್ಮ ಮತ್ತು ಪರಲೋಕ

ಇನ್ನು ಪರಲೋಕ ಜೀವನದ ಕುರಿತು ಬೌದ್ಧ ಧರ್ಮದ ಶಿಕ್ಷಣವೇನೆಂದು ನೋಡೋಣ. ಮನಸ್ಸಿನ ಅಧಾರ್ಮಿಕ ಆಚಾರಗಳನ್ನು ವಿವರಿಸುತ್ತಾ ಬುದ್ಧನು ಹೀಗೆಂದಿರುವನು:

"ಗೃಹಸ್ಥರೇ, ಮಾನಸಿಕವಾದ ಮೂರು ವಿಧದ ಅಧಾರ್ಮಿಕ ಆಚಾರಗಳು ಯಾವುವು?

1. ಒಬ್ಬ ಮನುಷ್ಯನು ಅನ್ಯರ ಸಂಪತ್ತನ್ನು ಅಪಹರಿಸಲು ಆಲೋಚಿಸುವುದು; ಅನ್ಯರ ಸಂಪತ್ತು ತನಗೆ ದೊರೆಯಬೇಕೆಂದು ಭಾವಿಸುತ್ತಾನೆ. 2. ಅವನು ದ್ವೇಷ ಭಾವನೆಯನ್ನು ಬೆಳೆಸುವುದು. ಆತ ಸಾಯಬೇಕು. ನಾಶವಾಗಬೇಕು ಎಂಬುದಾಗಿ ಆಲೋಚಿಸುತ್ತಾನೆ. 3. ಆತನು

6. ಕುರ್‌ಆನ್, 74:1-2.

ಕಪಟ ದೃಷ್ಟಿಯವನಾಗುವುದು; ದಾನವಿಲ್ಲ, ಧರ್ಮವಿಲ್ಲ. ಸತ್ಕರ್ಮ-ದುಷ್ಕರ್ಮಗಳಿಂದ ಫಲವಿಲ್ಲ, ಈ ಲೋಕವಿಲ್ಲ, ಪರಲೋಕವಿಲ್ಲ ಎಂಬಿತ್ಯಾದಿ ನಾಸ್ತಿಕ ವಿಚಾರವನ್ನು ಮಾಡುತ್ತಾನೆ. ಇವು ಮನಸ್ಸಿನ ಮೂರು ಅಧಾರ್ಮಿಕ ಆಚರಣೆಗಳಾಗಿವೆ."[7]

ಮುಂದುವರಿಯುತ್ತಾ, ಮಾನಸಿಕ ಧರ್ಮಾಚರಣೆಗಳ ಬಗ್ಗೆ ಬುದ್ಧನು ಹೇಳಿರುವುದನ್ನು ನೋಡಿರಿ:

"ಗೃಹಸ್ಥರೇ.... ಗೃಹಸ್ಥರ ಮೂರು ವಿಧದ ಮಾನಸಿಕ ಧರ್ಮಾಚರಣೆಗಳು ಯಾವುವು? ಪರರ ದ್ರವ್ಯದಲ್ಲಿ ಆಸೆ ಪಡದೆ, ಪರರ ದ್ರವ್ಯವನ್ನು ವಶಪಡಿಸಲು ಆಲೋಚಿಸದೆ ಜೀವಿಸುವುದು, ದ್ವೇಷರಹಿತವಾದ ಮನಸ್ಸಿನಿಂದ ಎಲ್ಲ ಜೀವಿಗಳೊಡನೆಯೂ ವೈರವನ್ನು ತೊರೆದು, ಪರಸ್ಪರ ದುಃಖ ಬಾಧೆಯಿಲ್ಲದೆ ಸುಖದಿಂದ ಜೀವಿಸಬೇಕೆಂಬ ಭಾವನೆಯಿಂದ ವರ್ತಿಸುವುದು, ಸಮ್ಯಕ್ ದೃಷ್ಟಿ(ಸರಿಯಾದ ದೃಷ್ಟಿಕೋನ)ಯನ್ನು ಬೆಳೆಸುವುದು, ದಾನ ಧರ್ಮಗಳ ಮತ್ತು ಒಳಿತು-ಕೆಡುಕುಗಳ ಫಲದಲ್ಲಿ ಹಾಗೂ ಇಹ-ಪರಲೋಕಗಳಲ್ಲಿ ವಿಶ್ವಾಸವಿಟ್ಟು ವರ್ತಿಸುವುದು. ಇವೇ ಮೂರು ವಿಧದ ಮಾನಸಿಕ ಧರ್ಮಾಚರಣೆಗಳಾಗಿವೆ" ಮಜ್ಝಿಮನಿಕಾಯ [(ಅಂಕ 41) ಸಾಲೇಯ್ಯಕ ಸುತಂ][8]

ಪ್ರಸ್ತುತ ಮಹಾಪುರುಷನು ಒಳಿತುಗಳನ್ನು ಪಾರಲೌಕಿಕ ಸುಖದುಃಖವಾದ ಕರ್ಮಫಲದೊಂದಿಗೆ ಹೊಂದಿಸಿ ನಿರ್ವಚಿಸಿರುವುದೆಂಬುದನ್ನು ಮೇಲಿನ ಸಾಲುಗಳು ವ್ಯಕ್ತಗೊಳಿಸುತ್ತವೆ. ಕುರ್‌ಆನ್ ಕೂಡಾ ಇದೇ ರೀತಿಯಲ್ಲಿ 'ಮಅರೂಫ್'(ಒಳಿತು) ಮತ್ತು ಮುಂಕರ್(ಕೆಡುಕು)ಗಳನ್ನು ನಿರ್ವಚಿಸಿದೆ. ಐಹಿಕ ಜೀವನದಲ್ಲಿ ಒಂದು ಕಾರ್ಯವು ಲಾಭದಾಯಕವಾಗಿದ್ದರೂ ಪರಲೋಕದಲ್ಲಿ ಅದು ದುಃಖದಾಯಕವಾಗಿದ್ದರೆ ಅದು ಕೆಡುಕಾಗಿದೆ. ಅದೇ ಪ್ರಕಾರ ಐಹಿಕ ಜೀವನದಲ್ಲಿ ಒಂದು ಕಾರ್ಯವು ಎಷ್ಟೇ ನಾಶದಾಯಕವಾಗಿದ್ದರೂ ಪರಲೋಕದಲ್ಲಿ ಅದು ಸುಖದಾಯಕವಾಗಿದ್ದರೆ ಅದು ಒಳಿತು. ಇದು ಇಸ್ಲಾಮ್ ಧರ್ಮದ ವಿಶ್ವಾಸ. ಬೌದ್ಧ ಧರ್ಮದ ಒಳಿತು-ಕೆಡುಕುಗಳ ಪ್ರಜ್ಞೆಯು ಇದೇ ರೀತಿಯಲ್ಲಿದೆಯೆಂಬುದನ್ನು ಪ್ರಸ್ತುತ ವಿವರಣೆಗಳು ಸ್ಪಷ್ಟಪಡಿಸುತ್ತವೆ.

ಮುಸ್ಲಿಮ್ ವಿದ್ವಾಂಸರು ಬರೆದ ಚರಿತ್ರೆ ಗ್ರಂಥಗಳಲ್ಲಿ 'ಗಾದಿಮೂನ್' ಎಂಬ ಪ್ರಾಚೀನ ಪ್ರವಾದಿಯ ಕುರಿತು ಉಲ್ಲೇಖಿಸಿರುವರು. ಆತನ ತತ್ತ್ವೋಪದೇಶಗಳು ಸಂಪೂರ್ಣ ಅಂಗೀಕಾರ ಯೋಗ್ಯವೆಂಬ ನೆಲೆಯಲ್ಲಿ ಅವರು ಉದ್ಧರಿಸಿರುವರು. ಕೆಲವರ ಅಭಿಪ್ರಾಯದಂತೆ ಬೈಬಲ್‌ನಲ್ಲಿ ಶೀಥ್ ಎಂದು ಹೆಸರಿಸಿದ ಪ್ರವಾದಿಯೇ ಈ 'ಗಾದಿಮೂನ್'[9], ಬುದ್ಧನ ನಿಜ ನಾಮಧೇಯವು

7. ಭಗವಾನ್ ಬುದ್ಧ ಪುಟ: 313 ನೋಡಿರಿ.

8. ಅದೇ ಗ್ರಂಥದ ಪುಟ: 315 ನೋಡಿರಿ. ಮೇಲೆ ಹೇಳಿದ ಎರಡು ಪ್ರಸ್ತಾವನೆಗಳನ್ನು ಬುದ್ಧ ಮತದ ಪ್ರಾಮಾಣಿಕ ಗ್ರಂಥವಾದ ಮಜ್ಝಿಮನಿಕಾಯ (ಸಂಖ್ಯೆ: 41) ಸಾಲೇಯ್ಯಕಸುತ್ತದಿಂದ ಕೋಸಂಬಿ ಸ್ವಾಮಿಯವರು ಉದ್ಧರಿಸಿರುವುದಾಗಿದೆ.

9. ಓರ್ವ ಅರಬ್ ಇತಿಹಾಸಕಾರ ಹಾಗೂ ವಿವಿಧ ಮತಗಳ ಶಿಕ್ಷಣಗಳ ಕುರಿತು ಅಧ್ಯಯನ ನಡೆಸಿದ ಮೇಧಾವಿಯಾದ ಮುಹಮ್ಮದುಶಿಹ್ರಸ್ತಾನಿಯವರ 'ಅಲ್‌ಮಿಲಲು ವನ್ನಿಹಲ್' ಭಾಗ - 1, ಪುಟ: 45 ನೋಡಿರಿ.

'ಗೌತಮ' ಎಂದಲ್ಲವೇ? ಗೌತಮ ಮತ್ತು ಗಾದಿಮೂನ್ ಶಬ್ದಗಳ ಉಚ್ಚಾರಣೆಯಲ್ಲಿ ಪರಸ್ಪರ ಸಾಮ್ಯತೆಯಿದೆ. ಆದುದರಿಂದ ಮುಸ್ಲಿಮ್ ವಿದ್ವಾಂಸರು ಸೂಚಿಸಿದ ಪ್ರವಾದಿ ಗಾದಿಮೂನ್‌ರು ಭಾರತೀಯ ಪ್ರವಾದಿಯಾದ ಬುದ್ಧನೇ ಆಗಬಾರದೆಂದಿಲ್ಲ.

ಇದೇ ರೀತಿಯಲ್ಲಿ ಕುರ್‌ಆನಿನಲ್ಲಿ ದುಲ್‌ಕಿಫ್ಲ್ ಎಂಬ ಒಂದು ಪ್ರವಾದಿಯ ಹೆಸರನ್ನು ಕಾಣಬಹುದು. ಸಾಮಾನ್ಯವಾಗಿ ಇಸ್ರಾಈಲ್ ಸಮುದಾಯಕ್ಕೆ ನಿಯುಕ್ತರಾದ ಪ್ರವಾದಿಗಳನ್ನು ಕುರ್‌ಆನ್ ಉಲ್ಲೇಖಿಸಿದೆ. ಆದರೆ ದುಲ್‌ಕಿಫ್ಲ್ ಎಂಬ ಪ್ರವಾದಿಯ ಕುರಿತು ಬೈಬಲ್‌ನಲ್ಲಿ ಯಾವುದೇ ಸೂಚನೆ ದೊರೆಯುವುದಿಲ್ಲ. ಆದುದರಿಂದ ಅವರೊಬ್ಬ ಭಾರತೀಯ ಪ್ರವಾದಿಯಾಗಿರಲೂಬಹುದು. ಕಪಿಲವಸ್ತು ಬುದ್ಧನ ಜನ್ಮಸ್ಥಳ. ದುಲ್‌ಕಿಫ್ಲ್ ಎಂದರೆ ಕಿಫ್ಲ್‌ನವನೆಂದರ್ಥ. ಆದುದರಿಂದ ಕುರ್‌ಆನಿನಲ್ಲಿ ದುಲ್‌ಕಿಫ್ಲ್ ಎಂದು ಹೆಸರಿಸಿರುವುದು ಕಪಿಲವಸ್ತುವಿನ ಪ್ರವಾದಿ ಎಂಬರ್ಥದಲ್ಲಾಗಿರಬಹುದೆಂದು ಊಹಿಸಬಹುದು. ಆಧುನಿಕ ಚರಿತ್ರೆಕಾರರಾದ ಹುಮಾಯೂನ್ ಕಬೀರ್‌ರಂತಹ ಕೆಲವರಿಗೆ ಈ ಅಭಿಪ್ರಾಯವಿದೆ. ಭಾರತೀಯ ಭಾಷೆಯ 'ಪ' ಅರಬಿಯಲ್ಲಿ 'ಫ' ಆಗಿ ಮಾರ್ಪಟ್ಟಿರುವ ಸಾಧ್ಯತೆಯಿದೆ.

ಹಾಗೆಯೇ ಶಾಕ್ಯ ಮುನಿಯು ಓರ್ವ ಪ್ರವಾದಿಯಾಗಿರಬೇಕೆಂಬ ಅಭಿಪ್ರಾಯವನ್ನು ಅಲ್ಲಗಳೆಯುವಂತಿಲ್ಲ. ಎಲ್ಲ ಪ್ರವಾದಿಗಳ ಕಥೆಯನ್ನು ಕುರ್‌ಆನ್ ವಿವರಿಸಿಲ್ಲ. "ಸಂದೇಶವಾಹಕರೇ, ನಾವು ನಿಮಗಿಂತ ಮುಂಚೆ ಅನೇಕ ಸಂದೇಶವಾಹಕರನ್ನು ರವಾನಿಸಿರುತ್ತೇವೆ. ಅವರಲ್ಲಿ ಕೆಲವರ ವೃತ್ತಾಂತವನ್ನು ನಾವು ನಿಮಗೆ ತಿಳಿಸಿದ್ದೇವೆ. ಮತ್ತು ಕೆಲವರ ವೃತ್ತಾಂತಗಳನ್ನು ತಿಳಿಸಿಲ್ಲ."[10] ಎಂದು ಕುರ್‌ಆನ್‌ನಲ್ಲಿ ಅಲ್ಲಾಹನು ಹೇಳಿರುವನು. ಅದೇ ಸಂದರ್ಭದಲ್ಲಿ "ಪ್ರವಾದಿಯವರನ್ನು ನಿಯೋಗಿಸದ ಯಾವುದೇ ಜನಾಂಗವು ಆಗಿ ಹೋಗಿಲ್ಲ"[11]ವೆಂದೂ "ಪ್ರತಿಯೊಂದು ಜನಾಂಗಕ್ಕೂ ದೇವದೂತರಿದ್ದಾರೆಂದೂ"[12] ಅಲ್ಲಾಹನೇ ಕುರ್‌ಆನಿನಲ್ಲಿ ದೃಢಪಡಿಸಿರುವನು.

ಗೌತಮ ಬುದ್ಧನ ಭವಿಷ್ಯ ವಾಣಿ

ಬುದ್ಧನ ಒಂದು ಪ್ರಧಾನ ಭವಿಷ್ಯವಾಣಿಯನ್ನು ಬರೆದು ಈ ಪ್ರಬಂಧವನ್ನು ಕೊನೆಗೊಳಿಸೋಣ. ಬೌದ್ಧ ಗ್ರಂಥಗಳಲ್ಲಿ ಅತ್ಯಂತ ಪ್ರಾಮಾಣಿಕವೆಂದು ಊಹಿಸಲಾದ 'ಸುತ್ತಪಿಟಕ'ದ ಪ್ರಾರಂಭದ ಉಪಕಾಂಡವಾಗಿರುವ 'ದೀರ್ಘ ನಿಕಾಯಂ III', 75-76ರಲ್ಲಿ ಬುದ್ಧನು ಭವಿಷ್ಯ ದರ್ಶನ ಮಾಡಿರುವುದಾಗಿ ಹೇಳಿದೆ:

"ಭಿಕ್ಷುಗಳೇ, ಮನುಷ್ಯ ವಯಸ್ಸು 80,000 ವರ್ಷಗಳಾಗುವ ಸಮಯದಲ್ಲಿ, ಸದಾಚಾರ ಸಂಪನ್ನ, ಸುಗತ, ಲೋಕಜ್ಞಾನಿ, ಅನುಪಮ, ನಿಯಂತ್ರಣದ ಅಗತ್ಯವಿರುವ ಮಾನವರ ಸಾರಥಿ, ದೇವ ಮಾನವ ಗುರು, ಬುದ್ಧ, ಭಗವಾನ್ ಮೊದಲಾದ ವಿಶೇಷತೆಗಳಿರುವ ಭಗವಾನ್

---

10. ಕುರ್‌ಆನ್, 40:78

11. ಕುರ್‌ಆನ್, 35:24

12. ಕುರ್‌ಆನ್, 10:47

ಮೈತ್ರೇಯನು ಅರ್ಹಂತ ಮತ್ತು ಸಮ್ಯಕ್ ಸಂಬುದ್ಧನಾಗಿ ಅವತಾರವಾಗುವನು. ಸದಾಚಾರ ಸಂಪನ್ನ, ಸುಗತ, ಲೋಕಜ್ಞಾನಿ, ಅನುಪಮ, ನಿಯಂತ್ರಣದ ಅಗತ್ಯವಿರುವ ಮಾನವರ ಸಾರಥಿ, ದೇವ ಮಾನವ ಗುರು, ಬುದ್ಧ ಮತ್ತು ಭಗವಾನ್ ಆಗಿ ನಾನು ಈಗ ಅವತಾರವಾಗಿರುವಂತೆ, ತನ್ನ ದಿವ್ಯಜ್ಞಾನದ ಮೂಲಕ ಆತನು ದೇವತೆಗಳಿಂದ, ಪಿಶಾಚಿಗಳಿಂದ, ಬ್ರಹ್ಮಗಳಿಂದ, ಶ್ರಮಣ ಬ್ರಾಹ್ಮಣ ಸೃಷ್ಟಿಗಳಿಂದ ಮತ್ತು ದೇವಮಾನವರಿಂದ ತುಂಬಿದ ಈ ಲೋಕವನ್ನು ತಿಳಿದು (ಇತರರಿಗೆ) ತಿಳಿಯಪಡಿಸುತ್ತಾನೆ. ಇಂದು ನಾನು ನನ್ನ ದಿವ್ಯಜ್ಞಾನದ ಮೂಲಕ ಇವೆಲ್ಲವನ್ನು ತಿಳಿದು ತಿಳಿಯಪಡಿಸುತ್ತಿರುವಂತೆ. ನಾನು ಈಗ ಮಾಡುತ್ತಿರುವಂತೆ ಆತನು ಧರ್ಮವನ್ನು ಬೋಧಿಸುತ್ತಾನೆ. ಮಂಗಳಾರಂಭ. ಮಂಗಳ ಮಧ್ಯಮ ಮತ್ತು ಮಂಗಳಾಂತ್ಯ ವಾದ ಬ್ರಹ್ಮಚರ್ಯೆಯನ್ನು ಧ್ಯೇಯಪೂರ್ವಕ, ಸಂಪೂರ್ಣ ಮತ್ತು ಪವಿತ್ರವಾಗಿ ಆತನು ಬೋಧಿಸುವನು. ಅನೇಕ ಸಹಸ್ರ ಭಿಕ್ಷುಗಳಿರುವ (ಶಿಷ್ಯರು) ಸಂಘವನ್ನು ನಾವಿಂದು ನಡೆಸಿದಂತೆ, ಆತನು ಅನೇಕ ಸಹಸ್ರ ಭಿಕ್ಷುಗಳಿರುವ ಸಂಘವನ್ನು ಮುನ್ನಡೆಸುವನು."[13]

ಗೌತಮ ಬುದ್ಧನು ಭವಿಷ್ಯ ನುಡಿದ ಆ ಮೈತ್ರೇಯನು ಯಾರಾಗಿರಬಹುದು? ಕರುಣೆ ಮತ್ತು ಸ್ನೇಹದ 'ಸಾಕಾರ ಮೂರ್ತಿ'ಯೆಂದು ಪಾಲೀ ಭಾಷೆಯಲ್ಲಿ ಆ ಗುಣ ವಿಶೇಷಣದ ಅರ್ಥ. ಈ ಅರ್ಥದಲ್ಲಿಯೇ ಅಂತ್ಯ ಪ್ರವಾದಿ ಮುಹಮ್ಮದ್‌ರನ್ನು(ಸ) ಅಲ್ಲಾಹನು ಕುರ್‌ಆನಿನಲ್ಲಿ 'ರಹ್ಮತುಲ್ ಲಿಲ್ ಆಲಮೀನ್' ಎಂದು ವರ್ಣಿಸಿರುವನು. ಆದುದರಿಂದಲೇ ತನ್ನಂತೆಯೇ ಧರ್ಮವನ್ನು ಬೋಧಿಸುವ ಒಬ್ಬ ಬುದ್ಧನು ಅವತರಿಸುವನೆಂಬ ಗೌತಮನ ಭವಿಷ್ಯವಾಣಿಯು ಅಂತ್ಯ ಪ್ರವಾದಿಯವರ ಕುರಿತಾಗಿರಲು ಹೆಚ್ಚು ಸಾಧ್ಯತೆಯಿದೆ. ಹಾಗಾದರೆ ಮನುಷ್ಯ ವಯಸ್ಸಿನ 80,000 ವರ್ಷಗಳಾಗುವ ಕಾಲದಲ್ಲಿ ಎಂಬುದರ ಉದ್ದೇಶವೇನೆಂಬ ಪ್ರಶ್ನೆ ಉದ್ಭವಿಸಬಹುದು. ಅಂತ್ಯ ಪ್ರವಾದಿಯವರ(ಸ) ಸಮುದಾಯವು ಅವಸಾನ ಕಾಲದವರೆಗೆ ನೆಲೆ ನಿಲ್ಲುತ್ತದೆಂದು ಪ್ರವಾದಿವರ್ಯರ ಕೆಲವು ವಚನಗಳು ಸೂಚಿಸುತ್ತವೆ.[14] ಪ್ರಸ್ತುತ ವಾಕ್ಯದಲ್ಲಿ ಗೌತಮ ಬುದ್ಧನು ಇದನ್ನೇ ಸೂಚಿಸಿದ್ದಾಗಿರಬೇಕು.

ಬಹಳ ಸಂಕ್ಷಿಪ್ತವಾಗಿ ಈತನಕ ವಿವರಿಸಿದ ವಾಸ್ತವಿಕಾಂಶಗಳನ್ನು ಗ್ರಹಿಸಿದ ಓರ್ವ ವ್ಯಕ್ತಿಯು ಮನದಲ್ಲಿಯೇ ಹೀಗೆ ಹೇಳಿಕೊಂಡರೆ ಅಚ್ಚರಿಯಿಲ್ಲ.

"ಏಕಕುಲ, ಏಕದೇವ..."

---

13. ಗೌತಮ ಬುದ್ಧ ಪುಟ: 89ರಲ್ಲಿ ಉದ್ಧರಿಸಿರುವುದು.

14. ಸೌಬಾನ್ ಎಂಬ ಸಹಾಬಿ (ಪ್ರವಾದಿವರ್ಯರ ಶಿಷ್ಯ)ಯಿಂದ ಇಮಾಮ್ ಮುಸ್ಲಿಮ್ ತನ್ನ ಸಹೀಹ್‌ನಲ್ಲಿ ಉದ್ಧರಿಸಿದ ಒಂದು ಪ್ರವಾದಿ ವಚನದಲ್ಲಿ ಹೀಗೆ ಹೇಳಿದೆ: "ದೇವನ ಅಪ್ಪಣೆ(ಮಹಾ ಪ್ರಳಯ) ಬರುವ ಕಾಲದ ವರೆಗೆ ತನ್ನ ಸಮುದಾಯದಲ್ಲಿ ಒಂದು ವಿಭಾಗವು ಸತ್ಯದಲ್ಲಿ ಪ್ರತ್ಯಕ್ಷವಾಗಿ ನೆಲೆ ನಿಲ್ಲುವವರಾಗಿರುವರು. ಅವರಿಗೆ ವಂಚಕರ ದ್ರೋಹ ಬಾಧಿಸದು."